ಸಂಪುಟ: 06 ಸಂಚಿಕೆ: 229 ಪುಟಗಳು: 08 ಬುಧವಾರ 04 ನವೆಂಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833 9448225696 + 91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ನಮ್ಮ ಪ್ರಯಾಣದ ದಿಕ್ಕು ಒಂದೇ ಆದರೂ ತಲುಪಲಿರುವ ಊರು ಬೇರೆ ಬೇರೆ ಇರಬಹುದು. ಸಿಕ್ಕಷ್ಟು ಸಮಯದಲ್ಲಿಯೇ ಸಹ ಪ್ರಯಾಣಿಕರೊಡನೆ ನಗುನಗುತ್ತ ಸಾಗೋಣ!

ನ.13ಕ್ಕೆ ಪ್ರಧಾನಿ ಮೋದಿಯಿಂದ ನಮ್ಮ ಮೆಟ್ರೋ ಪಿಂಕ್ ಮಾರ್ಗ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಪ್ರಯಾಣಿಕರಿಗೆ ಗುಡ್ ನ್ಯೂಸ್ ಸಿಕ್ಕಿದೆ. ಇದೇ ನವೆಂಬರ್ 13 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮೆಟ್ರೋ ಪಿಂಕ್ ಮಾರ್ಗವನ್ನು ಉದ್ಘಾಟಿಸಲಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಇದು ಅಧಿಕೃತ! ಬೆಂಗಳೂರಿಗೆ ಇದೊಂದು ಐತಿಹಾಸಿಕ ಮೈಲಿಗಲ್ಲು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನವೆಂಬರ್ 13 ರಂದು 'ನಮ್ಮ ಮೆಟ್ರೋ'ದ ಪಿಂಕ್ ಲೈನ್ (ಗುಲಾಬಿ ಮಾರ್ಗ) ಅನ್ನು ಉದ್ಘಾಟಿಸಲಿದ್ದಾರೆ. ಅವರು ತಾವರೆಕೆರೆಯಿಂದ ಐಐಎಂಬಿ-ಬೈಲೇಕಹಳ್ಳಿ ನಿಲ್ದಾಣದವರೆಗೆ ಪ್ರಯಾಣಿಸುವ ಮೂಲಕ ಈ ಸೇವೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಇದರೊಂದಿಗೆ, ಬೆಂಗಳೂರು ಮೆಟ್ರೋ ಜಾಲವು 100 ಕಿ.ಮೀ ಮೈಲಿಗಲ್ಲನ್ನು ದಾಟಿ, ಒಟ್ಟು 103.6 ಕಿ.ಮೀ ಉದ್ದವನ್ನು ತಲುಪಲಿದೆ. ಈ ಮೂಲಕ ದೆಹಲಿಯ ನಂತರ ಭಾರತದ ಎರಡನೇ ಅತಿದೊಡ್ಡ ಮೆಟ್ರೋ ಜಾಲವಾಗಿ ಬೆಂಗಳೂರು ಹೊರಹೊಮ್ಮಲಿದೆ. 2014 ರಲ್ಲಿ, ಬೆಂಗಳೂರಿನಲ್ಲಿ ಕೇವಲ 7 ಕಿ.ಮೀ ಉದ್ದದ ಮೆಟ್ರೋ ಮಾರ್ಗ ಮಾತ್ರ ಕಾರ್ಯನಿರ್ವಹಿಸುತ್ತಿತ್ತು. ಇಂದು ಆ ಜಾಲವು ಸುಮಾರು 15 ಪಟ್ಟು ವಿಸ್ತರಿಸಿದ್ದು, 2014 ರಿಂದೀಚೆಗೆ 96 ಕಿ.ಮೀ ಗೂ ಹೆಚ್ಚು ಮಾರ್ಗ ಸೇರ್ಪಡೆಗೊಂಡಿದೆ. ಪ್ರಧಾನ ಮಂತ್ರಿ ಮೋದಿ ಅವರು ಬೆಂಗಳೂರಿನ ಮೂಲಸೌಕರ್ಯ ಮತ್ತು ಸಂಪರ್ಕ ವ್ಯವಸ್ಥೆಗೆ ನಿರಂತರವಾಗಿ ಸಾಧ್ಯವಾಗಿದೆ.

ದೇಶವಿರೋಧಿ ಶಕ್ತಿಗಳ ವಿರುದ್ಧ ಜಾಗೃತಿ: ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು



ನರೇಂದ್ರ ಮೋದಿಜೀ ಅವರ ಜನಪ್ರಿಯತೆಯನ್ನು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷದವರಿಗೆ ಸಹಿಸಲು ಆಗುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು. ಇಂಥ ದೇಶವಿರೋಧಿ ಶಕ್ತಿಗಳ ವಿರುದ್ಧ ನಾವು ಜಾಗೃತಿ ಮೂಡಿಸುತ್ತಿದ್ದೇವೆ ಎಂದರು.

'ಪ್ರಜಾಪ್ರಭುತ್ವ ಉಳಿಸಿ ಅರಾಜಕತೆ ಅಳಿಸಿ' ಪಾದಯಾತ್ರೆ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಜೀ ಅವರ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿದೆ. ಇಡೀ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಕಾಂಗ್ರೆಸ್ ಪಕ್ಷ ಮತ್ತು ರಾಹುಲ್ ಗಾಂಧಿಯವರು ಹೊರಟಿದ್ದಾರೆ ಎಂದು ಆಕ್ಷೇಪಿಸಿದರು. ಕೇಂದ್ರ ಸರ್ಕಾರ ಬುಡಮೇಲು ಮಾಡಲು ಇವರು ಹೊರಟಿದ್ದಾರೆ. ದೆಹಲಿಯಲ್ಲಿ ಪ್ರತಿಭಟನೆ ಮಾಡಿ ಅರಾಜಕತೆ ಸೃಷ್ಟಿಸುವ ಯತ್ನ ನಡೆದಿದೆ. ಬಾಂಗ್ಲಾ, ಶ್ರೀಲಂಕಾ, ನೇಪಾಳ, ಫ್ರಾನ್ಸ್‌ನಲ್ಲಿ ಅರಾಜಕತೆ ಸೃಷ್ಟಿಸಲು ಇವರು ಯತ್ನಿಸಿದ್ದರು ಎಂದು ದೂರಿದರು. ದೇಶದಲ್ಲಿ ಹಲವು ಬಾರಿ ಎಸ್‌ಐಆರ್ ನಡೆದಿದೆ. ಕಾಂಗ್ರೆಸ್ಸಿನವರಿಗೆ ಎಸ್‌ಐಆರ್, ಇವಿಎಂ ಕುರಿತು ವಿಶ್ವಾಸವಿಲ್ಲ. ಇವರಿಗೆ ಸುಪ್ರೀಂ ಕೋರ್ಟ್ ಬಗ್ಗೆಯೂ ವಿಶ್ವಾಸವಿಲ್ಲ ಎಂದು ಟೀಕಿಸಿದರು. ನಾಳೆ ಚಿತ್ರದುರ್ಗದಲ್ಲಿ ಪಾದಯಾತ್ರೆ ನಡೆಯಲಿದೆ ಎಂದು ಹೇಳಿದರು.

ಕರ್ನಾಟಕ ಸರ್ಕಾರಕ್ಕೆ ಆಂಧ್ರ ಸಿಎಂ ನಾಯ್ಡು ಧನ್ಯವಾದ

• ಉದಯವಾಹಿನಿ, ಬೆಂಗಳೂರು

ಮುರಸು ಚಂಡಮಾರುತದಿಂದ ತತ್ತರಿಸಿರುವ ಆಂಧ್ರಪ್ರದೇಶದಲ್ಲಿ ಪರಿಹಾರ ಮತ್ತು ಪುನರ್ ನಿರ್ಮಾಣ ಕಾರ್ಯಗಳಿಗೆ ಬೆಂಬಲ ನೀಡಿದ್ದಕ್ಕಾಗಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಕರ್ನಾಟಕದ ಮುಖ್ಯಮಂತ್ರಿ ಹಾಗೂ ಕರ್ನಾಟಕದ ಜನತೆಗೆ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಚಂಡಮಾರುತ ಪೀಡಿತ ಪ್ರದೇಶಗಳಿಗೆ ಕರ್ನಾಟಕದಿಂದ ಪರಿಹಾರ ಪಡೆಗಳನ್ನು ರವಾನಿಸುತ್ತಿರುವ ಕುರಿತು ಕರ್ನಾಟಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿದ್ದ ಪೋಸ್ಟ್‌ಗೆ ಚಂದ್ರಬಾಬು ನಾಯ್ಡು ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಎಕ್ಸ್ ಖಾತೆಯಲ್ಲಿ, ''ಚಂಡಮಾರುತದಿಂದ ಹಾನಿಗೊಳಗಾಗಿರುವ ಪ್ರದೇಶಗಳಲ್ಲಿ ಪರಿಹಾರ ಮತ್ತು ಪುನರ್ನಿರ್ಮಾಣ ಕಾರ್ಯಗಳಿಗೆ ಬೆಂಬಲ ನೀಡಲು ನಮ್ಮ ರಾಜ್ಯದ ತಂಡಗಳು ಆಂಧ್ರಪ್ರದೇಶಕ್ಕೆ ತೆರಳುತ್ತಿವೆ'' ಎಂದು ಪೋಸ್ಟ್ ಮಾಡಿದ್ದರು.

ನನ್ನನ್ನೂ ಸೇರಿ 26 ಶಾಸಕರು ರಾಜೀನಾಮೆ ಕೊಡಬೇಕು ಎಂದ ರಾಜಣ್ಣ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಅಲ್ಲೋಲ ಕಲ್ಲೋಲ ಎಬ್ಬಿಸಿರೋ ಸ್ಟಿಂಗ್ ಆಪರೇಷನ್ ವಿಚಾರವೀಗ ಹೈಕಮಾಂಡ್ ಅಂಗಳಕ್ಕೂ ಮುಟ್ಟಿದೆ. ಖುದ್ದು ಸಿದ್ದರಾಮಯ್ಯನವರೇ ರಾಹುಲ್ ಗಾಂಧಿ ಭೇಟಿಯಾಗಿ ಸ್ಟಿಂಗ್ ವಿಚಾರವಾಗಿ ರಾಹುಲ್ ಗಾಂಧಿಗೆ ವರದಿ ನೀಡಿ 45 ನಿಮಿಷ ಚರ್ಚಿಸಿದ್ದಾರೆ. ಸಿದ್ದರಾಮಯ್ಯ ರಾಹುಲ್ ಮುಂದೆ ಬೇಸರ ವ್ಯಕ್ತಪಡಿಸಿರೋ ಬಗ್ಗೆ ಮಾತನಾಡಿರೋ ಕೆ.ಎನ್ ರಾಜಣ್ಣ, ಸಿದ್ದರಾಮಯ್ಯ ಪ್ರಚಾರಕ್ಕೂ ಬರಲ್ಲ ಅಂತಾ ಹೇಳ್ತಿರೋದು ಪಕ್ಷದ ಮೇಲೆ ದುಷ್ಪರಿಣಾಮ ಬಿರುತ್ತೆ ಎಂದಿದ್ದಾರೆ. ಸ್ಟಿಂಗ್ ಆಪರೇಷನ್ ವಿಧಾನ ಪರಿಷತ್ ಚುನಾವಣೆ ಮೇಲೆ ಎಫೆಕ್ಟ್ ಬಿದ್ದಿದೆ. ಪರಿಷತ್ ವ್ಯಾಪ್ತಿಯಲ್ಲಿ ನಾವು ಕಾಂಗ್ರೆಸ್‌ನ 26 ಶಾಸಕರಿದ್ದೇವೆ. ನಾವಿದ್ದು ಸೋತಿದ್ದೇವೆ ಅಂದ್ರೆ 26 ಶಾಸಕರು ರಾಜೀನಾಮೆ ಕೊಡ್ಬೇಕು ಎಂದಿದ್ದಾರೆ.

ಕಾಂಗ್ರೆಸ್‌ನಲ್ಲಿ ಸಂಚಲನ ಸೃಷ್ಟಿಸಿದ್ದು, ಬೇಕಿದ್ರೆ ರಾಜಣ್ಣ ರಾಜೀನಾಮೆ ನೀಡಲಿ ಎಂದು ಸಚಿವ ಹೆಚ್‌ಸಿ ಬಾಲಕೃಷ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಳಮಟ್ಟದಲ್ಲಾಗಲಿ, ಸೂಕ್ತ ತನಿಖೆ ನಡೆದು ಸತ್ಯ ಹೊರಬರಬೇಕು. ಕೃತ್ಯಗಳಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕನ್ನಡಿಗರಿಗೆ ಉದ್ಯೋಗಾವಕಾಶಕ್ಕಾಗಿ ಆರಂಭಿಸಿರುವ ಕರವೇ ಅಭಿಯಾನವನ್ನು ಅವಮಾನಿಸಿದ ತಮಿಳುನಾಡು ಐಪಿಎಸ್ ಅಧಿಕಾರಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಹಮಿಕೊಂಡಿರುವ ಅಭಿಯಾನದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ತಮಿಳುನಾಡು ಕೇಡರ್‌ನ ಐಪಿಎಸ್ ಅಧಿಕಾರಿ ಧನುಷ್ ಕುಮಾರ್ ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಪೋಸ್ಟ್ ಡಿಲೀಟ್ ಮಾಡಿದ್ದಾರೆ. ಕರವೇ ಕಾರ್ಯಕರ್ತರು ನಗರದ ವಿವಿಧ ಐಟಿ ಕಂಪನಿಗಳಿಗೆ ಭೇಟಿ ನೀಡಿ, ಉದ್ಯೋಗಿಗಳ ವಿವರ ಹಾಗೂ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿ ನೀಡುವಂತೆ ಮನವಿ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ.

ಈ ಅಭಿಯಾನದ ಕುರಿತು ಸಾಮಾಜಿಕ ಜಾಲತಾಣದಲ್ಲಿ



ಪ್ರತಿಕ್ರಿಯಿಸಿದ್ದ ಧನುಷ್ ಕುಮಾರ್ ಅವರು, ಕೆಲಸವಿಲ್ಲದವರು ಇತರರು ಕೆಲಸ ಮಾಡುವುದನ್ನು ತಡೆಯುತ್ತಿದ್ದಾರೆ ಎಂಬ ಅರ್ಥದ ಹೇಳಿಕೆ ನೀಡಿದ್ದರು. ಈ ಪೋಸ್ಟ್‌ನ ಸ್ಕ್ರೀನ್‌ಶಾಟ್ ವೈರಲ್ ಆಗುತ್ತಿದ್ದಂತೆ ಕನ್ನಡಿಗರ ಉದ್ಯೋಗ ಹಕ್ಕುಗಳಿಗಾಗಿ ನಡೆಯುತ್ತಿರುವ ಅಭಿಯಾನವನ್ನು ಅವಹೇಳನ ಮಾಡಲಾಗಿದೆ ಎಂಬ ಆಕ್ರೋಶ ವ್ಯಕ್ತವಾಯಿತು.

ಕರವೇ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಐಟಿ ಉದ್ಯಮಿ ಅರುಣ್ ಜಾವಗಲ್ ಅವರು ಅಧಿಕಾರಿ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರನ್ನು ಟ್ಯಾಗ್ ಮಾಡಿ, ನಿಮ್ಮ ಸರ್ಕಾರದ ಉದ್ಯೋಗಿಯಾಗಿರುವ ಅಧಿಕಾರಿಯೊಬ್ಬರು ಕನ್ನಡಿಗರ ನ್ಯಾಯಯುತ ಅಭಿಯಾನದ ವಿರುದ್ಧ ಈ ರೀತಿ ಪ್ರತಿಕ್ರಿಯಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಈ ಬೆಳವಣಿಗೆಯ ಬೆನ್ನಲ್ಲೇ ಅಧಿಕಾರಿ ತಮ್ಮ ಪೋಸ್ಟ್ ಅಳಿಸಿದ್ದಾರೆ. ನೇಮಕಾತಿ ಮಾಹಿತಿ ಕೇಳುವುದೇ ಕೆಲಸಕ್ಕೆ ಅಡ್ಡಿಯೇ ಐಟಿ ಸೇರಿದಂತೆ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ದೊರೆಯುತ್ತಿರುವ ಉದ್ಯೋಗಾವಕಾಶಗಳ ಕುರಿತು ಮಾಹಿತಿ ಸಂಗ್ರಹಿಸುವುದು ಕರವೇಯ ಆಗ್ರಹ ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

ಕಂಪನಿಗಳಲ್ಲಿರುವ ಒಟ್ಟು ಉದ್ಯೋಗಿಗಳ ಸಂಖ್ಯೆ, ಅವರಲ್ಲಿ ಕನ್ನಡಿಗರ ಪ್ರಮಾಣ, ಕಳೆದ ಮೂರು ವರ್ಷಗಳಲ್ಲಿ ನಡೆದ ನೇಮಕಾತಿ, ನೇಮಕಾತಿ ಮಾನದಂಡಗಳು ಹಾಗೂ ಸ್ಥಳೀಯ ಅಭ್ಯರ್ಥಿಗಳಿಗೆ ನೀಡುತ್ತಿರುವ ಅವಕಾಶಗಳ ಕುರಿತು ಸಂಘಟನೆ ಮಾಹಿತಿ ಕೇಳುತ್ತಿದೆ.

ಇತ್ತೀಚೆಗೆ, ಸುಪ್ರೀಂ ಕೋರ್ಟ್ ದೆಹಲಿ - ಎನ್‌ಸಿಆರ್ ಪ್ರದೇಶದಲ್ಲಿ ಪ್ರಮಾಣೀಕೃತ ಹಸಿರು ಪಟಾಕಿಗಳ ಮಾರಾಟಕ್ಕೆ ಅನುಮತಿ ನೀಡಿತ್ತು. ದೆಹಲಿ ಮತ್ತು ಎನ್‌ಸಿಆರ್ ವಲಯದಲ್ಲಿ ಎರಡು ದಿನ ಅಂದರೆ, 7 ಮತ್ತು 8ನೇ ತಾರೀಖಿನಂದು ಎರಡು ಅವಧಿಯಲ್ಲಿ ಬೆಳಗ್ಗೆ 6 ರಿಂದ 7 ಮತ್ತು ಸಂಜೆ 8 ರಿಂದ 10ರವರೆಗೆ ಹಸಿರು ಪಟಾಕಿ ಮಾತ್ರ ಸಿಡಿಸಲು ಅವಕಾಶವಿದೆ. ಉಳಿದ ಸಮಯದಲ್ಲಿ ಯಾವುದೇ ಕಾರಣಕ್ಕೂ ಪಟಾಕಿ ಬಳಕೆ ಮಾಡುವಂತಿಲ್ಲ ಎಂದು ಕೋರ್ಟ್ ಕಟ್ಟುನಿಟ್ಟಿನ ಆದೇಶ ನೀಡಿದೆ.ಅಲ್ಲದೇ, ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳು, ವೃದ್ಧಾಶ್ರಮಗಳು ಮತ್ತು ನಿಗದಿಪಡಿಸಿದ 'ಶಾಂತ ವಲಯ'ಗಳ 300 ಮೀಟರ್ ವ್ಯಾಪ್ತಿಯಲ್ಲಿ ಪಟಾಕಿಗಳನ್ನು ಸಿಡಿಸುವುದನ್ನು ನ್ಯಾಯಪೀಠ ನಿಷೇಧಿಸಿದೆ. ವಿಪರೀತ ಹೊಗೆ ಸೂಸುವ ಹಸಿರಲ್ಲದ ಪಟಾಕಿಗಳ ಮಾರಾಟ ಮಾಡುವಂತಿಲ್ಲ. ದೆಹಲಿ - ಎನ್‌ಸಿಆರ್ ಪ್ರದೇಶದಲ್ಲಿ ಹಸಿರು ಪಟಾಕಿಗಳನ್ನು ಮಾರಾಟ ಮಾಡಲು ನಿಗದಿಪಡಿಸಿದ ಸ್ಥಳಗಳ ಮೇಲೆ ನಿಗಾ ಇಡಲು, ಪೊಲೀಸ್ ಅಧಿಕಾರಿಗಳು ಮತ್ತು ಇತರ ಅಗತ್ಯ ಸಿಬ್ಬಂದಿಯನ್ನು ಒಳಗೊಂಡ ಗಸ್ತು ತಂಡಗಳನ್ನು ರಚಿಸಬೇಕು ಎಂದು ಪೀಠವು ಪೊಲೀಸ್ ಅಧಿಕಾರಿಗಳಿಗೆ ಮತ್ತು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದೆ.

ಪ್ರತಿಭಟನೆ ನಡೆಸುವ ಸ್ಥಳವನ್ನು ಅನಿರ್ದಿಷ್ಟಾವಧಿಗೆ ಆಕ್ರಮಿಸುವಂತಿಲ್ಲ

ಸುಪ್ರೀಂ ಗರಂ

ಕೇಂದ್ರಕ್ಕೆ ಸುಪ್ರೀಂ ನೋಟಿಸ್

ಸುಪ್ರೀಂ ಅಸಮಾಧಾನ

ಸಿಸಿಟಿವಿ ಕಣ್ಗಾವಲು ಮತ್ತು ಖಾಸಗಿತನದ ಹಕ್ಕು ಕುರಿತ ಕಳವಳ

ಪ್ರತಿಭಟನಾ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ ಹಾಗೂ ಪ್ರತಿಭಟನಾಕಾರರ ಮೇಲೆ ಕಣ್ಣಾವಲು ಇರಿಸುವ ಕ್ರಮದ ಬಗ್ಗೆಯೂ ಪೀಠದಲ್ಲಿ ಚರ್ಚೆ ನಡೆಯಿತು. ಸಾರ್ವಜನಿಕ ಸ್ಥಳದಲ್ಲಿ ಪ್ರತಿಭಟಿಸುವವರು ಖಾಸಗಿತನವನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಮತ್ತು ಸಾರ್ವಜನಿಕ ಸುರಕ್ಷತೆಗಾಗಿ ಕ್ಯಾಮೆರಾ ಅಳವಡಿಸಲಾಗಿದೆ ಎಂದು ಸಾಲಿಸಿಟರ್ ಜನರಲ್ ವಾದಿಸಿದರು. ಆದರೆ, ಸಾರ್ವಜನಿಕ ಸ್ಥಳದಲ್ಲಿ ವ್ಯಕ್ತಿಯೊಬ್ಬನ ಹಾಜರಾತಿಯನ್ನು ದಾಖಲಿಸುವುದು ಮತ್ತು ಆ ದೃಶ್ಯಾವಳಿಗಳನ್ನು ಆತನ ಗುರುತು ಪತ್ತೆಹಚ್ಚಲು ಅಥವಾ ಹೆಚ್ಚಿನ ತನಿಖೆಗೆ ಬಳಸುವುದು ಬೇರೆ ಬೇರೆ ವಿಷಯಗಳು ಎಂದು ನ್ಯಾಯಮೂರ್ತಿ ಬಾಗಿ ಅವರು ಅಭಿಪ್ರಾಯಪಟ್ಟರು.

ಪ್ರತಿಭಟನೆಗೆ ಎಲ್ಲರಿಗೂ ಹಕ್ಕಿದೆ, ಆದರೆ ನಿಗದಿತ ಅವಧಿ ಅಗತ್ಯ ಎಂದ ಸಿಜೆಐ

• ಉದಯವಾಹಿನಿ, ದೆಹಲಿ


ಪ್ರತಿಭಟನೆನಡೆಸಲು ನಿಗದಿಪಡಿಸಿರುವ ಸಾರ್ವಜನಿಕ ಸ್ಥಳವನ್ನು ಯಾವುದೇ ಸಂಘಟನೆ ಅನಿರ್ದಿಷ್ಟಾವಧಿಗೆ ಆಕ್ರಮಿಸಿಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ದೆಹಲಿಯ ರಾಮಲೀಲಾ ಮೈದಾನದಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ವಿರುದ್ಧ ಪ್ರತಿಭಟನೆಯಿಂದ ವ್ಯಾಪಾರವಹಿವಾಟಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ವ್ಯಾಪಾರಿಗಳ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ಇಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ಮಾಲ್ಯ ಬಾಗ್ಚಿ ಮತ್ತು ವಿ. ಮೋಹನ ಅವರನ್ನೊಳಗೊಂಡ ಪೀಠದಲ್ಲಿ ನಡೆಯಿತು. ಈ ವೇಳೆ ರೈತರು, ಕಾರ್ಮಿಕರು, ಪತ್ರಕರ್ತರು ಸೇರಿದಂತೆ ಇತರ ಸಂಘಟನೆಗಳಿಗೂ ಪ್ರತಿಭಟನೆ ನಡೆಸುವ ಹಕ್ಕಿದೆ. ಹೀಗಾಗಿ ಪ್ರತಿಭಟನೆಗೆ ನಿಗದಿತ ಸ್ಥಳ ಮತ್ತು ನಿರ್ದಿಷ್ಟ ಅವಧಿಯನ್ನು ನಿಗದಿಪಡಿಸಬೇಕು. 'ಯಾವುದೇ ಸ್ಥಳವನ್ನು ಶಾಶ್ವತವಾಗಿ ಆಕ್ರಮಿಸಿಕೊಳ್ಳಲು ಸಾಧ್ಯವಿಲ್ಲ.

ರೈತರು, ಪತ್ರಕರ್ತರು ಮತ್ತು ಇತರರು ಪ್ರತಿಭಟನೆ ನಡೆಸಲು ಎಲ್ಲಿಗೆ ಹೋಗಬೇಕು. ಪ್ರತಿಯೊಬ್ಬರಿಗೂ ಪ್ರತಿಭಟನೆ ನಡೆಸುವ ಹಕ್ಕಿದೆ. ಆದರೆ ಅದಕ್ಕೆ ನಿಗದಿತ ಸ್ಥಳ ಮತ್ತು ನಿರ್ದಿಷ್ಟ ಅವಧಿ ಇರಬೇಕು ಎಂದು ಸಿಜೆಐ ಅಭಿಪ್ರಾಯಪಟ್ಟರು. ವ್ಯಾಪಾರಿಗಳ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ಪ್ರತಿಭಟನೆಗಳಿಂದ ದೆಹಲಿಯ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಕುಸಿದಿದೆ ಎಂದು ನ್ಯಾಯಪೀಠದ ಗಮನಕ್ಕೆ ತಂದರು. ಪ್ರತಿಭಟನಾ ಸ್ಥಳದ ಸುತ್ತಮುತ್ತ ಸುಮಾರು 50 ಲಕ್ಷ ಜನರು ವಾಸಿಸುತ್ತಿದ್ದಾರೆ.

ಪ್ರತಿಭಟನೆ ಹಿನ್ನೆಲೆಯಲ್ಲಿ ಅಂಗಡಿಗಳು ಮುಚ್ಚಿದ್ದು, ಕನ್ನಾಟ್ ಪ್ಲೇಸ್‌ನಲ್ಲೂ ವ್ಯಾಪಾರ ಚಟುವಟಿಕೆಗಳು ಸ್ಥಗಿತಗೊಂಡಿವೆ ಎಂದು ಅವರು ವಾದಿಸಿದರು.

ವಿಶೇಷವಾಗಿ ಹಬ್ಬದ ಸಂದರ್ಭದಲ್ಲಿ ವ್ಯಾಪಾರ ಕುಸಿದರೆ ವ್ಯಾಪಾರಿಗಳು ಮತ್ತು ಅವರನ್ನೇ ಅವಲಂಬಿಸಿರುವ ಕಾರ್ಮಿಕರಿಗೆ ಭಾರಿ ನಷ್ಟವಾಗಲಿದೆ. ಮುಂದಿನ ಎರಡು ತಿಂಗಳ ಅವಧಿಯಲ್ಲಿ ಪ್ರತಿಭಟನೆ ಮತ್ತು ಧರಣಿಗಳಿಗೆ ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.ವ್ಯಾಪಾರಿಗಳ ಅರ್ಜಿಯನ್ನು ಪರಿಶೀಲಿಸಿದ ನ್ಯಾಯಪೀಠ, ಸಿಇಸಿ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಸಂಘಟನೆಗಳನ್ನೂ ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಸೇರಿಸುವಂತೆ ವ್ಯಾಪಾರಿಗಳ ಸಂಘಟನೆಗಳಿಗೆ ಸೂಚಿಸಿತು. ಪ್ರತಿಭಟನಾ ಸಂಘಟನೆಗಳ ವಾದವನ್ನು ಆಲಿಸದೆ ಈ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ತಿಳಿಸಿತು.



ಹಬ್ಬದ ಋತುವಿನಲ್ಲಿ ಪ್ರತಿಭಟನೆಗಳಿಗೆ ನಿರ್ಬಂಧ ಹೇರಲು ವ್ಯಾಪಾರಿಗಳ ಮನವಿ

ದೆಹಲಿಯ ವ್ಯಾಪಾರಿಗಳ ಸಂಘವನ್ನು ಪ್ರತಿನಿಧಿಸಿದ ಹಿರಿಯ ವಕೀಲ ಮುಕುಲ್ ರೋಹಟ್ಗಿ ಅವರು, ನಿರಂತರ ಪ್ರತಿಭಟನೆಗಳಿಂದ ವಾಣಿಜ್ಯ ಚಟುವಟಿಕೆಗಳಿಗೆ ಭಾರಿ ಹೊಡೆತ ಬಿದ್ದಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು. ಕನ್ನಾಟ್ ಪ್ಲೇಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂಗಡಿಗಳು ಮುಚ್ಚಲ್ಪಟ್ಟಿದ್ದು, ಹಬ್ಬದ ದಿನಗಳಲ್ಲಿ ವ್ಯಾಪಾರವಿಲ್ಲದೆ ವರ್ತಕರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಅವರು ವಾದಿಸಿದರು. ಸುಮಾರು ಐವತ್ತು ಲಕ್ಷ ಜನರು ವಾಸಿಸುವ ಈ ಭಾಗದಲ್ಲಿ ಪ್ರತಿಭಟನೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ ಎಂದ ಅವರು, ಮುಂದಿನ ಎರಡು ತಿಂಗಳ ಕಾಲ ಧರಣಿಗಳಿಗೆ ಸಂಪೂರ್ಣ ನಿರ್ಬಂಧ ಹೇರಬೇಕು ಎಂದು ಮನವಿ ಮಾಡಿದರು. ಮಧ್ಯಪ್ರವೇಶಿಸಿದ ನ್ಯಾಯಪೀಠ, ಪ್ರತಿಭಟನೆ ಆಯೋಜಕರನ್ನು ಈ ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಸೇರಿಸದೆ ಯಾವುದೇ ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿ, ಸಂಘಟಕರಿಗೆ ನೋಟಿಸ್ ನೀಡಲು ಸೂಚಿಸಿತು.

ಪ್ರತಿಭಟನೆಯ ಹಕ್ಕು ಮತ್ತು ಸಾರ್ವಜನಿಕ ಸ್ಥಳಗಳ ಬಳಕೆ ಕುರಿತು ಸುಪ್ರೀಂ ಕೋರ್ಟ್ ಸ್ಪಷ್ಟನೆ

ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುವ ಹಕ್ಕಿನ ಕುರಿತು ಸುದೀರ್ಘ ಚರ್ಚೆ ನಡೆಯಿತು. ಪ್ರತಿಯೊಬ್ಬರಿಗೂ ಪ್ರತಿಭಟನೆ ನಡೆಸುವ ಹಕ್ಕಿದೆ, ಆದರೆ ಅದಕ್ಕೆ ನಿರ್ದಿಷ್ಟ ಸಮಯ ಹಾಗೂ ಅವಧಿಯನ್ನು ನಿಗದಿಪಡಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿಗಳು ಪ್ರತಿಪಾದಿಸಿದರು. ಯಾವುದೇ ಒಂದು ಸಂಘಟನೆ ಅಥವಾ ಗುಂಪು ನಿರ್ದಿಷ್ಟ ಸಾರ್ವಜನಿಕ ಸ್ಥಳವನ್ನು ಅನಿರ್ದಿಷ್ಟಾವಧಿಗೆ ಆಕ್ರಮಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ರೈತರು, ಪತ್ರಕರ್ತರು ಸೇರಿದಂತೆ ಇತರ ಸಮುದಾಯಗಳು ತಮ್ಮ ಧ್ವನಿ ಎತ್ತಲು ಎಲ್ಲಿಗೆ ಹೋಗಬೇಕು ಎಂದು ನ್ಯಾಯಾಲಯ ಪ್ರಶ್ನಿಸಿತು. ಜಂತರ್ ಮಂತರ್‌ನಲ್ಲಿ ಕೇವಲ ಒಂದು ದಿನದ ಅನುಮತಿ ಪಡೆದು 17 ದಿನಗಳ ಕಾಲ ಧರಣಿ ನಡೆಸಲಾಗಿತ್ತು ಮತ್ತು ಸಂಸತ್ತಿನತ್ತ ಮೆರವಣಿಗೆಗೆ ಯತ್ನಿಸಲಾಗಿತ್ತು ಎಂದು ಸಾಲಿಸಿಟರ್ ಜನರಲ್ ಮೆಹ್ತಾ ತಿಳಿಸಿದರೆ, ದೆಹಲಿ ಪೊಲೀಸರೇ ಪ್ರತಿಭಟನಾಕಾರರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎಂದು ವಕೀಲೆ ಮೇನಕಾ ಗುರುಸ್ವಾಮಿ ಪ್ರತ್ಯಾರೋಪ ಮಾಡಿದರು.

ನ್ಯಾಯಪೀಠ ವಿಚಾರಣೆಯ ಪ್ರಸ್ತಾಪ

ಹಬ್ಬದ ಸಂದರ್ಭದಲ್ಲಿ ಪ್ರತಿಭಟನೆಗಳನ್ನು ಸ್ಥಗಿತಗೊಳಿಸುವಂತೆ ವ್ಯಾಪಾರಿಗಳ ಸಂಘಟನೆಗಳು ಸಲ್ಲಿಸಿರುವ ಮನವಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಇತರ ಸಂಬಂಧಪಟ್ಟ ಕಕ್ಷಿದಾರರಿಗೆ ಸುಪ್ರೀಂಕೋರ್ಟ್ ನೋಟಿಸ್ ಜಾರಿಗೊಳಿಸಿದೆ. ದೆಹಲಿಯ ಪ್ರತಿಭಟನೆಗಳಿಗೆ ಸಂಬಂಧಿಸಿದಂತೆ ಸಾಮೂಹಿಕ ಬಂಧನ, ಪೊಲೀಸರ ದೌರ್ಜನ್ಯ, ಮೆಟ್ರೋ ನಿಲ್ದಾಣಗಳ ಬಂದ್ ಹಾಗೂ ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಿದ ಆರೋಪಗಳಿಗೆ ಸಂಬಂಧಿಸಿದ ಅರ್ಜಿಗಳನ್ನೂ ನ್ಯಾಯಪೀಠ ವಿಚಾರಣೆ ನಡೆಸಿತು. ಪ್ರತಿಭಟನೆ ನಡೆಸುವ ಹಕ್ಕು ಮತ್ತು ವ್ಯಾಪಾರ ಮಾಡುವ ಹಕ್ಕು ಎರಡನ್ನೂ ಸಮತೋಲನದಿಂದ ಪರಿಗಣಿಸಬೇಕೆಂಬ ವಿಚಾರವನ್ನು ನ್ಯಾಯಪೀಠ ತನ್ನ ವಿಚಾರಣೆಯಲ್ಲಿ ಪ್ರಸ್ತಾಪಿಸಿದೆ.

ದೆಹಲಿ ವ್ಯಾಪಾರಿಗಳಿಗೆ 10,000 ದಿಂದ 12,000 ಕೋಟಿ ರೂಪಾಯಿಗಳ ಭಾರಿ ನಷ್ಟದ ಭೀತಿ

ಇಂಡಿಯಾ ಒಕ್ಕೂಟದ ರ್‍ಯಾಲಿ ಹಾಗೂ ನಂತರ ಜಾರಿಯಾದ ಸಂಚಾರ ನಿರ್ಬಂಧಗಳಿಂದಾಗಿ ದೆಹಲಿಯ ಸಗಟು ಮಾರುಕಟ್ಟೆಗಳು ಮತ್ತು ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತಗೊಂಡಿದ್ದು, ವ್ಯಾಪಾರಿಗಳು ಸುಮಾರು 10,000 ದಿಂದ 12,000 ಕೋಟಿ ರೂಪಾಯಿಗಳ ವ್ಯವಹಾರ ನಷ್ಟವನ್ನು ಎದುರಿಸುತ್ತಿದ್ದಾರೆ ಎಂದು ಚೇಂಬರ್ ಆಫ್ ಟ್ರೇಡ್ ಅಂಡ್ ಇಂಡಸ್ಟ್ರಿ (ಸಿಟಿಐ) ತಿಳಿಸಿದೆ. ರಾಮ್ ಲೀಲಾ ಮೈದಾನದ ಸುತ್ತಮುತ್ತಲಿನ ಪ್ರಮುಖ ಮಾರುಕಟ್ಟೆಗಳ ಶೇಕಡಾ 80 ರಷ್ಟು ಮಳಿಗೆಗಳು ಮುಚ್ಚಲ್ಪಟ್ಟಿದ್ದವು ಎಂದು ಸಿಟಿಐ ಅಧ್ಯಕ್ಷ ಬ್ರಿಜೇಶ್ ಗೋಯಲ್ ಮಾಹಿತಿ ನೀಡಿದ್ದಾರೆ. ಚಾಂದಿನಿ ಚೌಕ್, ಸದರ್ ಬಜಾರ್, ಖಾರಿ ಬಾವೊಲಿ, ಕರೋಲ್ ಬಾಗ್, ಕನ್ನಾಟ್ ಪ್ಲೇಸ್ ಸೇರಿದಂತೆ ಸುಮಾರು ಮೂರು ಲಕ್ಷಕ್ಕೂ ಅಧಿಕ ಮಳಿಗೆಗಳನ್ನು ಹೊಂದಿರುವ 20ಕ್ಕೂ ಹೆಚ್ಚು ಪ್ರಮುಖ ವಾಣಿಜ್ಯ ಕೇಂದ್ರಗಳ ವಹಿವಾಟು ಈ ಪ್ರತಿಭಟನೆ ಹಾಗೂ ಸಂಚಾರ ದಟ್ಟಣೆಯಿಂದ ತೀವ್ರವಾಗಿ ಕುಸಿದಿದೆ.

ರಾಜ್ಯದಲ್ಲಿ ಸ್ವಂತ ಸೂರು ಇಲ್ಲದ 5 ಲಕ್ಷ ಬಡವರಿಗೆ ಈ ವರ್ಷವೇ ಸೈಟ್ ಹಂಚಿಕೆ : ಸಿಎಂ ಡಿ.ಕೆ. ಶಿವಕುಮಾರ್ ಘೋಷಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸ್ವಂತ ಸೂರು ಇಲ್ಲದ ಬಡವರಿಗಾಗಿ ಪ್ರಸಕ್ತ ವರ್ಷದಲ್ಲೇ 5 ಲಕ್ಷ ಮಂದಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರ ಐತಿಹಾಸಿಕ ತೀರ್ಮಾನ ಕೈಗೊಂಡಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಕಟಿಸಿದ್ದಾರೆ. ಹಿರಿಯೂರು ತಾಲ್ಲೂಕಿನ ಧರ್ಮಪುರ ಗ್ರಾಮದಲ್ಲಿ ಮಂಗಳವಾರ ಏರ್ಪಡಿಸಿದ್ದ ನೂತನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಶಂಕುಸ್ಥಾಪನೆ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿರಿಯೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳ ಮೂಲಕ 2,200 ಕೋಟಿಗೂ ಅಧಿಕ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದರು.

ಸರ್ಕಾರಿ ಜಾಗವಿಲ್ಲದಿದ್ದರೆ ಖಾಸಗಿ ಜಮೀನು ಖರೀದಿ: ಬಡವರ ಸೂರು ಕಲ್ಪಿಸುವ ಯೋಜನೆಗೆ ಒತ್ತು ನೀಡಿದ ಮುಖ್ಯಮಂತ್ರಿಗಳು, ಎಲ್ಲೆಲ್ಲಿ ಸರ್ಕಾರಿ ಜಾಗ ಲಭ್ಯವಿದೆಯೋ ಅಲ್ಲೆಲ್ಲಾ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿ ನಿವೇಶನ ನೀಡಲಾಗುವುದು. ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದರೆ, ಖಾಸಗಿ ಜಮೀನನ್ನು ಸರ್ಕಾರವೇ ಖರೀದಿಸಿ ಪ್ರತಿಯೊಬ್ಬ ಬಡವರಿಗೂ ಸೈಟ್ ಹಾಗೂ ಮನೆ ಒದಗಿಸಲು ಬದ್ಧವಾಗಿದೆ ಎಂದರು. ಮಾಜಿ ಸಚಿವ ಡಿ. ಸುಧಾಕರ್ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದ ಡಿ.ಕೆ. ಶಿವಕುಮಾರ್, ನಾನು ಮಂತ್ರಿಯಾಗದಿದ್ದರೂ ಪರವಾಗಿಲ್ಲ, ನನ್ನ ಆತ್ಮೀಯ ಸ್ನೇಹಿತ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಬೇಕು' ಎಂದು ಸುಧಾಕರ್ ಬಹಿರಂಗವಾಗಿ ಘೋಷಿಸಿದ್ದರು. ಯಾವುದೇ ಜಾತಿ, ಧರ್ಮದ ಭೇದವಿಲ್ಲದೆ ಎಲ್ಲ ವರ್ಗದ ಜನರನ್ನು ಒಟ್ಟಿಗೆ ಕರೆದೊಯ್ಯುವ ಮೂಲಕ ಜನಪರ



ಯೋಜನೆಗಳನ್ನು ತಳಮಟ್ಟಕ್ಕೆ ತಲುಪಿಸುತ್ತಿದ್ದೇನೆ'' ಎಂದರು. ದೇಶದಲ್ಲಿ ಬೆಲೆ ಏರಿಕೆ ಗಗನಕ್ಕೇರುತ್ತಿದ್ದು, ಜನಸಾಮಾನ್ಯರ ಆದಾಯ ಕುಸಿಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ಹೆಣ್ಣು ಮಕ್ಕಳು ಹಾಗೂ ರೈತರ ಬದುಕು ರಕ್ಷಿಸುವುದು ನಮ್ಮ ಆದ್ಯತೆ.

ರೈತರಿಗೆ ಇಂಧನ ಇಲಾಖೆಯಿಂದ ಉಚಿತ ಪಂಪ್‌ಸೆಟ್ ಯೋಜನೆ ನೀಡಲಾಗುತ್ತಿದೆ. ಧರ್ಮಪುರ ಹೋಬಳಿಯ ಕೆರೆಗಳಿಗೆ ನೀರು ತುಂಬಿಸುವ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ. 3.5 ಕೋಟಿ ವೆಚ್ಚದಲ್ಲಿ ನೂತನ ಬಸ್ ನಿಲ್ದಾಣ ಹಾಗೂ ಕ್ಷೇತ್ರಕ್ಕೆ 2,500 ಕೋಟಿಗೂ ಅಧಿಕ ಮೌಲ್ಯದ ಕಾಮಗಾರಿಗಳಿಗೆ ಅನುಮೋದನೆ ದೊರೆತಿದೆ ಎಂದರು.

ಅಭ್ಯರ್ಥಿ ಆಯ್ಕೆ ಬಗ್ಗೆ ವಿಜಯೇಂದ್ರ ಸುಳಿವು



ಹಿರಿಯೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಶೀಘ್ರವೇ ಘೋಷಣೆಯಾಗಲಿದ್ದು, ಜಿಲ್ಲೆಯಲ್ಲಿ ರಾಜಕಾರಣ ಗರಿಗೆದರುತ್ತಿದೆ. ಉಪ ಚುನಾವಣೆ ಹೊಸ್ತಿಲಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನ. 3ರಂದು ಹಿರಿಯೂರು ಪ್ರವಾಸ ಕೈಗೊಂಡಿರುವುದು ಕುತೂಹಲ ಮೂಡಿಸಿದೆ. ಹಿರಿಯೂರಿನ ಶಾಸಕರಾಗಿದ್ದ ಡಿ. ಸುಧಾಕರ್ (ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ಯೋಜನಾ ಸಚಿವರಾಗಿದ್ದರು) ಅವರ ನಿಧನದ ನಂತರ, ಉಪಚುನಾವಣೆ ನಡೆಯಬೇಕಿದೆ. ಈ ಹಿನ್ನೆಲೆಯಲ್ಲಿ, ಮಂಗಳವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಿರಿಯೂರಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಶಿವಕುಮಾರ್ ಅವರು ಚಾಲನೆ ನೀಡಲಿರುವ ಯೋಜನೆಗಳಲ್ಲಿ, ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿ ಹೋಬಳಿಯಲ್ಲಿ 244 ಕೋಟಿ ರೂಪಾಯಿ ವೆಚ್ಚದಲ್ಲಿ 16 ಕೆರೆಗಳು ಮತ್ತು ಗಾಯತ್ರಿ ಜಲಾಶಯವನ್ನು ತುಂಬಿಸುವ ಯೋಜನೆಯೂ ಸೇರಿದೆ. ಇದನ್ನು ಉಪಚುನಾವಣೆಗೆ ಕಾಂಗ್ರೆಸ್ ನಡೆಸುತ್ತಿರುವ ಸಿದ್ಧತೆ ಎಂದು ಹೇಳಲಾಗುತ್ತಿದೆ. ಕ್ಷೇತ್ರದಾದ್ಯಂತ ವಿವಿಧ ಕಾಮಗಾರಿಗಳು ಉದ್ಘಾಟನೆ, ಶಂಕುಸ್ಥಾಪನೆಗೆ ಕಾಯುತ್ತಿವೆ. ಚುನಾವಣೆ ಘೋಷಣೆಯಾಗಿ ಮಾದರಿ ನೀತಿ ಸಂಹಿತೆ ಜಾರಿಯಾದರೆ ಅವುಗಳ ಉದ್ಘಾಟನೆ ತಡವಾಗುತ್ತದೆ. ಹೀಗಾಗಿ ಮುಖ್ಯಮಂತ್ರಿ, ಮಂಗಳವಾರ ದಿನವಿಡೀ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಡಿ. ಸುಧಾಕರ್ ನಿಧನಾನಂತರ ಕ್ಷೇತ್ರದಲ್ಲಿ ಶಾಸಕರಿಲ್ಲದ ಕಾರಣ ಅವರ ಜವಾಬ್ದಾರಿಯನ್ನು ಮುಖ್ಯಮಂತ್ರಿ ಅವರೇ ಹೊತ್ತಿದ್ದಾರೆ ಎಂದೇ ಈ ಪ್ರವಾಸವನ್ನು ಬಣ್ಣಿಸಲಾಗುತ್ತಿದೆ. ಡಿ.ಸುಧಾಕರ್ ಮುಖ್ಯಮಂತ್ರಿ ಅವರಿಗೆ ಆಪ್ತ ಗೆಳೆಯರಾಗಿದ್ದರು. ಮೇ 10ರಂದು ಅವರು ನಿಧನರಾದರು. ಶಾಸಕರು ನಿಧನರಾದ 6 ತಿಂಗಳ ಒಳಗೆ ಉಪ ಚುನಾವಣೆ ಘೋಷಣೆಯಾಗಬೇಕು. ನ. 10ಕ್ಕೆ ಅವರು ನಿಧನರಾಗಿ 6 ತಿಂಗಳು ಪೂರ್ಣವಾಗುತ್ತದೆ. ಅಷ್ಟರೊಳಗೆ ಚುನಾವಣೆ ಘೋಷಣೆಯಾಗುವುದು ಖಾತ್ರಿ. ಹೀಗಾಗಿ ಮುಖ್ಯಮಂತ್ರಿ ಹಿರಿಯೂರು ಪ್ರವಾಸ ಕೈಗೊಂಡಿದ್ದಾರೆ.

ಈ ದಿನದ ದರ ಪೆಟ್ರೋಲ್: 111.68₹/L | ಡೀಸೆಲ್ : 99.56₹/L | ಬಂಗಾರ: ₹ 13,964 /Gram 24ct ₹ 12,800/Gram 22ct | ಬೆಳ್ಳಿ: ₹200.00/

ದಾಸವಾಣಿ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ನವೆಂಬರ್ 5, ಗುರುವಾರ ಸಂಜೆ 5-15ಕ್ಕೆ ಶ್ರೀಮತಿ ಜಯಶ್ರೀ ಹರಿಪ್ರಸಾದ್ ಮತ್ತು ಶ್ರೀಮತಿ ರಮ್ಯಾ ಗೋವಿಂದ ಪಡಕಿ ಇವರ ದಾಸವಾಣಿ ಕಾರ್ಯಕ್ರಮಕ್ಕೆ ಪಿಟೀಲು ವಾದನದಲ್ಲಿ ಶ್ರೀ ಎಸ್. ಶಶಿಧರ್, ಮೃದಂಗ ವಾದನದಲ್ಲಿ ಶ್ರೀ ಮುರಳಿ ನಾರಾಯಣರಾವ್ ಸಾಥ್ ನೀಡಲಿದ್ದಾರೆ ಎಂದು ಶ್ರೀ ನಂದಕಿಶೋರಾಚಾರ್ ತಿಳಿಸಿದ್ದಾರೆ. ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು-560041


☛ಉದಯವಾಹಿನಿ ಚಿತ್ರ

ಸರ್ಕಾರಿ ಯೋಜನೆಗಳನ್ನು ಜನರಿಗೆ ತಲುಪಿಸಲು ಆದ್ಯತೆ: ಡಾ. ಯತೀಶ್ ಉಲ್ಲಾಳ್

• ಉದಯವಾಹಿನಿ, ಕೆ.ಆರ್.ಪುರ

ಸರ್ಕಾರಿ ಜನಪರ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆಯ ಕೃಷ್ಣರಾಜಪುರ ವಲಯದ ನೂತನ ಜಂಟಿ ಆಯುಕ್ತ ಡಾ. ಯತೀಶ್ ಉಲ್ಲಾಳ್ ತಿಳಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆಯ ಕೃಷ್ಣರಾಜಪುರ ವಲಯ ಕಚೇರಿಯಲ್ಲಿ ಅಧಿಕಾರವಹಿಸಿಕೊಂಡು ಬಳಿಕ ಮಾತನಾಡಿದ ಅವರು, 2011ರ ಜನಗಣತಿ ಆಧಾರದಲ್ಲಿ ವಿವಿಧ ಸರ್ಕಾರಿ ಯೋಜನೆಗಳನ್ನು ರೂಪಿಸಲಾಗಿದ್ದು, 2027


☛ಉದಯವಾಹಿನಿ ಚಿತ್ರ

ಜನಗಣತಿಯು ಮಾಡುವುದು ಸವಾಲಾಗಿದೆ ಎಂದರು. ಕೆ.ಆರ್.ಪುರ ಬೆಂಗಳೂರು ಹೊರವಲಯದ ಪ್ರಮುಖ ಪ್ರದೇಶವಾಗಿದ್ದು, ಇಲ್ಲಿ ಕಸ ವಿಂಗಡಣೆ, ಸಂತೆ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಸಮಸ್ಯೆಗಳು ಸೇರಿದಂತೆ ಸಾರ್ವಜನಿಕರು ಎದುರಿಸುತ್ತಿರುವ ಮೂಲಸೌಕರ್ಯ ಸಮಸ್ಯೆಗಳನ್ನು ಹಂತಹಂತವಾಗಿ ಬಗೆಹರಿಸಲು ಶ್ರಮಿಸಲಾಗುವುದು. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು. ಜಿಬಿಎ ಪೂರ್ವ ವಲಯದ ಕಂದಾಯ ಅಧಿಕಾರಿ ಬಸವರಾಜ ಮಗ್ಗಿ ಮಾತನಾಡಿ, ನೂತನ ಜಂಟಿ ಆಯುಕ್ತರ ನೇತೃತ್ವದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ನಡುವೆ ಸಮನ್ವಯಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು.

ಯಾವುದೇ ರೀತಿಯ ಭಿನ್ನಾಭಿಪ್ರಾಯ ಅಥವಾ ಸಮನ್ವಯದ ಕೊರತೆ ಉಂಟಾಗದಂತೆ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ, ಸರ್ಕಾರದ ಯೋಜನೆಗಳನ್ನು ಬಡವರು ಹಾಗೂ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

SIT ಮುಖ್ಯಸ್ಥರಾಗಿ ADGP ಆರ್. ಹಿತೇಂದ್ರ ನೇಮಕ..!

• ಉದಯವಾಹಿನಿ, ಬೆಂಗಳೂರು

☛ಉದಯವಾಹಿನಿ ಚಿತ್ರ


ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಹಗರಣದ ಕುರಿತು ಹೆಚ್ಚಿನ ತನಿಖೆ ನಡೆಸಲು ಪುನರ್ ರಚಿಸಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಖ್ಯಸ್ಥರನ್ನಾಗಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಆರ್. ಹಿತೇಂದ್ರ ಅವರನ್ನು ಕರ್ನಾಟಕ ಹೈಕೋರ್ಟ್ ನೇಮಿಸಿದೆ.

ರಾಜ್ಯ ಸರ್ಕಾರ ಶಿಫಾರಸು ಮಾಡಿದ್ದ ಎಡಿಜಿಪಿ ದರ್ಜೆಯ ನಾಲ್ವರು ಅಧಿಕಾರಿಗಳ ಪೈಕಿ ಹಿತೇಂದ್ರ ಅವರ ಹೆಸರನ್ನು ಹೈಕೋರ್ಟ್ ಆಯ್ಕೆ ಮಾಡಿದೆ. ಈ ಹಿಂದೆ ಸೂಚಿಸಲಾಗಿದ್ದ ಡಿಜಿಪಿ ಅಲೋಕ್ ಕುಮಾರ್ ಬದಲಿಗೆ ಹಿತೇಂದ್ರ ಅವರನ್ನು ನೇಮಿಸಲಾಗಿದೆ. ಅಲ್ಲದೆ, ಐಪಿಎಸ್ ಅಧಿಕಾರಿ ದಿವ್ಯಾ ವಿ. ಗೋಪಿನಾಥ್ ಅವರ ಬದಲಿಗೆ ಎಡಿಜಿಪಿ (ಆಡಳಿತ) ಸೌಮೇಂದು ಮುಖರ್ಜಿ ಅವರನ್ನು ಎಸ್‌ಐಟಿ ಸದಸ್ಯರನ್ನಾಗಿ ನೇಮಿಸಲಾಗಿದೆ.

ಸೆಪ್ಟೆಂಬರ್ 21ರಂದು ನ್ಯಾಯಾಲಯ ನೇಮಿಸಿದ್ದ ಉಳಿದ ಮೂವರು ಐಪಿಎಸ್ ಅಧಿಕಾರಿಗಳಾದ ಅನುಪ್ ಎ. ಶೆಟ್ಟಿ, ಕುಶಾಲ್ ಚೌಕ್ಸೆ ಮತ್ತು ಕ್ಷಮಾ ಮಿಶ್ರಾ ಅವರ ನೇಮಕಾತಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಸಿಲಿಕಾನ್ ಸಿಟಿಯಲ್ಲಿ ಅಕ್ರಮ ಪಿಜಿಗಳ ಹಾವಳಿ: ನಿಯಮ ಜಾರಿಗೆ GBA ಸಿದ್ಧತೆ..!

ಪರಿಷ್ಕೃತ ನೀತಿ ಅಥವಾ ಎಸ್‌ಒಪಿ ರೂಪಿಸುವ ಪ್ರಸ್ತಾಪವಿದ್ದರೂ, 2024ರ ಮಾರ್ಗಸೂಚಿಗಳನ್ನು ಬಹಿರಂಗವಾಗಿಯೇ ಉಲ್ಲಂಘಿಸಲಾಗುತ್ತಿದೆ.

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ ತನ್ನ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 5 ಸಾವಿರಕ್ಕೂ ಹೆಚ್ಚು ಪೇಯಿಂಗ್ ಗೆಸ್ಟ್ ವಸತಿಗಳನ್ನು ನಿಯಂತ್ರಿಸಲು ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು (ಎಸ್‌ಒಪಿ) ರೂಪಿಸುತ್ತಿದೆ. ಆದರೆ, ಅನಧಿಕೃತ ಪಿಜಿಗಳ ವಿರುದ್ಧ ಹಲವು ವರ್ಷಗಳಿಂದ ಧ್ವನಿ ಎತ್ತುತ್ತಿರುವ ನಾಗರಿಕ ಹೋರಾಟಗಾರರು ಮತ್ತು ಸ್ವಯಂಸೇವಾ ಸಂಸ್ಥೆಗಳು, ಪ್ರಸ್ತಾಪಿತ ನಿಯಮಗಳು ಕಟ್ಟುನಿಟ್ಟಾಗಿ ಜಾರಿಯಾಗುವ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ.

1 ನಗರದಲ್ಲಿ 3,597 ಅನಧಿಕೃತ ಪಿಜಿಗಳಿವೆ
2 ಯಾವುದೇ ಗಮನಾರ್ಹ ಕ್ರಮಗಳು ನಡೆದಿಲ್ಲ
3 ನಿಯಮಾವಳಿಗಳನ್ನು ತಿದ್ದುಪಡಿ ಮಾಡಬೇಕು

ಜಿಬಿಎ ನಡೆಸಿದ ಪರಿಶೀಲನೆಯ ಪ್ರಕಾರ, ನಗರದಲ್ಲಿ 3,597 ಅನಧಿಕೃತ ಪಿಜಿಗಳಿವೆ. ಕಳೆದ ಒಂದು ದಶಕದಿಂದ ನಗರದಲ್ಲಿ ಪಿಜಿ ನಿಯಮಗಳ ಉಲ್ಲಂಘನೆ ವ್ಯಾಪಕವಾಗಿ ನಡೆಯುತ್ತಿದ್ದರೂ, ಜಿಬಿಎ ಈ ಬಗ್ಗೆ ಕ್ರಮ ಕೈಗೊಳ್ಳಲು ಮುಂದಾಗಿದ್ದು ಪದೇಪದೇ ಹೈಕೋರ್ಟ್ ನೀಡಿದ ಕಠಿಣ ಸೂಚನೆಗಳ ನಂತರವೇ ಎಂದು ಬೆಂಗಳೂರು ಕೊಯಲಿಷನ್‌ನ ರಾಜಗೋಪಾಲನ್ ಆರ್. ಹೇಳಿದ್ದಾರೆ.

ನಿಯಮ ಉಲ್ಲಂಘನೆಗಳ ವಿರುದ್ಧ ವಾಸ್ತವದಲ್ಲಿ ಯಾವುದೇ ಗಮನಾರ್ಹ ಕ್ರಮಗಳು ನಡೆದಿಲ್ಲ. ಪರಿಷ್ಕೃತ ನೀತಿ ಅಥವಾ ಎಸ್‌ಒಪಿ ರೂಪಿಸುವ ಪ್ರಸ್ತಾಪವಿದ್ದರೂ, 2024ರ ಮಾರ್ಗಸೂಚಿಗಳನ್ನು ಬಹಿರಂಗವಾಗಿಯೇ ಉಲ್ಲಂಘಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ವಸತಿ ಪ್ರದೇಶಗಳಲ್ಲಿ ಪಿಜಿಗಳ ಕಾರ್ಯಾಚರಣೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲು ವಲಯ ನಿಯಮಾವಳಿಗಳನ್ನು ತಿದ್ದುಪಡಿ ಮಾಡಬೇಕು. ಅಲ್ಲದೆ, ಹಾಸ್ಟೆಲ್‌ಗಳಿಗಿಂತ ಭಿನ್ನವಾಗಿರುವ ಪಿಜಿಗಳಿಗೆ ಜಿಬಿಎ ಪ್ರತ್ಯೇಕ ವರ್ಗೀಕರಣ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.



☛ಉದಯವಾಹಿನಿ ಚಿತ್ರ

ಆದರೆ, ಈ ವಾದವನ್ನು ಒಪ್ಪದ ಬೆಂಗಳೂರಿನ ನಾಗರಿಕರ ವೇದಿಕೆಯ ಸಂಚಾಲಕ ಸಂದೀಪ್ ಅನಿರುದ್ಧನ್, ಅಕ್ರಮ ಪಿಜಿಗಳ ಹಾವಳಿ ಮತ್ತು ಕಟ್ಟಡ ನಿಯಮಗಳ ಉಲ್ಲಂಘನೆ ರಾಜ್ಯದ ಎರಡು ಮೂಲಭೂತ ವೈಫಲ್ಯಗಳಾದ ಯೋಜನಾರಹಿತ ಅಭಿವೃದ್ಧಿ ಮತ್ತು ಕಾನೂನು ಸುವ್ಯವಸ್ಥೆಯ ಕುಸಿತದ ಪರಿಣಾಮ ಎಂದು ಹೇಳಿದ್ದಾರೆ.

ಅಕ್ರಮ ಕಟ್ಟಡಗಳು ಮತ್ತು ಬಡಾವಣೆಗಳನ್ನು ವಶಕ್ಕೆ ಪಡೆದು, ಕಾನೂನುಬದ್ಧವಾಗಿ ಮರುಅಭಿವೃದ್ಧಿಪಡಿಸಿ, ನಂತರ ಆಸ್ತಿಗಳನ್ನು ಮಾರಾಟ ಮಾಡುವ ಅಧಿಕಾರ ಹೊಂದಿರುವ ಸ್ವಾಯತ್ತ ಪ್ರಾಧಿಕಾರವನ್ನು ಸ್ಥಾಪಿಸಬೇಕು. ಕಟ್ಟಡ ನಿರ್ಮಾಣ ಮತ್ತು ನೆಲಸಮ ಪ್ರಕ್ರಿಯೆಗಳನ್ನು ಒಳಗೊಂಡ ಮರುಬಳಕೆ ಆರ್ಥಿಕ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಸಲಹೆ ನೀಡಿದ್ದಾರೆ.

ಆರ್ಥಿಕ ಪ್ರೋತ್ಸಾಹ, ಮೂಲಸೌಕರ್ಯ ನೆರವು ಮತ್ತು ಭೂಮಿಯ ಲಭ್ಯತೆಯನ್ನು ಒದಗಿಸುವ ವಿಶೇಷ ನವೋದ್ಯಮ ನೀತಿ ರೂಪಿಸಬೇಕು. ಇದರ ಜೊತೆಗೆ ಆಯಕಟ್ಟಿನ ಸ್ಥಳಗಳಲ್ಲಿ ಕಟ್ಟಡ ನಿರ್ಮಾಣ ಮತ್ತು ನೆಲಸಮದ ತ್ಯಾಜ್ಯ ಮರುಬಳಕೆ ಉದ್ಯಾನಗಳನ್ನು ಸ್ಥಾಪಿಸಿದರೆ, ಆಧುನಿಕ ನೆಲಸಮ ಮತ್ತು ಮರುಬಳಕೆ ತಂತ್ರಜ್ಞಾನಗಳಲ್ಲಿ ಹೂಡಿಕೆ ಆಕರ್ಷಿಸಬಹುದು. ಇದರಿಂದ ಹೊಸ ಹಸಿರು ಉದ್ಯಮವನ್ನೂ ಸೃಷ್ಟಿಸಬಹುದು ಎಂದು ಅವರು ಹೇಳಿದ್ದಾರೆ.

ಬಿಎನ್‌ಪಿ ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್ ಮಾತನಾಡಿ, ಪಿಜಿಗಳ ವ್ಯವಹಾರವು ಮಾಲೀಕರು ಮತ್ತು ರಾಜಕಾರಣಿಗಳ ನಡುವಿನ ಪ್ರಬಲ ನಂಟಿನೊಂದಿಗೆ ಬೆಳೆಯುತ್ತಿದೆ. ನಿಯಮಗಳನ್ನು ಪಾಲಿಸಲು ಬಯಸುವ ಸಣ್ಣ ಮಾಲೀಕರು ವ್ಯವಹಾರದಿಂದ ಹೊರಗುಳಿಯುವಂತಾಗಿದೆ. ಹಲವು ಸಂದರ್ಭಗಳಲ್ಲಿ ಹೊಸ ನಿಯಮಗಳು ಪ್ರಭಾವಿಗಳಿಗೆ ರಕ್ಷಣಾ ಕವಚವಾಗುತ್ತವೆ ಎಂದು ಹೇಳಿದ್ದಾರೆ.

ಪಿಜಿಗಳ ಕಾರ್ಯಾಚರಣೆಯನ್ನು ವ್ಯವಸ್ಥಿತಗೊಳಿಸುವುದು ಸರ್ಕಾರದ ನಿಜವಾದ ಉದ್ದೇಶವಾಗಿದ್ದರೆ, ಎಸ್‌ಒಪಿಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿ, ಅವುಗಳಲ್ಲಿ ಯಾವೆಲ್ಲ ಅಂಶಗಳಿವೆ ಎಂಬುದನ್ನು ಜನರಿಗೆ ಸ್ಪಷ್ಟಪಡಿಸಬೇಕು. ಈ ಕುರಿತು ಸರ್ಕಾರ ವ್ಯಾಪಕ ಸಾರ್ವಜನಿಕ ಸಮಾಲೋಚನೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

> ಈ ಎರಡೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳದಿದ್ದರೆ, ಉಳಿದ ಕ್ರಮಗಳೆಲ್ಲವೂ ಕೇವಲ ಮೇಲ್ನೋಟದ ಬದಲಾವಣೆಗಳಾಗಲಿವೆ. ಬೆಂಗಳೂರು ವೇಗವಾಗಿ ಕೊಳಗೇರಿ ನಗರವಾಗಿ ಬದಲಾಗುವ ಅಪಾಯವಿದೆ ಎಂದು ಎಚ್ಚರಿಸಿದ್ದಾರೆ. -ರಾಜಗೋಪಾಲನ್ ಆರ್

ಉದ್ಯೋಗಾವಕಾಶಗಳ ಹುಡುಕಾಟ

ವಿದ್ಯಾಭ್ಯಾಸ ಮತ್ತು ಉದ್ಯೋಗಾವಕಾಶಗಳ ಹುಡುಕಾಟದಲ್ಲಿ ನಗರಕ್ಕೆ ಬರುವ ವಿದ್ಯಾರ್ಥಿಗಳು ಹಾಗೂ ಯುವಜನರಿಗೆ ಪಿಜಿಗಳು ಕಡಿಮೆ ವೆಚ್ಚದ ವಸತಿ ವ್ಯವಸ್ಥೆಯಾಗಿವೆ. ಹೀಗಾಗಿ ಇವುಗಳನ್ನು ನಿರ್ಬಂಧಿಸಬಾರದು ಎಂದು ಪಿಜಿ ಮಾಲೀಕರ ಸಂಘ ಸಮರ್ಥಿಸಿಕೊಂಡಿದೆ.

ಹಳೇ ಬಿಲ್ ಪಾವತಿಸದಿದ್ದರೆ ಹೊಸ ಕಾಮಗಾರಿ ಕೈಗೆತ್ತಿಕೊಳ್ಳಲ್ಲ ಖಡಕ್ ಎಚ್ಚರಿಕೆ..!


☛ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬಾಕಿ ಉಳಿದಿರುವ 38,000 ಕೋಟಿ ರೂ. ಬಿಲ್ ಹಣವನ್ನು ತಕ್ಷಣ ಬಿಡುಗಡೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು ಸೋಮವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದೆ.

ಮುಖ್ಯಮಂತ್ರಿಗಳೊಂದಿಗೆ ಸುಮಾರು ಎರಡು ಗಂಟೆಗಳ ಕಾಲ ಸಭೆ ನಡೆಸಿದ ಸಂಘದ ಪದಾಧಿಕಾರಿಗಳು ತಮ್ಮ ಬೇಡಿಕೆಗಳ ಕುರಿತು ಮನವಿ ಪತ್ರ ಸಲ್ಲಿಸಿದರು. ಉಪಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ತಮಗೆ ನೀಡಿದ್ದ ಭರವಸೆಯನ್ನು ಈಡೇರಿಸುವಂತೆ ಡಿ.ಕೆ. ಶಿವಕುಮಾರ್ ಅವರಿಗೆ ನೆನಪಿಸಿದರು.

ನೀವು ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಳಿಕ ಸಂಘದ ಪದಾಧಿಕಾರಿಗಳನ್ನು ಕರೆದು ಚರ್ಚಿಸಿ, ಎರಡು ತಿಂಗಳೊಳಗೆ ಬಾಕಿ ಹಣ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಿರಿ. ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದೀರಿ.1.5 ಲಕ್ಷ ಗುತ್ತಿಗೆದಾರರು ಮತ್ತು ಅವರ ಅವಲಂಬಿತರನ್ನು ಮರೆತಿದ್ದೀರಿ. ಮುಖ್ಯಮಂತ್ರಿಗಳು ತಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಬಾಕಿ ಬಿಲ್‌ಗಳ ಹಣ ಬಿಡುಗಡೆಗೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ಸಂಘ ತಿಳಿಸಿದೆ.

ಗುತ್ತಿಗೆದಾರರ ಸಮಸ್ಯೆಗಳನ್ನು ಬಗೆಹರಿಸುವ ಜವಾಬ್ದಾರಿಯನ್ನು ಹಣಕಾಸು ಸಲಹೆಗಾರ ಎಲ್.ಕೆ. ಅತೀಕ್ ಮತ್ತು ಹಣಕಾಸು ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ವಹಿಸಿದ್ದಾರೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರಕ್ಕೆ ಯೋಗ್ಯತೆ ಇದ್ದರೆ... ಸಂಸದ ಸುಧಕಾರ್ ಸವಾಲು!

• ಉದಯವಾಹಿನಿ, ಬೆಂಗಳೂರು

ರೈತರಿಗೆ ಹಾಲಿನ ಖರೀದಿ ದರ ಹೆಚ್ಚಿಸುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ರೈತರ ಹೆಸರಿನಲ್ಲಿ ಹಾಲಿನ ದರ ಏರಿಕೆ ಮಾಡಿ ಬಡ ಮಕ್ಕಳು, ಕೂಲಿ ಕಾರ್ಮಿಕರು ಹಾಗೂ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹೇರುವುದು ಸರಿಯಲ್ಲ ಎಂದು ಸಂಸದ ಡಾ.ಕೆ.ಸುಧಾಕರ್ ಆಗ್ರಹಿಸಿದ್ದಾರೆ

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು ರೈತರಿಗೆ ನ್ಯಾಯಯುತ ಬೆಲೆ ಒದಗಿಸುವ ಜವಾಬ್ದಾರಿ ಸರ್ಕಾರದ್ದಾಗಿದ್ದು, ಪ್ರತಿ ಲೀಟರ್ ಹಾಲಿಗೆ ಹೆಚ್ಚುವರಿಯಾಗಿ 10 ಸಹಾಯ ಧನವನ್ನು ಸರ್ಕಾರವೇ ತನ್ನ ಬೊಕ್ಕಸದಿಂದ ಭರಿಸಬೇಕು ಎಂದು ಹೇಳಿದರು.

ರೈತರಿಗೆ ಹಾಲಿನ ಖರೀದಿ ದರವನ್ನು 7ರ ಬದಲಿಗೆ 10 ಹೆಚ್ಚಿಸಿದರೂ ತಮ್ಮ ಆಕ್ಷೇಪವಿಲ್ಲ. ಆದರೆ ಈ ಹೆಚ್ಚುವರಿ ಮೊತ್ತವನ್ನು ಗ್ರಾಹಕರಿಂದ ವಸೂಲಿ ಮಾಡುವ ಮೂಲಕ ಬಡ ಕುಟುಂಬಗಳು, ಹಾಲು ಅವಲಂಬಿಸಿರುವ ಮಕ್ಕಳು, ಕೂಲಿ ಕಾರ್ಮಿಕರು ಹಾಗೂ ಸಣ್ಣ ಕಾಫಿ, ಟೀ ಅಂಗಡಿ ಮಾಲೀಕರಿಗೆ ತೊಂದರೆ ಉಂಟುಮಾಡುವುದು ಸಮಂಜಸವಲ್ಲ ಎಂದು ಅಭಿಪ್ರಾಯಪಟ್ಟರು.


☛ಉದಯವಾಹಿನಿ ಚಿತ್ರ

ರೈತರಿಗೆ ಹೆಚ್ಚಿನ ಬೆಲೆ ನೀಡುವ ನಿಜವಾದ ಕಾಳಜಿ ಸರ್ಕಾರಕ್ಕಿದ್ದರೆ ರಾಜ್ಯದ ಬೊಕ್ಕಸದಿಂದಲೇ ಪ್ರತಿ ಲೀಟರ್ ಹಾಲಿಗೆ 10 ಸಹಾಯಧನ ನೀಡಲಿ.

ಇದರಿಂದ ರೈತರಿಗೆ ಉತ್ತಮ ಬೆಲೆ ದೊರೆಯುವುದರ ಜತೆಗೆ ಗ್ರಾಹಕರಿಗೂ ಕೈಗೆಟುಕುವ ದರದಲ್ಲಿ ಹಾಲು ಸಿಗಲಿದೆ.

ರೈತರು ಮತ್ತು ಗ್ರಾಹಕರಿಬ್ಬರ ಹಿತಾಸಕ್ತಿ ಕಾಪಾಡುವುದು ಸರ್ಕಾರದ ಕರ್ತವ್ಯ ಎಂದು ಹೇಳಿದರು. ತಮ್ಮ ಹೇಳಿಕೆಗಳನ್ನು ತಿರುಚಿ ವೈಯಕ್ತಿಕವಾಗಿ ಟೀಕೆ ಮಾಡುತ್ತಿರುವ ಚಿಮುಲ್ ಅಧ್ಯಕ್ಷರು ಮೊದಲು ರೈತರ ಹಿತಾಸಕ್ತಿಯ ಬಗ್ಗೆ ತಮ್ಮ ಬದ್ಧತೆಯನ್ನು ತೋರಿಸಲಿ ಎಂದು ತಿರುಗೇಟು ನೀಡಿದರು.

ರಸ್ತೆ ಅಗಲೀಕರಣ TDS ಡಿಜಿಟಲೀಕರಣ; ಸಚಿವ ಕೃಷ್ಣ ಬೈರೇಗೌಡ

• ಉದಯವಾಹಿನಿ, ಬೆಂಗಳೂರು


ರಸ್ತೆಗಳ ಅಗಲೀಕರಣ ಮತ್ತು ಹೊಸ ರಸ್ತೆಗಳ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಸುಲಭಗೊಳಿಸಲು ಟಿ.ಡಿ.ಆರ್ ವ್ಯವಸ್ಥೆಯನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವಂತೆ ಸಚಿವ ಕೃಷ್ಣ ಬೈರೇಗೌಡ ಅವರು ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

ವಿಕಾಸಸೌಧದಲ್ಲಿ ಸಂಬಂಧಿತ ಅಧಿಕಾರಿಗಳ ಸಭೆ ನಡೆಸಿದ ಸಚಿವ ಕೃಷ್ಣ ಬೈರೇಗೌಡ ಅವರು, ''ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂಚಾರ ದಟ್ಟಣೆಗೆ ದೀರ್ಘಕಾಲೀನ ಹಾಗೂ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ರಸ್ತೆಗಳ ಅಗಲೀಕರಣ ಮತ್ತು ಹೊಸ ರಸ್ತೆಗಳ ನಿರ್ಮಾಣವು ಅತ್ಯಂತ ತುರ್ತು ಮತ್ತು ಅನಿವಾರ್ಯ ಹೆಜ್ಜೆಯಾಗಿದೆ.

ಆದರೆ, ಇಷ್ಟು ವರ್ಷಗಳ ಕಾಲ ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಸುಲಭಗೊಳಿಸುವ ಟಿ.ಡಿ.ಆರ್ ವ್ಯವಸ್ಥೆಯು ಸಂಪೂರ್ಣವಾಗಿ ಕಾಗದದ ಕಡತಗಳ ಮೂಲಕ ನಡೆಯುತ್ತಿದ್ದುದರಿಂದ, ಸರಿಯಾದ ಟ್ರ್ಯಾಕಿಂಗ್ ವ್ಯವಸ್ಥೆ ಇಲ್ಲದೆ ವ್ಯವಸ್ಥೆಯಲ್ಲಿ ಅಪಾರದರ್ಶಕತೆ ತುಂಬಿತ್ತು.

ಪರಿಣಾಮ ಸಾರ್ವಜನಿಕರಿಗೆ ಟಿ.ಡಿ.ಆರ್ ವ್ಯವಸ್ಥೆಯ ಮೇಲೆ ತೀರಾ ಅಪನಂಬಿಕೆ ಹಾಗೂ ಅತೃಪ್ತಿ ಮೂಡಿತ್ತು ಎಂದು ಅಭಿಪ್ರಾಯಪಟ್ಟರು.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂಚಾರ ದಟ್ಟಣೆಗೆ ದೀರ್ಘಕಾಲೀನ ಹಾಗೂ ಶಾಶ್ವತ ಪರಿಹಾರ ಕಲ್ಪಿಸುವ

☛ಉದಯವಾಹಿನಿ ಚಿತ್ರ


> ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಎದುರಾಗಿರುವ ಅಡೆತಡೆಗಳನ್ನು ನಿವಾರಿಸಲು ಹಾಗೂ ಭೂಮಾಲೀಕರು ಸಾರ್ವಜನಿಕರಲ್ಲಿ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಮರುಸ್ಥಾಪಿಸಲು ಪ್ರಸ್ತುತ ಮಹತ್ವದ ಹೆಜ್ಜೆ ಇಡಬೇಕಾಗಿದೆ. -ಕೃಷ್ಣ ಬೈರೇಗೌಡ


ನಿಟ್ಟಿನಲ್ಲಿ ರಸ್ತೆಗಳ ವಿಸ್ತರಣೆ ಮತ್ತು ಹೊಸ ರಸ್ತೆಗಳ ನಿರ್ಮಾಣವು ಅತ್ಯಂತ ತುರ್ತು ಮತ್ತು ಅನಿವಾರ್ಯ ಹೆಜ್ಜೆಯಾಗಿದೆ ಎಂದಿದ್ದಾರೆ. ಅದರಂತೆ, ರಸ್ತೆ ಮತ್ತು ಆಸ್ತಿಯ ವಿವರಗಳ ಪ್ರಾಥಮಿಕ ಹಂತದಿಂದ ಹಿಡಿದು, ಎಲ್ಲಾ ಹಂತಗಳ ಪರಿಶೀಲನೆ ಮುಗಿದು ಅಂತಿಮವಾಗಿ ಟಿ.ಡಿ.ಆರ್ ಪ್ರಮಾಣಪತ್ರ ವಿತರಿಸುವವರೆಗಿನ ಸಂಪೂರ್ಣ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಲು ಅಗತ್ಯವಾದ ಕ್ರಮ ಜರುಗಿಸಬೇಕು ಎಂದು ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

BYV ಮನೆ ಮುಂದೆ ಕಾಂಗ್ರೆಸ್ ಕಾರ್ಯಕರ್ತರ ಪೋಸ್ಟರ್ ಸಮರ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಕಾಂಗ್ರೆಸ್ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸುವಾಗ, ಏಕವಚನದಲ್ಲಿ ಈ ನನ್ನ ಮಕ್ಕಳು ಕಾಂಗ್ರೆಸ್‌ನವರು ಇದ್ದಾರಲ್ಲಾ ಎಂದು ಮಾತನಾಡಿದ್ದರು. ಇದರ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಪೋಸ್ಟರ್ ಸಮರ ಆರಂಭಿಸಿದ್ದು, ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿವಾಸ ಹಾಗೂ ವಿಜಯೇಂದ್ರ ಅವರ ಮನೆ ಬಳಿ ಪೋಸ್ಟರ್ ಅಂಟಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಸ್‌ಸಿ/ಎಸ್‌ಟಿ ಮೀಸಲಾತಿ ಹೆಚ್ಚಳ ಕಾಯ್ದೆಯನ್ನು ಹೈಕೋರ್ಟ್ ರದ್ದುಪಡಿಸಿದ ವಿಚಾರ ಹಾಗೂ ಹಾಲಿನ ದರ ಏರಿಕೆಯ ಕುರಿತು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ, ದಾವಣಗೆರೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಈ ನನ್ ಮಕ್ಕಳು ಕಾಂಗ್ರೆಸ್‌ನವರು ಇದ್ದಾರಲ್ಲಾ ಎಂದು ಏಕವಚನದಲ್ಲೇ ಲೇವಡಿ ಮಾಡಿದ್ದರು. ಅವರ ಈ ಆಕ್ರೋಶಭರಿತ ಹೇಳಿಕೆಯ ವಿಡಿಯೋ ಮತ್ತು ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದೆ. ಈ ಬೆನ್ನಲ್ಲೇ, ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರ ಮನೆ ಸುತ್ತಮುತ್ತ ಈ ಪೋಸ್ಟರ್‌ಗಳನ್ನು ಅಂಟಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

☛ಉದಯವಾಹಿನಿ ಚಿತ್ರ


ಕಾಂಗ್ರೆಸ್ ಕಾರ್ಯಕರ್ತರು ಅಂಟಿಸಿರುವ ಪೋಸ್ಟರ್‌ಗಳಲ್ಲಿ ಚೋರ್ ಬಿ.ವೈ. ವಿಜಯೇಂದ್ರ ಹಾಗೂ ನೀನು ಹೇಡಿ, ಕೇಡಿ ಎಂಬ ಘೋಷಣೆಗಳನ್ನು ಬರೆಯಲಾಗಿದೆ. ಈ ಮೂಲಕ ವಿಜಯೇಂದ್ರ ವಿರುದ್ಧದ ಹಳೆಯ ಭ್ರಷ್ಟಾಚಾರದ ಆರೋಪಗಳನ್ನು ಕಾಂಗ್ರೆಸ್ ಮತ್ತೊಮ್ಮೆ ಮುಂಚೂಣಿಗೆ ತರಲು ಪ್ರಯತ್ನಿಸಿದೆ.

ಮಹಿಳೆಗೆ ಚಾಕು ತೋರಿಸಿ, ಒತ್ತೆಯಾಳಾಗಿಸಿಕೊಂಡು ದರೋಡೆಗೆ ಯತ್ನ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಹಾಡಹಗಲೇ ಮಹಿಳೆಯೊಬ್ಬರನ್ನು ಒತ್ತೆಯಾಳಾಗಿಸಿಕೊಂಡು ಚಿನ್ನದ ಸರ ದೋಚಲು ಯತ್ನಿಸಿದ ಘಟನೆ ಇಂದಿರಾನಗರದಲ್ಲಿ ನಡೆದಿದೆ. ಹೆಲ್ಮೆಟ್ ಮತ್ತು ಕೈಗವಸು ಧರಿಸಿ ಅಂಗಡಿಯೊಳಗೆ ನುಗ್ಗಿದ ವ್ಯಕ್ತಿಯೊಬ್ಬ ಮಹಿಳೆಯ ಮೇಲೆ ಹಲ್ಲೆ ನಡೆಸಿ, ಕುತ್ತಿಗೆಗೆ ಚಾಕು ಹಿಡಿದು ಬೆದರಿಸಿದ್ದಾನೆ. ಬಳಿಕ ಆಕೆಯ 4.50 ಲಕ್ಷ ರೂಪಾಯಿ ಮೌಲ್ಯದ ಮಂಗಳಸೂತ್ರ ಕಿತ್ತುಕೊಂಡು ಪರಾರಿಯಾಗಲು ಯತ್ನಿಸಿದ್ದಾನೆ. ಆದರೆ ಸ್ಥಳೀಯರು ಆತನನ್ನು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಬಂಧಿತನನ್ನು 40 ವರ್ಷದ ಪ್ರಭುರಾಜ್ ಎಂದು ಗುರುತಿಸಲಾಗಿದೆ. ಆರೋಪಿ ಮಾನಸಿಕವಾಗಿ ಅಸ್ವಸ್ಥನಾಗಿದ್ದು, ಖಿನ್ನತೆಯಿಂದ ಬಳಲುತ್ತಿರುವ ಸಾಧ್ಯತೆಯಿರುವುದರಿಂದ ಆತನ ಹಿನ್ನೆಲೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಅಮಟೆ ತಿಳಿಸಿದ್ದಾರೆ. ಅ.31ರಂದು ಬೆಳಗ್ಗೆ 11.45ರಿಂದ ಮಧ್ಯಾಹ್ನ 12.15ರ ನಡುವೆ ಇಂದಿರಾನಗರದ 100 ಅಡಿ ರಸ್ತೆಯಲ್ಲಿರುವ ಪ್ರೀಮಿಯಂ ಶೂ ಆಂಡ್ ಬ್ಯಾಗ್ ರಿಪೇರಿ ಅಂಗಡಿಯಲ್ಲಿ ಈ ಘಟನೆ ನಡೆದಿದೆ. 23 ವರ್ಷದ ಯುವತಿ ಈ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ಬೆಂಗಳೂರಿನ 5 ಸ್ಥಳಗಳಲ್ಲಿ ಇ.ಡಿ. ದಾಳಿ, ಬ್ಯಾಂಕ್ ಖಾತೆ ಸ್ಥಗಿತ

• ಉದಯವಾಹಿನಿ, ಬೆಂಗಳೂರು

ನಕಲಿ ಔಷಧ ತಯಾರಿಕೆ ಮತ್ತು ಅಕ್ರಮ ಹಣ ವರ್ಗಾವಣೆ ಜಾಲಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಐದು ಸ್ಥಳಗಳಲ್ಲಿ ಶೋಧ ಮತ್ತು ವಶಪಡಿಸಿಕೊಳ್ಳುವ ಕಾರ್ಯಾಚರಣೆ ನಡೆಸಿದ್ದಾರೆ.

2002ರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. 2026ರ ಆಗಸ್ಟ್


☛ಉದಯವಾಹಿನಿ ಚಿತ್ರ

18ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ದಾಖಲಾದ ಎಫ್‌ಐಆರ್ ಆಧರಿಸಿ ಇ.ಡಿ. ಈ ಕ್ರಮ ಕೈಗೊಂಡಿದೆ.ಸಿ.ಕೆ. ತಾಂಡ್ಯ ಗ್ರಾಮದ ವಸತಿ ಪ್ರದೇಶವೊಂದರ ಮೇಲೆ ಔಷಧ ನಿಯಂತ್ರಣ ಪ್ರಾಧಿಕಾರ ಮತ್ತು ಪೊಲೀಸರು ಜಂಟಿ ದಾಳಿ ನಡೆಸಿದಾಗ, ಪರವಾನಗಿ ಇಲ್ಲದ ಔಷಧಗಳನ್ನು ದಾಸ್ತಾನು ಮಾಡಿದ್ದಲ್ಲದೆ, ಅವುಗಳ ಲೇಬಲ್‌ಗಳನ್ನು ಬದಲಾಯಿಸುತ್ತಿದ್ದ ಆರೋಪಿಗಳು ಪತ್ತೆಯಾಗಿದ್ದರು. ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್)-2023ರ ಸೆಕ್ಷನ್ 318(4) ಮತ್ತು 1957ರ ಹಕ್ಕುಸ್ವಾಮ್ಯ ಕಾಯ್ದೆಯ ಸೆಕ್ಷನ್ 63ರ ಅಡಿಯಲ್ಲಿ ದಾಖಲಾದ ಅಪರಾಧಗಳು ಪಿಎಂಎಲ್‌ಎ ವ್ಯಾಪ್ತಿಯ ನಿಗದಿತ ಅಪರಾಧಗಳಾಗಿರುವುದರಿಂದ, ಅಕ್ರಮ ವಹಿವಾಟಿನಿಂದ ಗಳಿಸಿದ ಹಣದ ಮೂಲ ಪತ್ತೆಹಚ್ಚಲು ಇಡಿ ಜಾರಿ ಪ್ರಕರಣ ಮಾಹಿತಿ ವರದಿ (ಇಸಿಐಆರ್) ದಾಖಲಿಸಿದೆ.

ಸಮುದ್ರದಿಂದ ತರುವ ತ್ಯಾಜ್ಯಕ್ಕೆ ಪ್ರೋತ್ಸಾಹ ಧನ!

• ಉದಯವಾಹಿನಿ, ಬೆಂಗಳೂರು

ಕರಾವಳಿ ಪ್ರದೇಶದ ಸ್ವಚ್ಛತೆ ಮತ್ತು ಜಲಚರಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದ 'ಕೆ-ಶೋರ್' ಕರ್ನಾಟಕ ಸರ್ಫೇಸ್ ಸಸ್ಟೈನಬಲ್ ಹಾರ್ವೆಸ್ಟ್ ಆಫ್ ಓಷನ್ ರಿಸೋರ್ಸಸ್ ಯೋಜನೆಯ ಅನುಷ್ಠಾನದೊಂದಿಗೆ, ಸಸಿಹಿತ್ಲು ಮತ್ತು ಟ್ಯಾಗೋರ್ ಕಡಲತೀರಗಳು ಈ ವರ್ಷ 'ಬ್ಲೂ ಫ್ಲ್ಯಾಗ್' ಮಾನ್ಯತೆ ಪಡೆಯುವ ಸಾಧ್ಯತೆಯಿದೆ.

'ಕೆ-ಶೋರ್' ಯೋಜನೆಯನ್ನು ಸಕಾಲದಲ್ಲಿ ಜಾರಿಗೊಳಿಸಲು ರಚಿಸಲಾದ ವಿಶೇಷ ಉದ್ದೇಶದ ಘಟಕವು ಪ್ಲಾಸ್ಟಿಕ್ ಮತ್ತು ಸ್ಟೈರೋಫೋಮ್‌ಗಳ ನಂತರ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿರುವ 'ತ್ಯಜಿಸಲ್ಪಟ್ಟ, ಕಳೆದುಹೋದ ಅಥವಾ ಎಸೆಯಲ್ಪಟ್ಟ ಮೀನುಗಾರಿಕಾ ಉಪಕರಣಗಳ' ತ್ಯಾಜ್ಯ ನಿರ್ವಹಣೆಯತ್ತವೂ ಗಮನಹರಿಸಲಿದೆ. ಇಂತಹ ತ್ಯಾಜ್ಯಗಳ ನಿರ್ವಹಣೆಯು ಜಲಚರಗಳನ್ನು ರಕ್ಷಿಸುವುದಲ್ಲದೆ, ಮೀನುಗಾರರಿಗೆ ಸುಸ್ಥಿರ ಜೀವನೋಪಾಯದ ಮಾರ್ಗವನ್ನೂ ಒದಗಿಸಲಿದೆ.

ಇದರಲ್ಲಿ ಮಂಗಳೂರಿನ ಸಸಿಹಿತ್ಲು ಕಡಲತೀರ ಮತ್ತು ಕಾರವಾರದ ಟ್ಯಾಗೋರ್ ಕಡಲತೀರಗಳು ಸೇರಿವೆ. ಈ ಪ್ರಕ್ರಿಯೆಯು 'ಕೆ-ಶೋರ್' ಕಾರ್ಯಕ್ರಮದ ಒಂದು ಭಾಗವಾಗಿದೆ. ಸಚಿವ ಸಂಪುಟದ ಅನುಮೋದನೆಯ ನಂತರ, ಅಂತಿಮ ಅನುಮತಿಗಾಗಿ ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು 'ಕೆ-ಶೋರ್' ವಿಶೇಷ ಉದ್ದೇಶದ ಘಟಕದ ಭಾಗವಾಗಿರುವ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

10 ವರ್ಷದಲ್ಲಿ ಬೆಂಗಳೂರು ಅಭಿವೃದ್ಧಿಗೆ 50 ಸಾವಿರ ಕೋಟಿ ರೂ.ಖರ್ಚು

'ಲೆಕ್ಕ ಬೇಕು' ಅಭಿಯಾನದ ಉದ್ದೇಶ ನಾಗರಿಕ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯನ್ನು ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು

• ಉದಯವಾಹಿನಿ, ಬೆಂಗಳೂರು


ಸಿಲಿಕಾನ್ ಸಿಟಿ ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗಾಗಿ ಕಳೆದ 10 ವರ್ಷಗಳಲ್ಲಿ ಬರೋಬ್ಬರಿ 50,000 ಕೋಟಿ ರೂಪಾಯಿ ಹಣ ಖರ್ಚು ಮಾಡಲಾಗಿದೆ. ಆದರೂ ನಗರದ ರಸ್ತೆಗಳು, ಚರಂಡಿ ವ್ಯವಸ್ಥೆ ಮಾತ್ರ ಇನ್ನೂ ಸುಧಾರಿಸಿಲ್ಲ.

1 ಬಿಎನ್‌ಪಿ ಈ ದಾಖಲೆಗಳನ್ನು ಸಂಗ್ರಹಿಸಿ
2 ಗುತ್ತಿಗೆ ವೆಚ್ಚಗಳ ವಿವರ ನೀಡಲಾಗಿದೆ.
3 ಏಕೆ ಲಭ್ಯವಾಗುವಂತೆ ಮಾಡಬಾರದು.

ಬೆಂಗಳೂರು ನವನಿರ್ಮಾಣ ಪಕ್ಷ ಬಿಡುಗಡೆ ಮಾಡಿರುವ ಬಿಬಿಎಂಪಿ ಗುತ್ತಿಗೆಗಳ ಅಧಿಕೃತ ದತ್ತಾಂಶದಿಂದ ಈ ಶಾಕಿಂಗ್ ಮಾಹಿತಿ ಹೊರಬಿದ್ದಿದೆ.

ಲೆಕ್ಕ ಬೇಕು ಅಭಿಯಾನದ ಉದ್ದೇಶ ನಾಗರಿಕ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯನ್ನು ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು. ಇದರಿಂದ ಜನರು ಕಾಮಗಾರಿಗಳ ಬಗ್ಗೆ ಪ್ರಶ್ನೆಗಳನ್ನು ಕೇಳಲು ಮತ್ತು ಉತ್ತರಗಳನ್ನು ಕೇಳಿ ಪಡೆಯಲು ಸಾಧ್ಯವಾಗುತ್ತದೆ ಎಂದು ಬಿಎನ್‌ಪಿ ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್ ಹೇಳಿದ್ದಾರೆ.

ಸೀಮಿತ ಸಂಪನ್ಮೂಲಗಳನ್ನು ಬಳಸಿಕೊಂಡೇ ಬಿಎನ್‌ಪಿ ಈ ದಾಖಲೆಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಒದಗಿಸಲು ಸಾಧ್ಯವಾಗಿದ್ದರೆ, ಸರ್ಕಾರ ತನ್ನಲ್ಲಿರುವ ಹೆಚ್ಚಿನ ಸಂಪನ್ಮೂಲಗಳನ್ನು ಬಳಸಿಕೊಂಡು ಇದೇ ಮಾಹಿತಿಯನ್ನು ನಾಗರಿಕರಿಗೆ ಸುಲಭವಾಗಿ ಏಕೆ ಲಭ್ಯವಾಗುವಂತೆ ಮಾಡಬಾರದು ಎಂದು


☛ಉದಯವಾಹಿನಿ ಚಿತ್ರ

ಅವರು ಪ್ರಶ್ನಿಸಿದ್ದಾರೆ. ತನ್ನ 'ಲೆಕ್ಕ ಬೇಕು' ಅಭಿಯಾನದ ಭಾಗವಾಗಿ, ಕಳೆದ ಒಂದು ದಶಕದಲ್ಲಿ ಹಿಂದಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿಗಳು ಮತ್ತು ಗುತ್ತಿಗೆ ವೆಚ್ಚಗಳ ವಿವರಗಳನ್ನು ವರದಿಯಲ್ಲಿ ನೀಡಲಾಗಿದೆ.

ಗುಂಡಿಬಿದ್ದ ರಸ್ತೆಗಳಲ್ಲಿ ಸಂಭವಿಸುವ ಅಪಘಾತಗಳಿಂದ ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಪ್ರತಿ ಮಳೆಗಾಲದಲ್ಲೂ ಕೆಳಸೇತುವೆಗಳು ಸಾವಿನ ಬಲೆಯಾಗಿ ಮಾರ್ಪಡುತ್ತವೆ. ಸಂಚಾರ ದಟ್ಟಣೆಯಿಂದಾಗಿ ವಾಹನ ಸವಾರರು ಪ್ರತಿದಿನ ಗಂಟೆಗಟ್ಟಲೆ ಸಮಯ ಕಳೆಯುವಂತಾಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರವಾರು ಅಭಿವೃದ್ಧಿ ವೆಚ್ಚ

ಯಲಹಂಕ- 2,368 ಕೋಟಿ ರೂ. ಬ್ಯಾಟರಾಯನಪುರ- 2,226 ಕೋಟಿ ರೂ. ದಾಸರಹಳ್ಳಿ-1,528 ಕೋಟಿ ರೂ. ಮಹಾಲಕ್ಷ್ಮಿ ಲೇಔಟ್-1,689 ಕೋಟಿ ರೂ. ಗೋವಿಂದರಾಜನಗರ-1,694 ಕೋಟಿ ರೂ. ಯಶವಂತಪುರ-3,804 ಕೋಟಿ ರೂ. ರಾಜರಾಜೇಶ್ವರಿ ನಗರ-2,806 ಕೋಟಿ ರೂ. ಬೆಂಗಳೂರು ದಕ್ಷಿಣ - 2,680 ಕೋಟಿ ರೂ.ಬೊಮ್ಮನಹಳ್ಳಿ- 2,209 ಕೋಟಿ ರೂ.
ಬಿಟಿಎಂ ಲೇಔಟ್- 1,846 ಕೋಟಿ ರೂ.
ಮಹದೇವಪುರ- 2,892 ಕೋಟಿ ರೂ.
ಕೆ.ಆರ್. ಪುರಂ-3,338 ಕೋಟಿ ರೂ.

ಕಾಮಗಾರಿಗಳ ವಿಭಾಗವಾರು ವೆಚ್ಚ

ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳು-26,807 ಕೋಟಿ ರೂ.
ಚರಂಡಿ ಮತ್ತು ಒಳಚರಂಡಿ ವ್ಯವಸ್ಥೆ- 7,007 ಕೋಟಿ ರೂ.ಉದ್ಯಾನವನಗಳು ಮತ್ತು ಆಟದ ಮೈದಾನಗಳು - 1,910 ಕೋಟಿ ರೂ.ಕುಡಿಯುವ ನೀರು ಮತ್ತು ನೀರು ಪೂರೈಕೆ- 1,357 ಕೋಟಿ ರೂ.
ಕಟ್ಟಡಗಳು ಮತ್ತು ಸಮುದಾಯ ಸೌಲಭ್ಯಗಳು- 1,188 ಕೋಟಿ ರೂ.

> ರಸ್ತೆಗಳು, ಪಾದಚಾರಿ ಮಾರ್ಗಗಳು ಮತ್ತು ಇತರ ನಾಗರಿಕ ಮೂಲಸೌಕರ್ಯಗಳ ಪ್ರತಿ ಕಿಲೋಮೀಟರ್‌ಗೆ ರೂ.3 ಕೋಟಿಗೂ ಹೆಚ್ಚು ವೆಚ್ಚ ಮಾಡಿದ್ದರೂ, ಕಳಪೆ ಮೂಲಸೌಕರ್ಯದಿಂದ ಜನರು ಇನ್ನೂ ತೊಂದರೆ ಅನುಭವಿಸುತ್ತಿದ್ದಾರೆ ಎಂಬುದು ಬಿಎನ್‌ಪಿಯ ದತ್ತಾಂಶ ವಿಶ್ಲೇಷಣೆಯಿಂದ ತಿಳಿದುಬಂದಿದೆ ಎಂದು ಹೇಳಿದ್ದಾರೆ. -ನರಸಿಂಹನ್

ಮಿನಿ ನ್ಯೂಸ್

ಮಾರ್ಟಳ್ಳಿ ಕ್ರೈಸ್ತರಿಂದ ಸಮಾಧಿ ಹಬ್ಬ ಆಚರಣೆ

• ಉದಯವಾಹಿನಿ, ಹನೂರು

ತಾಲ್ಲೂಕಿನ ಮಾರ್ಟಳ್ಳಿ ಗ್ರಾಮದ ಸ್ಮಶಾನದಲ್ಲಿ ಸೋಮವಾರ ಕ್ರೈಸ್ತರು ತಮ್ಮ ಪೂರ್ವಿಕರ ಸಮಾಧಿಗಳಿಗೆ ವಿಶೇಷ ಪ್ರಾರ್ಥನೆ ಸಲ್ಲಿಸುವ ಮೂಲಕ ಸಮಾಧಿ ಹಬ್ಬವನ್ನು ಭಕ್ತಿ ಭಾವದಿಂದ ಆಚರಿಸಿದರು.

ಪ್ರತಿ ವರ್ಷ ನವೆಂಬರ್ 2ರಂದು ಪೂರ್ವಿಕರ ಸಮಾಧಿಗಳಿಗೆ ಪೂಜೆ ಸಲ್ಲಿಸುವುದು ಕ್ರೈಸ್ತರ ಸಂಪ್ರದಾಯವಾಗಿದೆ. ಅದರಂತೆ ಈ ಬಾರಿಯೂ ಸಮಾಧಿಗಳಿಗೆ ಸುಣ್ಣ ಮತ್ತು ಬಣ್ಣ ಬಳಿದು, ಸ್ವಚ್ಛಗೊಳಿಸಿ ಹಬ್ಬದ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸಮಾಧಿಗಳನ್ನು ವಿವಿಧ ಬಗೆಯ ಪುಷ್ಪಗಳಿಂದ ಸುಂದರವಾಗಿ ಅಲಂಕರಿಸಲಾಗಿತ್ತು. ಈ ಸಂದರ್ಭದಲ್ಲಿ ಧರ್ಮಕೇಂದ್ರದ ಗುರುಗಳಾದ ಫಾ. ಡಾ. ಎಂ. ವಿನ್ಸೆಂಟ್ ಅವರು ದಿವ್ಯ ಬಲಿ ಪೂಜೆಯನ್ನು ನೆರವೇರಿಸಿದರು.

ಫಾ. ಸಂತಿಯಾಗು, ಫಾ. ಕುಮಾರ್, ಫಾ. ಕಾರ್ತಿಕ್ ಸೇರಿದಂತೆ ಇತರ ಗುರುಗಳ ಸಮ್ಮುಖದಲ್ಲಿ ವಿಶೇಷ ಪ್ರಾರ್ಥನೆಗಳು ಹಾಗೂ ಪೂಜಾ ವಿಧಿವಿಧಾನಗಳು ನೆರವೇರಿದವು. ಪೂರ್ವಿಕರ ಕುಟುಂಬಸ್ಥರು ತಮ್ಮ ಕುಟುಂಬದ ಸಮಾಧಿಗಳ ಮೇಲೆ ಮೇಣದ ಬತ್ತಿಗಳನ್ನು ಬೆಳಗಿಸಿ, ಪ್ರಾರ್ಥನೆ ಸಲ್ಲಿಸಿದರು.

ಬೊಮ್ಮಲಾಪುರದಲ್ಲಿ ಬೀದಿನಾಯಿಗಳ ಹಾವಳಿ: ಕೊಟ್ಟಿಗೆಯಲ್ಲಿದ್ದ ಮೂರು ಕರುಗಳ ಮೇಲೆ ದಾಳಿ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದಲ್ಲಿ ಬೀದಿನಾಯಿಗಳ ಹಿಂಡು ಕೊಟ್ಟಿಗೆಗೆ ನುಗ್ಗಿ ಮೂರು ಕರುಗಳ ಮೇಲೆ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ.

ಗ್ರಾಮದಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಜಾನುವಾರುಗಳ ಮೇಲೆ ನಿರಂತರ ದಾಳಿ ನಡೆಯುತ್ತಿರುವುದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಕಳೆದ ಎರಡು ದಿನಗಳಿಂದ ಕರುಗಳ ಮೇಲೆ ದಾಳಿ ನಡೆಸುತ್ತಿದ್ದ ನಾಯಿಗಳ ಹಿಂಡು, ಭಾನುವಾರ ಬೆಳಗ್ಗೆ ಗ್ರಾಮದ ಶ್ರೀಕಂಠ ಎಂಬುವರ ಮನೆಯ ಮುಂದೆ ಕಟ್ಟಿಹಾಕಿದ್ದ ಕರುಗಳ ಮೇಲೆ ದಾಳಿಗೆ ಮುಂದಾಗಿತ್ತು. ಇದರಿಂದ ಎಚ್ಚೆತ್ತ ರೈತರು ಕರುಗಳನ್ನು ಕೊಟ್ಟಿಗೆಯಲ್ಲಿ ಕೂಡಿಹಾಕಿದ್ದರು.

ಆದರೆ ಸೋಮವಾರ ಬೆಳಗ್ಗೆ ಕೊಟ್ಟಿಗೆಗೆ ನುಗ್ಗಿದ ನಾಯಿಗಳು ಮೂರು ಕರುಗಳ ಮುಖ, ಕಿವಿ ಹಾಗೂ ಕಾಲುಗಳನ್ನು ಕಚ್ಚಿ ಗಾಯಗೊಳಿಸಿವೆ. ಕರುಗಳ ಅರಚಾಟ ಕೇಳಿ ಎಚ್ಚೆತ್ತ ಮನೆಯವರು ಅಕ್ಕಪಕ್ಕದ ಗ್ರಾಮಸ್ಥರ ಸಹಾಯದಿಂದ ನಾಯಿಗಳನ್ನು ಓಡಿಸಿದ್ದಾರೆ.

ವಿಷಯ ತಿಳಿದ ಗ್ರಾಮ ಪಂಚಾಯಿತಿ ಪಿಡಿಒ ಶ್ರೀನಿವಾಸ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೀದಿನಾಯಿಗಳ ದಾಳಿಯಿಂದ ಗ್ರಾಮಸ್ಥರು ಭೀತಿಗೊಳಗಾಗಿದ್ದು, ಮಕ್ಕಳು ಹಾಗೂ ಜಾನುವಾರುಗಳ ಸುರಕ್ಷತೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಕೂಡಲೇ ಬೀದಿನಾಯಿಗಳ ಹಾವಳಿಗೆ ಕಡಿವಾಣ ಹಾಕುವಂತೆ ಪಂಚಾಯಿತಿ ಅಧಿಕಾರಿಗಳಿಗೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಗ್ರಾಮೀಣ ಸೊಗಡು ಪಸರಿಸಿದ ಬೆಳದಿಂಗಳಲ್ಲಿ ಹಳ್ಳಿ ಹಬ್ಬ

ಕಾರ್ಯಕ್ರಮಕ್ಕೂ ಮುನ್ನ ಕದಲೂರು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಮಹಿಳೆಯರಿಗೆ ಹಮ್ಮಿಕೊಂಡಿದ್ದ ರಂಗೋಲಿ ಸ್ಪರ್ಧೆ ಹಾಗೂ ಹಗ್ಗ-ಜಗ್ಗಾಟ ಸ್ಪರ್ಧೆ ರಂಜಿಸಿತು

• ಉದಯವಾಹಿನಿ, ಮದ್ದೂರು

1 ಜಾನಪದ ಕಲೆ, ಕ್ರೀಡೆಗಳನ್ನು ಉಳಿಸಿ
2 ಜನಪದ ಮಹತ್ವದ ಸ್ಥಾನ ಪಡೆದಿವೆ
3 ಊರಿನ ಜನರ ನಡುವೆ ಅನ್ನೋನ್ಯತೆ

ತಾಲ್ಲೂಕಿನ ಕದಲೂರಿನಲ್ಲಿ ಸೋಮವಾರ ರಾತ್ರಿ ನಡೆದ ಬೆಳದಿಂಗಳಲ್ಲಿ ಹಳ್ಳಿ ಹಬ್ಬ, ಅಂದು-ಇಂದು' ಕಾರ್ಯಕ್ರಮವು ಗ್ರಾಮೀಣ ಸೊಬಗು, ಸೊಗಡನ್ನು ಪಸರಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ, ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್ ಹಾಗೂ ಕದಲೂರು ಶ್ರೀ ಪಟ್ಟಲದಮ್ಮ ಸೇವಾ ಸಮಿತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು. ವಿಶೇಷವಾಗಿ ಕಾರ್ಯಕ್ರಮದಲ್ಲಿ ಬೆಳದಿಂಗಳನ್ನು ಕುರಿತ ಸ್ವಾಗತ ನೃತ್ಯ, ತಮಟೆ, ನಗಾರಿ ವಾದನ, ಪೂಜೆ, ಪಟ, ರಂಗಕುಣಿತ, ವೀರಗಾಸೆ, ಮೂಡಲಪಾಯ ಯಕ್ಷಗಾನ, ದೇವಿ ಮಹಾತ್ಮಿಯ ಒಂದು ದೃಶ್ಯ, ಜಾನಪದ ಗೀತ ಗಾಯನಗಳು ಮತ್ತು ಕಥೆಗಳ ತುಣುಕು, ಗ್ರಾಮೀಣ ನುಡಿ, ಸೊಗಡು, ಸೋಬಾನೆ ಪದ, ಕೋಲಾಟ, ಜಾನಪದ ಹಾಸ್ಯ, ಜಾದು ಕಾರ್ಯಕ್ರಮ, ಗಾರುಡಿಗೊಂಬೆ, ಕೀಲು ಕುದುರೆ, ಗೊಂಬೆ ಕುಣಿತ, ಹುಲಿವೇಷ ನೃತ್ಯ ಸೇರಿದಂತೆ ವಿವಿಧ ಕಲಾಪ್ರಕಾರಗಳನ್ನು ಕಲಾವಿದರು ಪ್ರದರ್ಶಿಸಿ ನೆರೆದಿದ್ದ ಜನರ ಗಮನ ಸೆಳೆದರು. ಕಾರ್ಯಕ್ರಮಕ್ಕೂ ಮುನ್ನ ಕದಲೂರು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಮಹಿಳೆಯರಿಗೆ ಹಮ್ಮಿಕೊಂಡಿದ್ದ ರಂಗೋಲಿ ಸ್ಪರ್ಧೆ ಹಾಗೂ ಹಗ್ಗ-ಜಗ್ಗಾಟ ಸ್ಪರ್ಧೆ ರಂಜಿಸಿತು.

ಸ್ಪರ್ಧೆಗೆ ಚಾಲನೆ ನೀಡಿದ ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ವಿನುತ ಉದಯ್, 'ಗ್ರಾಮೀಣ ಸಂಸ್ಕೃತಿ, ಪರಂಪರೆ ಹಾಗೂ ಹಿನ್ನೆಲೆಯನ್ನು ಯುವಜನರಿಗೆ ತಿಳಿಸುವ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.


ಉದಯವಾಹಿನಿ ಚಿತ್ರ

> ಹಳ್ಳಿ ಹಬ್ಬಗಳು, ಗ್ರಾಮ ಸಂಸ್ಕೃತಿ ಮತ್ತು ಜನಪದ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದಿವೆ. ಇವು ಕೇವಲ ಧಾರ್ಮಿಕ ಆಚರಣೆಗಳಷ್ಟೇ ಅಲ್ಲದೆ, ಊರಿನ ಜನರ ನಡುವೆ ಅನ್ನೋನ್ಯತೆ, ಭ್ರಾತೃತ್ವ ಮತ್ತು ಸಹಬಾಳ್ವೆಯನ್ನು ಗಟ್ಟಿಗೊಳಿಸುವ ಸಾಂಸ್ಕೃತಿಕ ವೇದಿಕೆಗಳಾಗಿವೆ ಎಂದರು.
>
> -ಶಾಸಕ ಕೆ.ಎಂ. ಉದಯ್

ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಎಂ. ಉದಯ್, 'ಗ್ರಾಮೀಣ ಸಂಸ್ಕೃತಿ, ಪರಂಪರೆ, ಸೊಬಗನ್ನು ಸೂಸುವ ನಮ್ಮ ಮಣ್ಣಿನ ಹಿರಿಯರ ಮೂಲ ಕಲೆಯಾದ ಜಾನಪದ ಕಲೆ, ಕ್ರೀಡೆಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಸಲುವಾಗಿ ಗ್ರಾಮದಲ್ಲಿ ಕಾರ್ಯಕ್ರಮ ಆಯೋಜಿಸಿದ್ದೇವೆ' ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ವಸುಂಧರಾ, 'ಕದಲೂರಿಗೆ ತನ್ನದೇ ಆದ ಹೆಸರಿದ್ದು ಇದೇ ಗ್ರಾಮದ ಮಗಳಾದ ನಾನು ಇಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿಯಾಗಿರುವುದು ನನಗೆ ಖುಷಿಯ ವಿಷಯ' ಎಂದು ಹೇಳಿದರು.

ಯುವಜನರಿಗೆ ತಿಳಿಸುವ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಗ್ರಾಮೀಣ ಸೊಗಡನ್ನು ಬಿಂಬಿಸುವ ನಿಟ್ಟಿನಲ್ಲಿ ಶಾಸಕ ಕೆ.ಎಂ. ಉದಯ್ ಅವರು ಹುಟ್ಟೂರಿನಲ್ಲಿ ಜಾನಪದ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಆಯೋಜಿಸಿರುವುದು ಪ್ರಶಂಸನೀಯ ಎಂದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್ ಗೌಡ, ಮನ್ ಮುಲ್ ಅಧ್ಯಕ್ಷ ಹರೀಶ್, ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ಸಹಾಯಕ ನಿರ್ದೇಶಕ ಸಿ.ರಾಮಣ್ಣ, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಕೆ.ಟಿ.ಬೋರಯ್ಯ, ಚುಂಚಶ್ರೀ ಗೆಳೆಯರ ಬಳಗದ ಅಧ್ಯಕ್ಷ ಡಾ.ಬಿ.ಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಿ.ವಿ.ನಂದೀಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ತಿಮ್ಮೇಗೌಡ, ರೋಟರಿ ಅಧ್ಯಕ್ಷ ಲೋಕೇಶ್, ಹಿರಿಯ ಕಲಾವಿದ ಸಿ.ಕೃಷ್ಣಗೌಡ, ಕ.ಜಾ.ಅ ಸದಸ್ಯ ಸಂಚಾಲಕಿ ಡಾ.ಎಂ.ಕೆಂಪಮ್ಮ ಭಾಗವಹಿಸಿದ್ದರು.

ಕಾರ್ಯಕ್ರಮದ ಮೆರುಗು

ಕಾರ್ಯಕ್ರಮದಲ್ಲಿ ಕಜ್ಜಾಯ ಅವರೆಕಾಳು ಕೂಟು ಮುದ್ದೆ ಅನ್ನ-ಸಾಂಬಾರ್ ಮಸಾಲೆ ವಡೆ ಮಜ್ಜಿಗೆ ಸೇರಿದಂತೆ ಗ್ರಾಮೀಣ ಸೊಗಡಿನ ಊಟ ಉಣಬಡಿಸಿದ್ದು ವಿಶೇಷವಾಗಿತ್ತು. ಗ್ರಾಮದ ಬೀದಿಗಳಲ್ಲಿ ಎತ್ತಿನ ಗಾಡಿಗಳೊಂದಿಗೆ ವಿವಿಧ ಜನಪದ ಕಲಾಪ್ರಕಾರಗಳ ಮೆರವಣಿಗೆ ಕಾರ್ಯಕ್ರಮದ ಮೆರುಗು ಹೆಚ್ಚಿಸಿತು.

ವಕೀಲರ ಹತ್ಯೆ ಖಂಡಿಸಿ

ಗುಂಡ್ಲುಪೇಟೆಯಲ್ಲಿ ವಕೀಲರ ಪ್ರತಿಭಟನೆ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ವಕೀಲರ ಹತ್ಯೆ ಹಾಗೂ ರಾಜ್ಯಾದ್ಯಂತ ವಕೀಲರ ಮೇಲೆ ನಡೆಯುತ್ತಿರುವ ಹಲ್ಲೆ ಮತ್ತು ದೌರ್ಜನ್ಯಗಳನ್ನು ಖಂಡಿಸಿ, ಗುಂಡ್ಲುಪೇಟೆ ವಕೀಲರ ಸಂಘದ ವತಿಯಿಂದ ಇಂದು ನ್ಯಾಯಾಲಯದ ಕಾರ್ಯಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಲಾಯಿತು.

ಬೆಂಗಳೂರಿನಲ್ಲಿ ಹಾಗೂ ರಾಜ್ಯದ ವಿವಿಧೆಡೆ ವಕೀಲರ ಸಂಘಟನೆಗಳು ನಡೆಸುತ್ತಿರುವ ಪ್ರತಿಭಟನೆ ಮತ್ತು ಹೋರಾಟಕ್ಕೆ ಬೆಂಬಲ ಸೂಚಿಸಿದ ಗುಂಡ್ಲುಪೇಟೆ ವಕೀಲರು, ವಕೀಲರ ಮೇಲಿನ ಹಲ್ಲೆ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಕೀಲರ ಸಂರಕ್ಷಣಾ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಿ, ಅಗತ್ಯ ತಿದ್ದುಪಡಿಗಳ ಮೂಲಕ ಕರ್ನಾಟಕದಾದ್ಯಂತ ವಕೀಲರಿಗೆ ಸೂಕ್ತ ಭದ್ರತೆ ಮತ್ತು ಕಾನೂನು ರಕ್ಷಣೆ ಒದಗಿಸಬೇಕು.

ವಕೀಲರು ನಿರ್ಭೀತಿಯಿಂದ ತಮ್ಮ ವೃತ್ತಿ ನಿರ್ವಹಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ವಕೀಲರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಸರ್ಕಾರ ತಕ್ಷಣವೇ ಪರಿಣಾಮಕಾರಿ ಕ್ರಮಗಳನ್ನು ಜಾರಿಗೊಳಿಸಬೇಕು. ವಕೀಲರ ಜೀವ ಮತ್ತು ವೃತ್ತಿಗೆ ಭದ್ರತೆ ಒದಗಿಸುವ ನಿಟ್ಟಿನಲ್ಲಿ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದರು.

ಹಿರಿಯ ವಕೀಲರಾದ ಬಿ.ಎಸ್. ಶಿವಣ್ಣ, ಎಚ್.ಎಸ್. ಪ್ರಭುಸ್ವಾಮಿ, ಸತ್ಯನಾರಾಯಣ, ಬೀರೇಗೌಡ, ಬಿ.ಎನ್. ಸಿದ್ದರಾಜು, ಎಚ್.ಎನ್. ಮಹೇಶ್, ನಂದೀಶ್ ಸೇರಿದಂತೆ ಗುಂಡ್ಲುಪೇಟೆ ವಕೀಲರ ಸಂಘದ ಹಿರಿಯ ಹಾಗೂ ಕಿರಿಯ ವಕೀಲರು, ಮಹಿಳಾ ವಕೀಲರು ಉಪಸ್ಥಿತರಿದ್ದು ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ಶೈಕ್ಷಣಿಕ ಸಂಸ್ಥೆಗಳಿಗೆ ಸೇವಾ ಶುಲ್ಕ ವಿಧಿಸಲು ಸಾಮಾನ್ಯ ಸಭೆಯಲ್ಲಿ ಒಮ್ಮತದ ನಿರ್ಣಯ

• ಉದಯವಾಹಿನಿ, ರಾಮನಗರ

ರಾಮನಗರ ನಗರಸಭೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರು ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ವತ್ತಿಗೆ ಸೇವಾ ಶುಲ್ಕ ವಿಧಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಮಂಗಳವಾರ ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ಒಮ್ಮತದ ನಿರ್ಣಯ ತೆಗೆದುಕೊಳ್ಳಲಾಯಿತು.

ರಾಮನಗರ ನಗರಸಭೆ ಸಭಾಂಗಣದಲ್ಲಿ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಸಾಮಾನ್ಯ ಸಭೆ ನಡೆಯಿತು. ಈ ಸಂಧರ್ಭದಲ್ಲಿ ಅಧ್ಯಕ್ಷರು ವಿಷಯ ಪ್ರಸ್ತಾಪಿಸಿದಾಗ ಎಲ್ಲಾ ಸದಸ್ಯರು ಒಮ್ಮತದಿಂದ ಅನುಮೋದಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಗಳು ತಮಗಿಷ್ಟಬಂದಂತೆ ಪೋಷಕರಿಂದ ಹಣ ಸುಲಿಗೆ ಮಾಡುತ್ತಿರುವುದರಿಂದ ಸೇವಾ ಶುಲ್ಕ ವಿಧಿಸುವುದರಿಂದ ಯಾವುದೆ ರೀತಿಯ ತೊಂದರೆ ಆಗುವುದಿಲ್ಲ ಎಂದರು.

ವಿವಿಧ ಯೋಜನೆಗಳಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳ ಅನುಮೋದನೆ, ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆಗೆ ಸೇರಿದ್ದು ಖಾಲಿಯುರುವ ವಾಣಿಜ್ಯ ಮಳಿಗೆಗಳನ್ನು ಹರಾಜು ಹಾಕಲು ಜಿಲ್ಲಾಧಿಕಾರಿಗಳ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವುದು, ನಗರಸಭೆ ಕಚೇರಿ ಮೆಲ್ಬಾಗದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿರುವ ಸಭಾಂಗಣಕ್ಕೆ ಡಿ.ದೇವರಾಜ ಅರಸು ಹೆಸರು ನಾಮಕರಣ ಮಾಡುವುದು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚಿಸಲಾಯಿತು.

ಹಲವು ವರ್ಷಗಳಿಂದ ಸುಪರ್ದಿಯಲ್ಲಿರುವ ವಿವಿಧ ಸಂಘ ಸಂಸ್ಥೆಗಳಿಗೆ ಈಗಾಗಲೆ ನೀಡಲಾಗಿರುವ ನಿವೇಶನಗಳಿಗೆ ಸರ್ಕಾರಿ ಮಂಜೂರಾತಿ ಪಡೆಯಲು ಸಲ್ಲಿಸುವ ವಿಚಾರಕ್ಕೆ ಅನುಮೋದನೆ ನೀಡಲಾಯಿತು.

ಬೀದಿ ನಾಯಿಗಳ ಹಾವಳಿ ತಪ್ಪಿಸಲು ಸಂತಾನ ಹರಣ ಚಿಕಿತ್ಸೆ ನಡೆಸಲು ಚನ್ನಪಟ್ಟಣ ತಾಲ್ಲೂಕಿನ ಯಲಚಿಪಾಳ್ಯದಲ್ಲಿ ಕಟ್ಟಡ ಬಾಡಿಗೆ ಪಡೆಯಲು, ಈಗಾಗಲೆ ಬಿ ಖಾತ ಪಡೆದಿರುವ ಸ್ವತ್ತುಗಳಿಗೆ ಎ ಖಾತೆ ನೀಡುವುದು ಸೇರಿದಂತೆ ಸ್ವತ್ತುಗಳ ಖಾತೆ ಹಂಚಿಕೆ ತ್ವರಿತಗೊಳಿಸುವುದು, ನೀರಿನ ತೆರಿಗೆ ಹಾಗೂ ಇತರ ತೆರಿಗೆ ಸಂಗ್ರಹಿಸಲು ಮಹಿಳಾ ಸ್ವ ಸಹಾಯ ಸಂಘಗಳನ್ನು ಆಯ್ಕೆ ಮಾಡಲು ಒಮ್ಮತದ ತೀರ್ಮಾನ ತೆಗೆದುಕೊಳ್ಳಲಾಯಿತು. ಬಸ್ ನಿಲ್ದಾಣ, ಉದ್ಯಾನವನಗಳಲ್ಲಿ ಸಾರ್ವಜನಿಕರಿಗೆ ಓದಲು ದಿನಪತ್ರಿಕೆ ವ್ಯವಸ್ಥೆ ಮಾಡುವುದು, ಅಸಂಘಟಿತ ಕಾರ್ಮಿಕರಿಗೆ ವಿಮೆ ನೀಡಲು ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರಕ್ಕೆ ಅನುಮೋದನೆ ನೀಡಲಾಯಿತು.ಸ್ಥಾಯಿ ಸಮಿತಿ ಅಧ್ಯಕ್ಷ ಮಹಮದ್ ಆರೀಫ್, ಪೌರಾಯುಕ್ತ ಡಾ.ಜಯಣ್ಣ, ನಗರಸಭೆ ಮಾಜಿ ಅಧ್ಯಕ್ಷರಾದ ಬಿ.ಸಿ.ಪಾರ್ವತಮ್ಮ, ಪವಿತ್ರ, ಸದಸ್ಯರಾದ ಮಂಜುನಾಥ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

ಭದ್ರ ಅಭಯಾರಣ್ಯದಿಂದ ಗ್ರಾಮಸ್ಥರಿಗೆ ವಿವಿಧ ಸೌಲಭ್ಯ

• ಉದಯವಾಹಿನಿ, ತರೀಕೆರೆ

ಭದ್ರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ, ಚಿರತೆ, ಕಾಡಾನೆ, ಕಾಡುಕೋಣ, ಕಡವೆ, ಜಿಂಕೆ ಸೇರಿದಂತೆ ವಿವಿಧ ವನ್ಯಜೀವಿ ಹಾಗೂ ಪಕ್ಷಿಗಳ ಸಂತತಿ ಗಣನೀಯವಾಗಿ ಹೆಚ್ಚಳವಾಗಿರುವುದಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಯ ನಿಸ್ವಾರ್ಥ ಸೇವೆ ಹಾಗೂ ಕಟ್ಟುನಿಟ್ಟಿನ ಕಾರ್ಯನಿರ್ವಹಣೆಯೇ ಪ್ರಮುಖ ಕಾರಣ ಎಂದು ಭದ್ರ ಹುಲಿ ಸಂರಕ್ಷಿತ ಪ್ರದೇಶದ ಕ್ಷೇತ್ರ ನಿರ್ದೇಶಕ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಪುಲ್ಕಿತ್ ಮೀಣಾ ಹೇಳಿದರು.

ಭದ್ರ ವನ್ಯಜೀವಿ ವಿಭಾಗದ ತಣಿಗೆಬೈಲು ವಲಯ ಅರಣ್ಯ ಇಲಾಖೆ ವತಿಯಿಂದ ಜೈಪುರ ಗ್ರಾಮದಲ್ಲಿ ಮಹಿಳಾ ಹೊಲಿಗೆ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ, ಅರ್ಹ ಮಹಿಳೆಯರಿಗೆ ನೀಡಲಾಗುತ್ತಿರುವ ಉಚಿತ ಹೊಲಿಗೆ ತರಬೇತಿ ಕಾರ್ಯವನ್ನು ವೀಕ್ಷಿಸಿ ಅವರು ಮಾತನಾಡಿದರು.

ಜೈಪುರ ಗ್ರಾಮದ ಮಹಿಳೆಯರಷ್ಟೇ ಅಲ್ಲದೆ ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರಿಗೂ ಈ ಕೇಂದ್ರದ ಮೂಲಕ ಹೊಲಿಗೆ ತರಬೇತಿ ನೀಡಲಾಗುವುದು. ಅಗತ್ಯವಿರುವ ಮಹಿಳೆಯರು ತರಬೇತಿಯ ಸದುಪಯೋಗ ಪಡೆದುಕೊಂಡು ಬಟ್ಟೆ ಹೊಲಿಯುವ ವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು. ಇದರಿಂದ ತಮ್ಮ ಕುಟುಂಬದ ಆರ್ಥಿಕ ಅಭಿವೃದ್ಧಿಗೂ ನೆರವಾಗಲಿದೆ ಎಂದು ತಿಳಿಸಿದರು.

ಲಕ್ಕವಳ್ಳಿ ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಸಾಗರ್ ಮಾತನಾಡಿ, ಭದ್ರ ವನ್ಯಜೀವಿ ಅರಣ್ಯ ವಿಭಾಗದ ವತಿಯಿಂದ ಗ್ರಾಮೀಣ ಪ್ರದೇಶದ ಜನರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.


ಉದಯವಾಹಿನಿ ಚಿತ್ರ

ಹೊನ್ನೇಗೌಡನಹಳ್ಳಿಯಲ್ಲಿ ಹಾಡಹಗಲೇ ಹುಲಿ ಪ್ರತ್ಯಕ್ಷ: ಕಬ್ಬಿನ ತೋಟದ ಬಳಿ ನವಿಲು ಬೇಟೆಗೆ ಹೊಂಚು ಹಾಕಿದ್ದ ವ್ಯಾಘ್ರ : ಗ್ರಾಮಸ್ಥರಲ್ಲಿ ಆತಂಕ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಹೊನ್ನೇಗೌಡನಹಳ್ಳಿಯಲ್ಲಿ ಹಾಡಹಗಲೇ ಹುಲಿ ಪ್ರತ್ಯಕ್ಷವಾಗಿದ್ದು, ಸ್ಥಳೀಯ ರೈತರ ಮೊಬೈಲ್ ಕ್ಯಾಮೆರಾದಲ್ಲಿ ಹುಲಿಯ ಚಲನವಲನ ಸೆರೆಯಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ ವಲಯಕ್ಕೆ ಸೇರಿದ ಗ್ರಾಮದ ಚನ್ನಬಸಪ್ಪ ಎಂಬವರ ಜಮೀನಿನಲ್ಲಿ ಹುಲಿ ಕಾಣಿಸಿಕೊಂಡಿದೆ. ಕಬ್ಬಿನ ತೋಟದ ಬದಿಯಲ್ಲಿ ನವಿಲು ಬೇಟೆಗಾಗಿ ಹೊಂಚು ಹಾಕಿ ಕುಳಿತಿದ್ದ ವ್ಯಾಘ್ರವನ್ನು ಕಂಡ ರೈತರು ಮೊಬೈಲ್‌ನಲ್ಲಿ ದೃಶ್ಯ ಸೆರೆಹಿಡಿದಿದ್ದಾರೆ. ಕಳೆದ ಹಲವು ದಿನಗಳಿಂದ ಹೊನ್ನೇಗೌಡನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ವ್ಯಾಪ್ತಿಯಲ್ಲಿ ಹುಲಿ ಸಂಚರಿಸುತ್ತಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಕಳೆದ ಬಾರಿ ಅರಣ್ಯ ಇಲಾಖೆ ನಡೆಸಿದ ಕಾರ್ಯಾಚರಣೆಯಲ್ಲೂ ಹುಲಿ ಅಧಿಕಾರಿಗಳಿಗೆ ಚಳ್ಳೆಹಣ್ಣು ತಿನ್ನಿಸಿ ತಪ್ಪಿಸಿಕೊಂಡಿತ್ತು ಎನ್ನಲಾಗಿದೆ. ಹುಲಿ ಪ್ರತ್ಯಕ್ಷವಾದ ವಿಷಯವನ್ನು ರೈತರು ಅರಣ್ಯ ಇಲಾಖೆಗೆ ತಿಳಿಸಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ಹುಲಿಯ ಚಲನವಲನ ಪತ್ತೆಹಚ್ಚಲು ಡ್ರೋನ್ ಕಾರ್ಯಾಚರಣೆಗೆ ಮುಂದಾಗಿದ್ದಾರೆ. ನಿರಂತರವಾಗಿ ಹುಲಿ ಸಂಚರಿಸುತ್ತಿರುವುದು ಭಯದ ವಾತಾವರಣ ಸೃಷ್ಟಿಸಿದೆ ಹಾಗಾಗಿ ಹುಲಿಯನ್ನು ಸೆರೆಹಿಡಿಯಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾಮೂಹಿಕ ನಾಯಕತ್ವ ರೈತ ಸಂಘದ ಭದ್ರಪ್ಪ ಒತ್ತಾಯಿಸಿದ್ದಾರೆ.

ಚಾಮುಂಡಿ ಬೆಟ್ಟದಲ್ಲಿ ಆನ್‌ಲೈನ್ ಬುಕ್ಕಿಂಗ್ ಸೇವೆ ಆರಂಭ

ದರ್ಶನದ ಬಳಿಕ ಭಕ್ತರಿಂದ ವಾಪಸ್ ಪಡೆದು ಮತ್ತೆ ಬೇರೆ ಭಕ್ತರಿಗೆ ಮಾರಾಟ ಮಾಡುತ್ತಿರುವುದು ಬೆಳಕಿಗೆ ಬಂದ ಹಿನ್ನೆಲೆ ಈ ಕ್ರಮ ಕೈಗೊಳ್ಳಲಾಗಿದೆ.


• ಉದಯವಾಹಿನಿ, ಮೈಸೂರು

1 ವರ್ಗಾಯಿಸಿ ಸುಲಿಗೆ ಮಾಡುತ್ತಿದ್ದರು
2 ಆ್ಯಪ್ ವೆಬ್ ಸೈಟ್ ಅಸ್ತಿತ್ವಕ್ಕೆ ತಂದಿದೆ
3 ಚಾಮುಂಡೇಶ್ವರಿ ಅಭಿಷೇಕಕ್ಕೆ 1000

ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದರ್ಶನ ಹಾಗೂ ವಿವಿಧ ಸೇವೆಗಳಿಗಾಗಿ ನ. 1ರಿಂದ ಹೊಸದಾಗಿ ವೆಬ್‌ಸೈಟ್ ಆರಂಭಿಸಿದ್ದು, ಈ ಮೂಲಕ ಶಿರಡಿ ಮಾದರಿಯ ಆನ್‌ಲೈನ್ ದರ್ಶನ ವ್ಯವಸ್ಥೆ ಮಾಡಲಾಗಿದೆ. ಈ ಆನ್‌ಲೈನ್ ಸೇವೆಯ ಮೂಲಕ ದರ್ಶನದ ವ್ಯವಸ್ಥೆ ಸುಲಭ ಆಗಲಿದೆ. ಟಿಕೆಟ್ ಹಾಗೂ ಸೇವೆ ಹೆಸರಿನಲ್ಲಿ ಆಗುತ್ತಿರುವ ಕಳ್ಳಾಟಕ್ಕೆ ಬ್ರೇಕ್ ಬೀಳಲಿದೆ.

ಪ್ರಸಿದ್ಧ ಧಾರ್ಮಿಕ ನೆಲೆ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಅಭಿಷೇಕ ಸೇರಿದಂತೆ ವಿವಿಧ ಸೇವಾ ಟಿಕೆಟ್ ನೀಡಲು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಹೊಸದಾಗಿ ಸುಧಾರಿತ ವೆಬ್ ಬೇಸ್ಡ್ ಆಪ್ ವೆಬ್ ಸೈಟ್ ಅಸ್ತಿತ್ವಕ್ಕೆ ತಂದಿದೆ.

ಇನ್ನು ಮುಂದೆ ವಿವಿಧ ಸೇವೆಗಾಗಿ ಆನ್‌ಲೈನ್ ಬುಕ್ಕಿಂಗ್ ಮಾಡಿಕೊಳ್ಳಬೇಕಾಗಿದ್ದು, ದೇವಾಲಯದಲ್ಲಿ ನೀಡುತ್ತಿದ್ದ ಟಿಕೆಟ್ ವ್ಯವಸ್ಥೆ ಸ್ಥಗಿತಗೊಳಿಸಲಾಗುತ್ತಿದೆ. ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದನ್ನೇ ಕೆಲವರು ಬಂಡವಾಳ ಮಾಡಿಕೊಂಡು ಬೆಳಗ್ಗೆ ಖರೀದಿಸಿದ ಅಭಿಷೇಕದ ಟಿಕೆಟ್ ಅನ್ನು ಹಲವು ಮಂದಿಗೆ ವರ್ಗಾಯಿಸಿ ಸುಲಿಗೆ ಮಾಡುತ್ತಿದ್ದರು. ಅಲ್ಲದೇ, ವಿವಿಧ ಸೇವೆಗಾಗಿ ಟಿಕೆಟ್ ಪಡೆದವರು ಹೆಚ್ಚಾಗುತ್ತಿದ್ದರಿಂದ ಸರದಿ ಸಾಲಿನಲ್ಲಿ ಭಕ್ತರು ದರ್ಶನ ಪಡೆಯಲು ವಿಳಂಬವಾಗುತ್ತಿತ್ತು. ಈ ಎಲ್ಲಾ ನ್ಯೂನತೆ ಸರಿಪಡಿಸಲು ಇದೀಗ ಹೊಸ ವೆಬ್‌ಸೈಟ್ ಸ್ಥಾಪಿಸಲಾಗಿದ್ದು, ಅದರಲ್ಲಿ ದರ್ಶನ ಸಮಯ, ಸೇವೆ, ಸೇವಾ ಸಮಯ, ಹಬ್ಬ, ಬೆಟ್ಟದ ಇತಿಹಾಸ ಇತರ ಮಾಹಿತಿಯನ್ನು ಪಡೆಯಬಹುದಾಗಿದೆ.


ಉದಯವಾಹಿನಿ ಚಿತ್ರ

ಚಾಮುಂಡೇಶ್ವರಿ ಅಭಿಷೇಕಕ್ಕೆ 1000 ರೂ., ವಿಶೇಷ ದರ್ಶನಕ್ಕೆ 200 ರೂ. ಹಾಗೂ ರೂ. ಟಿಕೆಟ್ ನಿಗದಿ ಮಾಡಲಾಗಿದೆ. ಇದುವರೆಗೆ ಕೌಂಟರ್‌ನಲ್ಲಿ ಟಿಕೆಟ್ ನೀಡಲಾಗುತ್ತಿತ್ತು. ಆದರೆ, ನವೆಂಬರ್ 1 ರಿಂದ ಆನ್‌ಲೈನ್ ಟಿಕೆಟ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಒಬ್ಬರಿಗೆ ಒಂದು ಅಭಿಷೇಕದ ಟಿಕೆಟ್ ನೀಡಲಾಗುತ್ತದೆ. ಇದರಲ್ಲಿ ಇಬ್ಬರಿಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ. ಅಲ್ಲದೆ, ಟಿಕೆಟ್ ದುರುಪಯೋಗವಾಗದಂತೆ ಕಟ್ಟೆಚ್ಚರ ವಹಿಸಲು ಕೆವೈಸಿ ಕಡ್ಡಾಯಗೊಳಿಸಲಾಗಿದೆ. ದರ್ಶನಕ್ಕೆ ಬರುವ ವೇಳೆ ಆಧಾರ್ ಕಾರ್ಡ್ ತರಬೇಕಾಗಿದೆ. ಪ್ರತಿದಿನ ಬೆಳಗ್ಗೆ 6:30 ರಿಂದ 9 ಗಂಟೆ ಹಾಗೂ ಸಂಜೆ 7:30 ರಿಂದ 9 ಗಂಟೆವರೆಗೆ ಮಾತ್ರ ಅಭಿಷೇಕದ ಟಿಕೆಟ್ ಪಡೆದಿರುವ ಭಕ್ತರು ಗೇಟ್-2ರ ಮೂಲಕವೇ ದೇವಲಾಯ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

ದೇವಾಲಯದಲ್ಲಿ ಕುಂಕುಮ ಅಷ್ಟವತಾರ ಸೇವೆಗೆ 20 ರೂ. ಕುಂಕುಮ ತ್ರಿಶತಿ ಸೇವೆ 30 ರೂ. ಕುಂಕುಮ ಸಹಸ್ರನಾಮಾರ್ಚನೆ 110 ರೂ. ಸಪ್ತಶತಿ ಪಾರಾಯಣ ಸೇವೆಗೆ 110 ರೂ. ಪಂಚಾಮೃತ ಅಭಿಷೇಕ 220 ರೂ. ಪ್ರಕಾರೋತ್ಸವ 275 ರೂ. ಏಕವಾದ ಅಭಿಷೇಕ 300 ರೂ. ಏಕದಶಾವರ ಅಭಿಷೇಕ 550 ರೂ. ಸಿಂಹವಾಹನೋತ್ಸವ 550 ರೂ. ಮಹಾಪೂಜೆ 1100 ರೂ. ಬೆಳ್ಳಿರಥ ಸೇವೆ 2750 ರೂ. ದರ ಪಾವತಿಸಿ ಟಿಕೆಟ್ ಪಡೆಯಬಹುದು. ಪೂಜೆಗೆ ಸೇವಾ ಸಮಯವನ್ನು ನಿಗದಿ ಮಾಡಿಕೊಳ್ಳಬಹುದಾಗಿದೆ.

> ಅಭಿಷೇಕದ ಟಿಕೆಟ್ ದುರುಪಯೋಗವಾಗದಂತೆ ತಡೆಯಲು ಸಹಕಾರಿಯಾಗಿದೆ. ಭಕ್ತರಿಗೆ ಅನುಕೂಲವಾಗುವಂತೆ ಆನ್‌ಲೈನ್ ಟಿಕೆಟ್ ವಿತರಿಸಲಾಗುತ್ತದೆ ಎಂದು ತಿಳಿಸಿದ್ದರು.
>
> ಕಾರ್ಯದರ್ಶಿ ಡಾ. ಎಂ. ರೂಪ

ದರ್ಶನ ಪಡೆಯಲು ಸಮಯ ನಿಗದಿ

ದೇವಾಲಯಕ್ಕೆ ಬರುವ ವಿವಿಐಪಿಗಳು ದರ್ಶನ ಪಡೆಯಲು ಸಮಯ ನಿಗದಿ ಮಾಡುವ ಆಲೋಚನೆಯಿದ್ದು, ಅದಕ್ಕಾಗಿ ವೆಬ್‌ಸೈಟ್‌ನಲ್ಲಿ ನಮೂದಿಸಲು ಕ್ರಮ ಕೈಗೊಳ್ಳಲಾಗುವುದು. ನಿಗದಿತ ದೂರವಾಣಿ ಸಂಖ್ಯೆಗೆ ಮಾಹಿತಿ ನೀಡುವ ವ್ಯವಸ್ಥೆ ಜಾರಿಗೊಳಿಸಲು ನಿರ್ಧರಿಸಲಾಗಿದೆ.

ಕೋಲಾರ ಕಲಾವಿದರಿಂದ ನಾದಸ್ವರ ವಾದನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೋಲಾರ

ಸರ್ದಾರ್ ವಲ್ಲಭಭಾಯಿ ಪಟೇಲ್ ರವರ 151ನೇ ಜನ್ಮ ಜಯಂತಿಯ ಅಂಗವಾಗಿ ಭಾರತ ಸರ್ಕಾರ ಮತ್ತು ಗುಜರಾತ್ ಸರ್ಕಾರ ಜಂಟಿಯಾಗಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಏಕತಾ ದಿವಸ್ ಕಾರ್ಯಕ್ರಮದ ಪಥಸಂಚಲನದಲ್ಲಿ (ಪರೇಡ್) ಕೋಲಾರ ಜಿಲ್ಲೆಯ ಕಲಾವಿದರು ನಾದಸ್ವರ ವಾದನ ಪ್ರಸ್ತುತಪಡಿಸಿ ಗಮನ ಸೆಳೆದಿದ್ದಾರೆ. ಕೋಲಾರ ಜಿಲ್ಲೆಯ ಕೆಜಿಎಫ್ ತಾಲ್ಲೂಕಿನ ಕಂಗಾನಲ್ಲೂರು ಗ್ರಾಮದ ಗೋವಿಂದಸ್ವಾಮಿ ಹಾಗೂ ಕೋಲಾರ ತಾಲ್ಲೂಕಿನ ಚಲುವನಹಳ್ಳಿ ಗ್ರಾಮದ ಶ್ರೀನಾಥ್ ರವರು ಈ ಅತ್ಯಂತ ಪ್ರತಿಷ್ಠಿತ ಪರೇಡ್‌ನಲ್ಲಿ ನಾದಸ್ವರ ವಾದಿಸುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದಿಂದ ಒಟ್ಟು 20 ಮಂದಿ ಕಲಾವಿದರ ತಂಡ ನಾದಸ್ವರ ವಾದನ ಮಾಡಿದೆ. ಭಾರತದಾದ್ಯಂತ ಆಗಮಿಸಿದ್ದ ಒಟ್ಟು 120 ಮಂದಿ ಕಲಾವಿದರು ಶಹನಾಯಿ, ಡೋಲು ಮತ್ತು ನಾದಸ್ವರ ವಾದನಗಳ ಜುಗಲ್ಬಂದಿ ಮೂಲಕ ''ಸಾರೆ ಜಹಾನ್ ಸೇ ಅಚ್ಛಾ'' ದೇಶಭಕ್ತಿ ಗೀತೆಯನ್ನು ಪ್ರಸ್ತುತಪಡಿಸಿ ನೆರೆದಿದ್ದ ಸಾರ್ವಜನಿಕರ ಅಪಾರ ಮೆಚ್ಚುಗೆಗೆ ಪಾತ್ರರಾದರು. ಈ ದೇಶಪ್ರೇಮದ ಸುಸ್ವರ ವಾದನಕ್ಕೆ ಸಾಕ್ಷಿಯಾದ ರಾಷ್ಟ್ರೀಯ ಏಕತಾ ದಿವಸ್ ಸಮಾರಂಭದಲ್ಲಿ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ, ಗುಜರಾತ್ ಮುಖ್ಯಮಂತ್ರಿ, ಮುಖಂಡರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ನಿಲಸೋಗೆಯಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಶಿಬಿರ


ಉದಯವಾಹಿನಿ ಚಿತ್ರ

• ಉದಯವಾಹಿನಿ, ತಿ.ನರಸೀಪುರ

ಕನ್ನಡ ರಾಜ್ಯೋತ್ಸವದ ಅಂಗವಾಗಿ ತಾಲ್ಲೂಕಿನ ನಿಲಸೋಗೆ ಗ್ರಾಮದ ಶ್ರೀ ಮಾಲರಸಮ್ಮ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ್ದ ಉಚಿತ ಬೃಹತ್ ಆರೋಗ್ಯ ತಪಾಸಣೆ ಹಾಗೂ ನೇತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿತ್ತು. ಬೆಂಗಳೂರು ಶಂಕರ ಕಣ್ಣಿನ ಆಸ್ಪತ್ರೆ, ಮೈಸೂರು ರೇಸ್ ಆಫ್ ಹೋಪ್ ಸಂಸ್ಥೆ, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆ, ನೇತ್ರಾಧಿಕಾರಿಗಳು, ಮತ್ತು ಸಿಬ್ಬಂದಿ ಹಾಗೂ ಮಾದಾಪುರ ಸಮುದಾಯ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಗ್ರಾಮದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ಶಿಬಿರದಲ್ಲಿ 500 ಕ್ಕೂ ಹೆಚ್ಚು ಜನರು ತಮ್ಮ ಆರೋಗ್ಯವನ್ನ ತಪಾಸಣೆ ಮಾಡಿಸಿಕೊಂಡರು. 36 ಮಂದಿಯನ್ನು ನೇತ್ರ ಶಸ್ತ್ರ ಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

ಶಿಬಿರದಲ್ಲಿ ಕೆಲ ಸಮಯ ವೈದ್ಯಕೀಯ ತಪಾಸಣೆ ನಡೆಸಿದ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಅಭಿಲಾಷ್ ಮಾತನಾಡಿ, ಆರೋಗ್ಯದ ರಕ್ಷಣೆ, ಕಾಯಿಲೆಗಳ ಮುನ್ನೆಚ್ಚರಿಕೆ ಹಾಗೂ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಅಗತ್ಯದ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ, ಆರಂಭಿಕ ಹಂತದಲ್ಲಿಯೇ ಕಾಯಿಲೆಗಳನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯುವಂತೆ ಸಲಹೆ ನೀಡಿದರು.
ಕನ್ನಡಾಂಬೆ ಶ್ರೀ ಭುವನೇಶ್ವರಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ

ಹಾಲಿನ ದರ ಏರಿಕೆಯಿಂದ ರೈತರಿಗೆ ಹೆಚ್ಚಿನ ಅನುಕೂಲ

• ಉದಯವಾಹಿನಿ, ಚಾಮರಾಜನಗರ

ರಾಜ್ಯ ಸರ್ಕಾರವು ಹಾಲಿನ ದರವನ್ನು ಪ್ರತಿ ಲೀ. ಗೆ8 ರೂ. ಹೆಚ್ಚಳ ಮಾಡಿರುವುದರಿಂದ ಸಂಕಷ್ಟದಲ್ಲಿರುವ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಜಿಲ್ಲಾ ಹಾಲು ಉತ್ಪಾದಕರು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ಸದಸ್ಯ, ಬೂದಂಬಳ್ಳಿ ಶಂಕರಪ್ಪ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಹಾಲಿನ ದರವನ್ನು 8 ರೂ. ಗೆ ಹೆಚ್ಚಳ ಮಾಡಿ ಅದರಲ್ಲಿ ರೈತರಿಗೆ 7 ರೂ. ಹಾಗೂ ಹಾಲು ಒಕ್ಕೂಟಕ್ಕೆ 1 ರೂ. ನೀಡಿದೆ. ಇದನ್ನು ಜಿಲ್ಲಾ ಹಾಲು ಉತ್ಪಾದಕರು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳ ಪರವಾಗಿ ಸ್ವಾಗತ ಮಾಡುತ್ತೇವೆ.

ಬರಗಾಲದ ಹಿನ್ನೆಲೆ ಹಸಿರು ಮೇವಿನ ಅಭಾವ, ಒಣ ಮೇವಿನ ಬೆಲೆ ಏರಿಕೆ, ಪಶು ಆಹಾರ, ಹಿಂಡಿ, ಬೂಸಾ, ಔಷಧಿ ಹಾಗೂ ಕಾರ್ಮಿಕರ ವೆಚ್ಚ ನಿರಂತವಾಗಿ ಹೆಚ್ಚಳವಾಗಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿಗಳು, ಹಾಲಿನ ದರವನ್ನು ಏರಿಕೆ ಮಾಡಿರುವುದು ಸಂತಸ ತಂದಿದೆ ಎಂದರು. ರಾಜ್ಯ ಸರ್ಕಾರ ಹಾಲಿನ ದರ ಏರಿಕೆ ಮಾಡಿರುವುದನ್ನು ಕೆಲವರು ವಿರೋಧಿಸಿ ಪ್ರತಿಭಟನೆ ಮಾಡುತ್ತಿರುವುದು ಖಂಡನೀಯ. ಮೆಕ್ಕೆಜೋಳ ಕಡ್ಡಿಗೆ ಪ್ರತಿ ಟನ್‌ಗೆ 4000 ರೂ., ಭತ್ತದ ಹುಲ್ಲಿಗೆ 400 ರೂ. ಕೊಡಬೇಕಾಗಿದೆ . ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಹಾಲಿನ ದರ ಏರಿಕೆ ಮಾಡಿದ್ದು, ಇದನ್ನು ಕೆಲವರು ದರ ಏರಿಕೆ ವಿರೋಧಿಸುತ್ತಿರುವುದು ಸರಿಯಲ್ಲ ಎಂದರು.

ರಸ್ತೆಗೆ ಅಡ್ಡಲಾಗಿ ಕಾಂಪೌಂಡ್ ನಿರ್ಮಾಣ

• ಉದಯವಾಹಿನಿ, ತುಮಕೂರು

ಸಾರ್ವಜನಿಕರು ಓಡಾಡುವ ರಸ್ತೆಗೆ ಅಡ್ಡಲಾಗಿ ಕಾಂಪೌಂಡ್ ನಿರ್ಮಾಣ ಮಾಡಿ ರಸ್ತೆ ಮುಚ್ಚುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಸಾರ್ವಜನಿಕರಿಗೆ ಓಡಾಡಲು ಅನುವು ಮಾಡಿಕೊಡಬೇಕು ಎಂದು ವಾರ್ಡ್-1ರ ವ್ಯಾಪ್ತಿಯ ಮರಳೇನಹಳ್ಳಿ, ಮರಳೇನಹಳ್ಳಿ ಗೋಮಾಳ, ಮರಿಯಪ್ಪನಪಾಳ್ಯ ಹಾಗೂ ಊರುಕೆರೆ ಮಜರೆ ಗ್ರಾಮಸ್ಥರು ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದ್ದಾರೆ. ತಾಲ್ಲೂಕಿನ ಕಸಬಾ ಹೋಬಳಿ ಮರಳೇನಹಳ್ಳಿ ಗ್ರಾಮದಿಂದ ಗೋಮಾಳಕ್ಕೆ ಹೋಗುವ ರಸ್ತೆ ಸರ್ವೆ ನಂ. 62/2 ರಲ್ಲಿ 1.16 ಗುಂಟೆ ಇದ್ದು, 5-08 ಗುಂಟೆ ಜಮೀನಿನಲ್ಲಿ ಗೋಮಾಳಕ್ಕೆ ಹೋಗುವ ರಸ್ತೆ ನಿರ್ಮಾಣ ಮಾಡಲಾಗಿದೆ. ಈ ರಸ್ತೆಯಲ್ಲಿ ಸುಮಾರು 70-80 ವರ್ಷಗಳಿಂದಲೂ ಸಾರ್ವಜನಿಕರು, ಮರಳೇನಹಳ್ಳಿ ಹಾಗೂ ಮರಳೇನಹಳ್ಳಿ ಗೋಮಾಳದಲ್ಲಿ ವಾಸವಾಗಿರುವ ಗ್ರಾಮಸ್ಥರು, ಊರುಕೆರೆ ಮಜರೆ, ಮರಿಯಪ್ಪನಪಾಳ್ಯದ ಗ್ರಾಮಸ್ಥರು ಪ್ರತಿನಿತ್ಯ ಓಡಾಡತ್ತಿದ್ದರು. ಈಗಲೂ ಸಹ ಇದೇ ರಸ್ತೆ ಈ ಭಾಗದ ಜನತೆಗೆ ಅನಿವಾರ್ಯವಾಗಿದೆ. ಬೇರೆ ಯಾವುದೇ ರಸ್ತೆ ಸಂಪರ್ಕ ಗೋಮಾಳಕ್ಕಿಲ್ಲ ಎಂದು ಗ್ರಾಮಸ್ಥರು ಮನವಿಯಲ್ಲಿ ತಿಳಿಸಿದ್ದಾರೆ. 2015-16ರಲ್ಲಿ ಮರಳೇನಹಳ್ಳಿ ಗೋಮಾಳದಲ್ಲಿ ಮನೆ ಕಟ್ಟಿಕೊಂಡು ವಾಸವಿರುವವರಿಗೆ ಕಂದಾಯ ಇಲಾಖೆಯಿಂದ ನಿವೇಶನಗಳ ಹಕ್ಕುಪತ್ರು ನೀಡಲಾಗಿದೆ. ಆ ಮನೆಗಳಿಗೂ ಸಹ ಯಾವುದೇ ರಸ್ತೆ ಸಂಪರ್ಕ ಇಲ್ಲ. ಪರಿಸ್ಥಿತಿ ಹೀಗಿದ್ದರೂ ಸಹ ಜಮೀನಿನ ಮಾಲೀಕರು ರಸ್ತೆಗೆ ಅಡ್ಡಲಾಗಿ ಕಾಂಪೌಂಡ್ ನಿರ್ಮಾಣ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

ಅಂತರಾಳದಿಂದ... EDITORIAL

ಯುವ ಸಮೂಹದ ರಕ್ಷಣೆಗಾಗಿ ಮಾದಕ ದ್ರವ್ಯ ವಿರುದ್ಧ ಸಮರ




ಕೇಂದ್ರ ಗೃಹ ಸಚಿವ ಅಮಿತ್ ಶಾ 2029ರ ಅಂತ್ಯದ ವೇಳೆಗೆ ಭಾರತವನ್ನು ಸಂಪೂರ್ಣವಾಗಿ ಮಾದಕದ್ರವ್ಯ ಮುಕ್ತವನ್ನಾಗಿ ಮಾಡಲು ನಿರ್ಧರಿಸಿರುವುದು ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ನಿರ್ಣಯವಾಗಿದೆ. ಇಂದಿನ ಯುವ ಜನತೆ ಮಾದಕ ಜಾಲದ ಸುಳಿಗೆ ಸಿಲುಕಿ ತಮ್ಮ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವುದು ರಾಷ್ಟ್ರದ ಪ್ರಗತಿಗೆ ದೊಡ್ಡ ಕಂಟಕವಾಗಿದೆ. ಲಕ್ಷಾಂತರ ಯುವಕರು ಈ ಹೆಮ್ಮಾರಿಗೆ ಬಲಿಯಾಗುತ್ತಿರುವುದು ದೇಶದ ಆರ್ಥಿಕ ಹಾಗೂ ಸಾಮಾಜಿಕ ಬೆನ್ನೆಲುಬನ್ನೇ ಕುಗ್ಗಿಸುತ್ತಿದ್ದು, ಈ ಪಿಡುಗನ್ನು ಬುಡಸಮೇತ ಕಿತ್ತೊಗೆಯಲು ಕೇಂದ್ರ ಸರಕಾರವು ಕಠಿಣ ಹಾಗೂ ದೂರದೃಷ್ಟಿಯ ಕಾರ್ಯತಂತ್ರವನ್ನು ರೂಪಿಸಿದೆ.

ಕೇಂದ್ರ ಸರಕಾರದ ಈ ನಿರಂತರ ಹೋರಾಟದಲ್ಲಿ ಕೇವಲ ಸಣ್ಣ ಪ್ರಮಾಣದಲ್ಲಿ ಡ್ರಗ್ಸ್ ವಶಪಡಿಸಿಕೊಳ್ಳುವುದಕ್ಕೆ ಸೀಮಿತವಾಗಿದ್ದ ಕಾನೂನು ಜಾರಿ ವ್ಯವಸ್ಥೆಯನ್ನು ಬದಲಾಯಿಸಿ, ಈಗ ಅನುಷ್ಠಾನಕ್ಕೆ ತಂದಿರುವ 4 ಸ್ತಂಭಗಳ ರಣನೀತಿ' ಅತ್ಯಂತ ಪರಿಣಾಮಕಾರಿ. ಇದರಡಿ ಗುಪ್ತಚರ ಮಾಹಿತಿ ಆಧಾರಿತ ಕಾರ್ಯಾಚರಣೆಗಳು, ಸಿಂಥೆಟಿಕ್ ಹಾಗೂ ಇತರ ಡ್ರಗ್ಸ್ ನಿಯಂತ್ರಣಕ್ಕೆ ಅಗ್ರಗಣ್ಯ ಆದ್ಯತೆ ನೀಡಲಾಗಿದೆ. ಇತ್ತೀಚೆಗಿನ ಆಪರೇಶನ್ ಟ್ರೆ,ಡೆಂಟ್' ಕಾರ್ಯಾಚರಣೆಯು ಇದಕ್ಕೆ ತಾಜಾ ಉದಾಹರಣೆಯಾಗಿದ್ದು, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಮತ್ತು ಜಾರಿ ನಿರ್ದೇಶನಾಲಯವು ಒಗ್ಗೂಡಿ ಅಂತಾರಾಷ್ಟ್ರೀಯ ಮಾಫಿಯಾದ ಹಣಕಾಸು ಹಾಗೂ ಹವಾಲಾ ಜಾಲವನ್ನು ಭೇದಿಸಿವೆ. ಕೋಟ್ಯಂತರ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಮತ್ತು ನೂರಾರು ಬ್ಯಾಂಕ್ ಖಾತೆಗಳ ತಡೆ ಮಾಫಿಯಾದ ಬೆನ್ನೆಲುಬನ್ನೇ ಮುರಿದೆಸೆದಿದೆ. ಯುವ ಜನಾಂಗವನ್ನು ಈ ಮಾರಕ ವ್ಯಸನದಿಂದ ಪಾರು ಮಾಡಲು ಸರಕಾರವು ದೇಶಾದ್ಯಂತ ವ್ಯಸನ ಮುಕ್ತಿ ಕೇಂದ್ರಗಳ ಸಂಖ್ಯೆಯನ್ನು 1,750ಕ್ಕಿಂತ ಹೆಚ್ಚು ವಿಸ್ತರಿಸುವುದರ ಜತೆಗೆ, ಲಕ್ಷಾಂತರ ನಶಾ ಮುಕ್ತ ಮಿತ್ರ'ರನ್ನು ಸಜ್ಜುಗೊಳಿಸುತ್ತಿದೆ.

ಆದರೆ, ಇದು ಸುಲಭವಾದ ಹೋರಾಟವಲ್ಲ. ಮಾದಕ ದ್ರವ್ಯ ಜಾಲದ ಹಿಂದೆ ಬಲುದೊಡ್ಡ ಮಾಫಿಯಾ, ಭೂಗತಲೋಕದ ನಂಟು ಇದೆ. ಅದರ ಕೊಂಡಿಗಳು ಉಗ್ರವಾದ, ದೇಶದ ಭದ್ರತೆಗೆ ಕಂಟಕ ತರುವವರೆಗೂ ಚಾಚಿಕೊಂಡಿವೆ. ಹೀಗಾಗಿ ಬಹಳ ಎಚ್ಚರಿಕೆಯಿಂದ ವಿಷವೃಕ್ಷವನ್ನು ಬೇರು ಸಹಿತ ಕಿತ್ತೆಸೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಇದು ಅಸಾಧ್ಯವೇನೂ ಅಲ್ಲ. ಹಿಂದೆ ನಕ್ಸಲ್ ನಿಗ್ರಹದ ಗುರಿಯನ್ನು ಯಶಸ್ವಿಯಾಗಿ ಈಡೇರಿಸಿದಂತೆ, ಈ ಸಂಕಲ್ಪವನ್ನೂ ಸಾಧಿಸಲು ರಾಜ್ಯ ಸರಕಾರಗಳು, ಪೊಲೀಸ್ ಇಲಾಖೆ ಹಾಗೂ ನಾಗರಿಕ ಸಮುದಾಯವು ಒಗ್ಗಟ್ಟಿನಿಂದ ಕೈಜೋಡಿಸಬೇಕು. ಯುವಶಕ್ತಿಯೇ ದೇಶದ ನಿಜವಾದ ಬಲವಾಗಿದ್ದು, ಅವರನ್ನು ಡ್ರಗ್ಸ್‌ಮುಕ್ತರನ್ನಾಗಿಸುವುದು ಸದೃಢ ರಾಷ್ಟ್ರನಿರ್ಮಾಣಕ್ಕೆ ಅನಿವಾರ್ಯವಾದ ಹೆಜ್ಜೆ.

ಇಡೀ ದೇಶವನ್ನು ನಕ್ಸಲ್ ಮುಕ್ತಗೊಳಿಸಿದಂತೆ ಡ್ರಗ್ಸ್‌ಮುಕ್ತ'ಗೊಳಿಸುವುದು ಕೇಂದ್ರ ಸರಕಾರದ ಬದ್ಧತೆ ಎಂದು ಅಮಿತ್ ಶಾ ಹೇಳಿದ್ದಾರೆ. ಸರ್ದಾರ್ ಪಟೇಲ್ ಅವರ 151ನೇ ಜನ ದಿನಾಚರಣೆಯ ರಾಷ್ಟ್ರೀಯ ಏಕತಾ ದಿವಸ್' ಅಂಗವಾಗಿ ದಿಲ್ಲಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ರನ್ ಫಾರ್ ಯುನಿಟಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು ಈ ವಿಷಯವನ್ನು ತಿಳಿಸಿದ್ದಾರೆ. ಯುವ ಸಮುದಾಯವನ್ನು ಮಾದಕ ದ್ರವ್ಯಗಳ ದುಷ್ಪರಿಣಾಮಗಳಿಂದ ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಇದಕ್ಕಾಗಿ ರಾಷ್ಟ್ರವ್ಯಾಪಿ ಕಾರ್ಯಾಚರಣೆಗಳನ್ನು ಚುರುಕುಗೊಳಿಸಲಾಗಿದೆ ಎಂದಿದ್ದಾರೆ. ದೇಶದಲ್ಲಿ ಮಾದಕ ದ್ರವ್ಯಗಳ ಪಿಡುಗು ಬಲವಾಗಿ ಬೇರೂರಿದೆ. ಹೆಚ್ಚು ಹೆಚ್ಚು ಯುವಜನರು ಇದರ ದಾಸರಾಗುತ್ತಿರುವುದು ಕಳವಳಕಾರಿ. ದೇಶದ ಭವಿಷ್ಯದ ಆಸ್ತಿಯಾಗಿರುವ ಯುವ ಜನತೆಯೇ ಕೆಟ್ಟ ದಾರಿ ಹಿಡಿದರೆ ದೇಶಕ್ಕೆ ಒಳಿತಾಗದು. ಈ ನಿಟ್ಟಿನಲ್ಲಿ ಅಮಿತ್ ಶಾ ತೆಗೆದುಕೊಂಡಿರುವ ನಿರ್ಧಾರ ಬಹಳ ಉತ್ತಮವಾದುದಾಗಿದೆ.

ರಾಮಾಯಣ



17. ಹಿಂದೆ ದೇವಾಸುರರು ಸೆಣಸಿದಂತೆ ಕಪಿಗಳೂ ರಕ್ಕಸರೂ ಬದ್ಧವೈರದಿಂದ ಹೋರಾಡಿದುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಆ ಕೆಂಗರಿಗೋಲ ಗೊಂದಣವನ್ನು ನೋಡಿದ ಲಕ್ಷ್ಮಣನು ಅವನ್ನೆಲ್ಲ ಕಡಿಖಂಡಮಾಡಿಬಿಟ್ಟ ಹೀಗೇ ಇಬ್ಬರೂ ತಮ್ಮ ತಮ್ಮ ಬಿಲ್ಲಕೌಶಲದಿಂದ ಸಾಕಷ್ಟು ಕಾಲ ಯುದ್ಧಮಾಡಿದರು. ''ತಾನು ಯಾವ ಶಸ್ತ್ರಗಳನ್ನು ಪ್ರಯೋಗಿಸಿದರೂ ಸುಮಿತ್ರಾಪುತ್ರನು ಅವುಗಳನ್ನೆಲ್ಲ ವ್ಯರ್ಥಗೊಳಸುತ್ತಿದ್ದುದನ್ನು ಕಂಡ ರಾವಣಾಸುರನು ಬೆರಗಾಗಿಹೋದ. ಜೊತೆಗೆ ಅಟ್ಟಹಾಸ ಮಾಡುತ್ತ ಬ್ರಹ್ಮನಿತ್ತಿದ್ದ ಚಿನ್ನದ ಬಣ್ಣದ ಅಗ್ನಿಸಮಾನವಾದ ಬಾಣವನ್ನು ಹೂಡಿ ಲಕ್ಷ್ಮಣನ ಮೇಲೆ ಬಿಡಲು ಅವನು ತತ್ತರಿಸಿ ಬೀಳುವಂತಾಯುತು. ಆದರೂ ಹೇಗೋ ಸಾವರಿಸಿಕೊಂಡು ಹರಿತವಾದ ಬಾಣಗಳನ್ನು ಬಿಟ್ಟು ಒಂದೇ ಕ್ಷಣದಲ್ಲಿ ರಾಕ್ಷಸೇಂದ್ರನ ಕೈಯಲ್ಲಿದ್ದ ಬಿಲ್ಲನ್ನು ತುಂಡರಿಸಿಬಿಟ್ಟ. ಕೈಯಲ್ಲಿದ್ದ ಬಿಲ್ಲು ಮುರಿದು ಬೀಳಲು, ರಕ್ಕಸೇಶ್ವರನು ಮತ್ತೆ ಬ್ರಹ್ಮನಿತ್ತಿದ್ದ ಮಹಾಬಲಶಾಲಿಯೂ ಅತಿವೇಗಿಯೂ ಆದ ಶಕ್ತಿಯೆಂಬ ಅಸ ಸ್ತವನ್ನು ತೆಗೆದು ಬಿಲ್ಲ'ತಿರುಪಿನಲ್ಲಿ ಹೂಡಿ ಬಿಡಲು ಅದು ಪ್ರಚಂಡ ವೇಗದಿಂದ ಸಿಡಿಯುತ್ತ ಲಕ್ಷ ನೆಡೆಗೆ ಬಂದಿತು ಅದರ ಮೇಲೆ ಅನೇಕ ಪ್ರಬಲವಾದ ಬಾಣಗಳನ್ನು ಬಿಟ್ಟರೂ ಅದು ದಶರಥಪುತ್ರನ ಎಶಾಲವಕ್ಷಸ್ಥಲವನ್ನು ತಾಕಿಬಿಟ್ಟಿತು. ಹುಜಾಬಲಕಾಲಿಯಾದ ಅವನು ಶಕ್ತಿಯ ಬಿರುಸಾದ ಹೊಡೆತದಿಂದ ಮೂರ್ಚೆಹೊಂದಿ ನೆಲದ ಮೇಲೆ ದೊಪ್ಪನೆ ಉರುಳಿದ. ಬೇಗ ಹೋಗಿ ಸುಲಭವಾಗಿ ಅವನನ್ನು ಎತ್ತಿಕೊಂಡು ಹೋಗಬೇಕೆಂಬ ಉದ್ದೇಶದಿಂದ ತನ್ನ ಎರಡೂ ತೋಳುಗಳಿಂದ ಅವನನ್ನು ಮೇಲೆತ್ತಲು ಪ್ರಯತ್ನಿಸಿದ ಆದರೆ ಅಲುಗಾಡಿಸಲೂ ಸಾಧ್ಯವಾಗಲಿಲ್ಲ. ಆಗ ತನ್ನೊಂದು ಮೊಳಕಾಲನ್ನು ನೆಲದ ಮೇಲೂರಿ ತನ್ನ ಶಕ್ತಿಯನ್ನೆಲ್ಲ ಇಟ್ಟು ದಾಶರಥಿಯನ್ನು ಎತ್ತಿಕೊಳ್ಳಲು ಪ್ರಯತ್ನಿಸಿದರೂ ಅವನ ಶರೀರವು ಮಿಸುಕಾಡಲಿಲ್ಲ. ರಜತಾಚಲವನ್ನು ಹಿಡಿದೆತ್ತಿದ ಅತುಲಬಲಸಂಕಲಿತವಾದ ತನ್ನ ಭುಜಗಳು ಎತ್ತಲಾಗದೇ ಹೊದ ಲಕ್ಷ ಪಾನ ದೇಹದೃಢತೆಯನ್ನು ಕಂಡ ರಾವಣನು ಅಚ್ಚರಿಯಿಂದ ತಲೆದೂಗಿದ. ತ್ರಿಜಗವಂದಿತ ಮಹಾಪುರುಷನ ಭಜಕರನ್ನು ತನ್ನಂತಹ ಬಲಿಷ್ಠರೂ ಎದುರಿಸುವುದು ಅದೆಷ್ಟು ನಿಷ್ಫಲವಾದುದು ಎಂದು ಆಗ ಅವನಿಗೆ ಅರಿವಾಯಿತು. ತನ್ನ ಭುಜಬಲದಿಂದ ಮೇರುಗಿರಿಯನ್ನಾದರೂ ಎತ್ತಬಹುದು, ಭೂಮಿಯನ್ನೆ ನೆಗಹಬಹುದು, ಆದರೆ ಮೂರ್ಚೆ ಹೋದವರ ಶರೀರವನ್ನು ಎತ್ತುವುದು, ಶಿವ ಶಿವಾ, ಅಸದಳ ಎಂದು ದಾನವರಸನು ಚೋದ್ಯಗೊಂಡ ಹೀಗೆ ರಕ್ಕಸೇಶ್ವರನು ಮುಂದೇನು ಮಾಡಬಹುದೆಂಬದನ್ನು ಯೋಚಿಸುತ್ತಲಿರುವಾಗ ಸಂವರ್ತಕಾಲದ ಭೈರವನಂತೆ ಆರ್ಭಟಿಸುತ್ತ, ಬರಸಿಡಿಲಿನಂತೆ ಸಿಡಿಗುಡುತ್ತ ಗಾಳಿಯಂತೆ ವೇಗವಾಗಿ ಬಂದ ಮರುತಾತ್ಮಜನು ರಾವಣನ ಮೇಲೆ ಭರದಿಂದೆರಗಿ ತನ್ನ ಮುಷ್ಟಿಯಿಂದ ಸಿಡಿಲ ಹೊಡೆತದಂತಹ ಬಿರುಸಿನಿಂದ ಅವನು ಬಾಯಲ್ಲಿ ರಕ್ತವನ್ನು ಕಕ್ಕಿಕೊಳ್ಳುತ್ತ ಮೊಳಕಾಲೂರಿಕೊಂಡಿದ್ದವನು ಹಾಗೆಯೇ ಮೂರ್ಚೆ ಹೋಗಿ ಬಿದ್ದುಬಿಟ್ಟುದನ್ನು ನೋಡಿ, ಮರುತಾತ್ಮಜನ ಪೌರುಷದಿಂದ ನಿಬ್ಬೆರಗಾಗಿ ನೆಲದ ಮೇಲಿದ್ದ ಜೀವಜಂತುಗಳೂ, ಸುರನಿಚಯವೂ ಸಂತಸದಿಂದ ''ಜಯ ಜಯ' ಎಂದು ಹೂಮಳೆಗರೆದರು, ಮೇಲೆ ಸುರದುಂದುಭಿಗಳು ಮೊರೆದುವು.

ಆಗ ಧೀರನಾದ ಹನುಮಂತನು ರಾವಣನಿಂದ ಗಾಯಗೊಂಡು ಮೂರ್ಛಿತನಾಗಿದ್ದ ಲಕ್ಷ್ಮಣನನ್ನು ಎತ್ತಿಕೊಂಡು ತನ್ನ ಭುಜಗಳ ಮೇಲಿರಿಸಿಕೊಂಡು ಬೇಗನೇ ರಾಮನಿದ್ದ ಕಡೆಗೆ ತಂದು ಮಲಗಿಸಿದ. ರಾವಣನು ಪ್ರಯೋಗಿಸಿದ್ದ ಅಸಮ ಬಲಶಾಲಿಯಾದ ಶಕ್ತಿಯು ಲಕ್ಷ್ಮಣನನ್ನು ತಾಕಿ ಗಾಸಿಗೊಳಿಸಿದರೂ, ಅವನೂ ಅಸೀಮ ಬಲಿಷ್ಠನೆಂಬುದನ್ನು ಅರಿತು ಹಿಂದಿರುಗಿ ರಾವಣನ ಭಗ್ನವಾಗಿದ್ದ ರಥವನ್ನು ಸೇರಿಕೊಂಡಿತು. ಹೀಗೆ ಶಕ್ತಿಯ ಸಾಮರ್ಥ್ಯವು ಇಲ್ಲವಾಗಲು ಸೌಮಿತ್ರಿಯು ಬಹು ಬೇಗ ಚೇತರಿಸಿಕೊಂಡ. ನಾರಾಯಣಾಂಶಸಂಭವನಿಗೆ ಎಂದಿಗಾದರೂ ವಿಪತ್ತು ಬರುವುದುಂಟೇ! ಲೋಕಾನುಸರಣೆಯಿಂದ ಲಕ್ಷ್ಮಣನು ಸ್ವಲ್ಪಕಾಲ ಮೂರ್ಛಿತನಾದಂತೆ ಕಾಣಿಸಿದನಷ್ಟೆ. ಇತ್ತ ಮಹಾತೇಜಸ್ವಿಯಾದ ರಾವಣನೂ ಚೇತರಿಸಿಕೊಂಡು ಮತ್ತೊಂದು ಮಹಾಧನುಸನ್ನು ಹಿಡಿದುಕೊಂಡು ಕಪಿಸೈನ್ಯದ ಮೇಲೆ ಆಕ್ರಮಣ ಮಾಡಲು, ಬಹುಮಂದಿ ಕಪಿವೀರರು ಸತ್ತು ಉರುಳಿದರು. ವಾನರಸೇನೆಯು ಕಂಗೆಟ್ಟು ಮುಂದೇನೂ ತೋರದೆ ಪಲಾಯನ ಮಾಡಿದರು.

ಮುಂದುವರೆಯುವುದು

ಪರೀಕ್ಷಾ ಸಂಭ್ರಮ



ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

28

ನಿದ್ರೆಯಲ್ಲಿ ಹಲ್ಲು ಕಡಿಯುವ ಅಭ್ಯಾಸವಿದೆಯಾ?

ಪರಿಣಾಮವಾಗಿ ನಿದ್ರಾ ಭಂಗವಾಗಿ ಮುಂಜಾನೆ ಆಯಾಸ, ಕಣ್ಣು ನೋವು, ಮುಖ ಸೆಳೆತ ಕಾಣಿಸಿಕೊಳ್ಳುತ್ತದೆ. ಅರೆನಿದ್ರೆಯ ಈ ಅಭ್ಯಾಸ ಓದಿನ ಏಕಾಗ್ರತೆಯನ್ನು ನಿಧಾನವಾಗಿ ಕಸಿದುಕೊಳ್ಳುತ್ತದೆ. ದೇಹದ ಜೊತೆ ಮನಸ್ಸೂ ಬಳಲುತ್ತದೆ. ಪರಿಹಾರವೇನು? ಮಲಗುವ ಒಂದು ಗಂಟೆ ಮೊದಲು ಮೊಬೈಲ್ ಮತ್ತು ಅಧ್ಯಯನಕ್ಕೆ ವಿರಾಮ ನೀಡಿ. ಬೆಚ್ಚಗಿನ ನೀರಿನಲ್ಲಿ ತೋಯ್ದ ತುವಾಲೆಯಿಂದ ದವಡೆಗೆ ಐದು ನಿಮಿಷ ಶಾಖ ಕೊಡಿ.

ಪರೀಕ್ಷಾ ದಿನಗಳು ಸಮೀಪಿಸುತ್ತಿದ್ದಂತೆ ಕೆಲವರಿಗೆ ಸುಪ್ತಾವಸ್ಥೆಯಲ್ಲಿ ಹಲ್ಲು ಕಡಿಯುವ ಪ್ರವೃತ್ತಿ ಆರಂಭವಾಗುತ್ತದೆ.

ಪ್ರಾತಃಕಾಲದಲ್ಲಿ ದವಡೆ ನೋವು, ಶಿರೋಭಾರ, ದಂತ ಸವೆತ ಕಂಡುಬರುತ್ತದೆ. ಪಕ್ಕದಲ್ಲಿರುವವರಿಗೆ ಕರಕರ ಸದ್ದು ಕೇಳಿಸಬಹುದು. ಎಚ್ಚರದಲ್ಲಿದ್ದಾಗ ಅರಿವಿಗೆ ಬಾರದ ಈ ಕ್ರಿಯೆಗೆ ತೀವ್ರ ಮಾನಸಿಕ ಒತ್ತಡವೇ ಮೂಲ ಕಾರಣ.

ಹಗಲಿಡೀ ಹತ್ತಿಕ್ಕಿದ ಆತಂಕವನ್ನು ಮೆದುಳು ನಿಶೆಯಲ್ಲಿ ಹಲ್ಲು ಕಡಿಯುವ ಮೂಲಕ ಹೊರಹಾಕಲು ಯತ್ನಿಸುತ್ತದೆ. ಉಗುರು ಬೆಚ್ಚಗಿನ ಹಾಲು ಸೇವಿಸಿ. ಹಗಲಿನಲ್ಲಿ ದವಡೆ ಬಿಗಿಯದಂತೆ ನಾಲಿಗೆ ಅಂಗುಳಕ್ಕೆ ತಾಗಿರಲಿ ಎಂದು ಜ್ಞಾಪಿಸಿಕೊಳ್ಳಿ. ಮಲಗುವ ಮುನ್ನ ಹತ್ತು ನಿಮಿಷ ಆಳವಾದ ಉಸಿರಾಟದ ಅಭ್ಯಾಸ ಮಾಡಿ, ಅಗತ್ಯವಿದ್ದರೆ ವೈದ್ಯರ ಸಲಹೆ ಪಡೆಯಿರಿ. ನೆನಪಿಡಿ, ನಿದ್ರೆಯು ನಿಮ್ಮ ಅಮೂಲ್ಯ ಸಂಪತ್ತು.

ನಿದ್ರೆಯಲ್ಲಿ ಶರೀರದ ಜೊತೆ ಮನಸ್ಸೂ ವಿಶ್ರಮಿಸಬೇಕು. ಹಲ್ಲು ಕಡಿಯುವ ಅಭ್ಯಾಸ ಕಡಿಮೆಯಾದರೆ ಬೆಳಗು ಹೊಸ ಚೈತನ್ಯದೊಂದಿಗೆ ಮೂಡುತ್ತದೆ, ಶಾಂತ ನಿದ್ರೆಯೇ ಯಶಸ್ವಿ ಪರೀಕ್ಷೆಯ ಪ್ರಥಮ ಸೋಪಾನ.







ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಹಾಸನಾಂಬೆ ಉತ್ಸವ: ಭಕ್ತಿಯ ಸಂಭ್ರಮದೊಂದಿಗೆ ಹಾಸನದ ಆರ್ಥಿಕತೆಗೆ ಹೊಸ ಚೈತನ್ಯ !

ಭಕ್ತರ ಹೆಜ್ಜೆಗಳಿಂದ ತುಂಬುವ ಹಾಸನದ ಬೀದಿಗಳು ಧಾರ್ಮಿಕ ಸಂಭ್ರಮಕ್ಕೆ ಸಾಕ್ಷಿಯಾಗುವುದರ ಜೊತೆಗೆ ಸಾವಿರಾರು ಕುಟುಂಬಗಳ ಬದುಕಿಗೆ ಆದಾಯದ ಭರವಸೆ ನೀಡುತ್ತವೆ. ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಹಾಸನಾಂಬೆ ದೇವಿಯ ದರ್ಶನೋತ್ಸವವು ಹಾಸನ ಜಿಲ್ಲೆಯ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ವಿಶೇಷ ಸ್ಥಾನ ಪಡೆದಿದೆ.

ವರ್ಷಕ್ಕೊಮ್ಮೆ ಮಾತ್ರ ಸಾರ್ವಜನಿಕ ದರ್ಶನಕ್ಕೆ ಅವಕಾಶವಿರುವ ಈ ವಿಶಿಷ್ಟ ಸಂಪ್ರದಾಯದಿಂದಾಗಿ ರಾಜ್ಯದ ವಿವಿಧ ಭಾಗಗಳು ಹಾಗೂ ಹೊರರಾಜ್ಯಗಳಿಂದ ಸಾವಿರಾರು ಭಕ್ತರು ಹಾಸನಕ್ಕೆ ಆಗಮಿಸುತ್ತಾರೆ. ಈ ಉತ್ಸವವು ಭಕ್ತಿಯ ಸಂಭ್ರಮದ ಜೊತೆಗೆ ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೂ ಹೊಸ ಚೈತನ್ಯ ನೀಡುತ್ತದೆ.

ವ್ಯಾಪಾರ ಮತ್ತು ಉದ್ಯಮಕ್ಕೆ ಉತ್ತೇಜನ : ಉತ್ಸವದ ಸಂದರ್ಭದಲ್ಲಿ ದೇವಾಲಯದ ಸುತ್ತಮುತ್ತ ಹೂವು, ಹಣ್ಣು, ತೆಂಗಿನಕಾಯಿ, ಪೂಜಾ ಸಾಮಗ್ರಿ, ಪ್ರಸಾದ, ಸಿಹಿತಿಂಡಿ ಹಾಗೂ ಆಟಿಕೆಗಳ ಮಾರಾಟ ಹೆಚ್ಚಾಗುತ್ತದೆ. ಇದರಿಂದ ಸಣ್ಣ ವ್ಯಾಪಾರಿಗಳು ಮತ್ತು ಸ್ಥಳೀಯ ಉದ್ಯಮಿಗಳಿಗೆ ಹೆಚ್ಚುವರಿ ಆದಾಯ ಗಳಿಸುವ ಅವಕಾಶ ದೊರೆಯುತ್ತದೆ. ತಾತ್ಕಾಲಿಕ ಮಳಿಗೆಗಳ ಮೂಲಕ ಅನೇಕರು ಸ್ವಯಂ ಉದ್ಯೋಗದಲ್ಲಿಯೂ ತೊಡಗಿಸಿಕೊಳ್ಳುತ್ತಾರೆ.

ಹೋಟೆಲ್ ಮತ್ತು ಸಾರಿಗೆ ಉದ್ಯಮಕ್ಕೆ ಲಾಭ: ದೂರದ ಊರುಗಳಿಂದ ಬರುವ ಭಕ್ತರಿಗೆ ವಸತಿ ಮತ್ತು ಆಹಾರದ ಅಗತ್ಯವಿರುವುದರಿಂದ ಹೋಟೆಲ್, ಲಾಡ್ಜ್, ಉಪಾಹಾರ ಕೇಂದ್ರಗಳು ಹಾಗೂ ವಸತಿಗೃಹಗಳ ವ್ಯಾಪಾರ ಹೆಚ್ಚಾಗುತ್ತದೆ. ಅದೇ ರೀತಿ ಬಸ್, ಆಟೋರಿಕ್ಷಾ, ಟ್ಯಾಕ್ಸಿ ಮತ್ತು ಖಾಸಗಿ ವಾಹನಗಳ ಸಂಚಾರ ಹೆಚ್ಚುವುದರಿಂದ ಸಾರಿಗೆ ವಲಯದಲ್ಲಿಯೂ ಉದ್ಯೋಗ ಹಾಗೂ ಆದಾಯದ ಅವಕಾಶಗಳು ಸೃಷ್ಟಿಯಾಗುತ್ತವೆ.

ಪ್ರವಾಸೋದ್ಯಮಕ್ಕೂ ಹೊಸ ಅವಕಾಶ : ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಗೊರೂರು ಮತ್ತು ಸಕಲೇಶಪುರದಂತಹ ಪ್ರವಾಸಿ ತಾಣಗಳನ್ನು ಹಾಸನಾಂಬೆ ದರ್ಶನಕ್ಕೆ ಬರುವ ಭಕ್ತರಿಗೆ ಪರಿಚಯಿಸಿದರೆ ಜಿಲ್ಲೆಯ ಪ್ರವಾಸೋದ್ಯಮ ಮತ್ತಷ್ಟು ಅಭಿವೃದ್ಧಿಯಾಗಬಹುದು. ಇದರಿಂದ ಸ್ಥಳೀಯ ಮಾರ್ಗದರ್ಶಕರು, ಹೋಟೆಲ್ ಉದ್ಯಮಿಗಳು ಮತ್ತು ಪ್ರವಾಸೋದ್ಯಮಕ್ಕೆ ಸಂಬಂಧಿಸಿದವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ.

ಸುಸ್ಥಿರ ಅಭಿವೃದ್ಧಿಯತ್ತ ಹೆಜ್ಜೆ : ಉತ್ಸವದ ಸಂದರ್ಭದಲ್ಲಿ ವ್ಯಾಪಾರಿಗಳು ನ್ಯಾಯಯುತ ದರದಲ್ಲಿ ವಸ್ತುಗಳನ್ನು ಮಾರಾಟ ಮಾಡಬೇಕು. ಜಿಲ್ಲಾಡಳಿತವು ಸ್ವಚ್ಛತೆ, ಕುಡಿಯುವ ನೀರು, ಸಾರಿಗೆ ಮತ್ತು ಮೂಲಸೌಕರ್ಯಗಳಿಗೆ ಆದ್ಯತೆ ನೀಡಬೇಕು. ಮಹಿಳಾ ಸ್ವಸಹಾಯ ಸಂಘಗಳು ಹಾಗೂ ಸ್ಥಳೀಯ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವ ಮೂಲಕ ಈ ಉತ್ಸವದ ಆರ್ಥಿಕ ಪ್ರಯೋಜನವನ್ನು ಇನ್ನಷ್ಟು ವಿಸ್ತರಿಸಬಹುದು.

ಒಟ್ಟಾರೆಯಾಗಿ, ಹಾಸನಾಂಬೆ ಉತ್ಸವವು ಕೇವಲ ಧಾರ್ಮಿಕ ಆಚರಣೆಯಲ್ಲ ಇದು ಸ್ಥಳೀಯ ವ್ಯಾಪಾರ, ಉದ್ಯೋಗ, ಪ್ರವಾಸೋದ್ಯಮ ಮತ್ತು ಆರ್ಥಿಕ ಪ್ರಗತಿಗೆ ಸಹಕಾರಿಯಾಗುವ ಮಹತ್ವದ ಸಂದರ್ಭವಾಗಿದೆ. ತಾಯಿ ಹಾಸನಾಂಬೆಯ ಕೃಪೆಯಿಂದ ಹಾಸನ ಜಿಲ್ಲೆಯ ಜನರ ಬದುಕಿನಲ್ಲಿ ಸಮೃದ್ಧಿ ಅರಳಲಿ, ಯುವಕರಿಗೆ ಉದ್ಯೋಗಾವಕಾಶಗಳು ದೊರೆಯಲಿ, ವ್ಯಾಪಾರ-ವಹಿವಾಟು ಅಭಿವೃದ್ಧಿಯಾಗಲಿ ಎಂಬುದೇ ನಮ್ಮ ಆಶಯ.

ಕಲಾ ಸಾಹಿತ್ಯ



ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ನಿಜವಾದ ನಾಯಕರುಗಳು ಕಾಲದೇಶ,ಜಾತಿ,ಧರ್ಮ, ಮತ,ಪಂಥ,ಪಕ್ಷ ಮೀರಿ ಆಡಳಿತ ನಡೆಸುವವರು ಮಾತ್ರ ರಾಷ್ಟ್ರದಲ್ಲಿ ಗುರ್ತಿಸಿಕೊಳ್ಳುವ ಅರ್ಹನಾಯಕರುಗಳಾಗುತ್ತಾರೆ. ಒಬ್ಬ ಶ್ರೇಷ್ಠ ಆಡಳಿತಗಾರನಲ್ಲಿ ಆಡಳಿತಾತ್ಮಕ, ಸಂವಿಧಾನಾತ್ಮಕ, ಕಾನೂನಾತ್ಮಕ, ಸಂಘಟನಾತ್ಮಕ ಗುಣಗಳು ಇರಬೇಕು. ಮಿಗಿಲಾಗಿ ಮುಖಂಡತ್ವ ನಾಯಕತ್ವ ಹಾಗೂ ಮುಂದಾಳತ್ವ ಗುಣಗಳಿರಬೇಕು. ತಾನು ಸ್ವಚ್ಛ ಇದ್ದು ಸ್ವಾರ್ಥ ಇಲ್ಲದೇ ಜಾತಿ, ಧರ್ಮ,ಪಕ್ಷಭೇದ ಮರೆತು ತಾನು ಬೆಳೆಯುವುದರ ಜೊತೆಗೆ ಇತರರನ್ನೂ ಸಹ ಬೆಳೆಸುವ ನಾಯಕತ್ವ ಗುಣಗಳಿರಬೇಕು. ಬೆಂಬಲಿಗರಿಗಿಂತ ನಾಯಕರುಗಳನ್ನಾಗಿ ಪರಿವರ್ತಿಸುವ ಗುಣಗಳಿರಬೇಕು. ಹಣಬಲ,ಜನಬಲ, ತೋಳ್ಬಲ,ಜಾತಿ ಬಲ ಇದೇನಿದ್ದರೂ ಕಾಲ್ಪನಿಕ. ಇದರಿಂದ ರಾಷ್ಟ್ರ ಶಾಶ್ವತವಾಗಿ ಬಲಿಷ್ಠವಾಗುವುದಿಲ್ಲ. ಇಂದೇ ಇವುಗಳ ವಿರುದ್ಧ ಧರಣಿ,ಸತ್ಯಾಗ್ರಹ, ಪ್ರತಿಭಟಿಸಿ ಹೋರಾಟ ಮಾಡಿ ತಿರಸ್ಕರಿಸಿ. ಉತ್ತಮ ಬಲಿಷ್ಠ ರಾಷ್ಟ್ರ ನಿರ್ಮಿಸೋಣ ಎಂಬ ಸಂಕಲ್ಪ ಮತ್ತು ಪ್ರತಿಜ್ಞೆ ಮಾಡುವುದು ಒಳ್ಳೆಯ ಬೆಳವಣಿಗೆ.

ಅನ್ಯರ ಜಾತಿ,ಧರ್ಮ, ಪಕ್ಷದ ಹುಳುಕನ್ನು ಎತ್ತಿ ಹಿಡಿಯುವುದರ ಜೊತೆಗೆ ಸ್ವಜಾತಿ, ಸ್ವಧರ್ಮ,ಸ್ವಪಕ್ಷದ ಹುಳುಕನ್ನೂ ಸಹ ಎತ್ತಿ ಹಿಡಿಯುವವರೇ ನಿಜವಾದ ನಾಯಕರುಗಳು

ವಾಸ್ತವಿಕವಾಗಿ ಪ್ರಸ್ತಾಪ ಮಾಡುವುದಾದರೆ ಮೊದಲಿಗೆ ನಾವೆಲ್ಲಾ ಮನುಷ್ಯರು. ಮನುಷ್ಯರು ಇತರೆ ಎಲ್ಲಾ ಧರ್ಮದ ಮನುಷ್ಯರನ್ನ ಪ್ರೀತಿಸುವ,ಗೌರವಿಸುವ ಮನುಷ್ಯರಾಗಬೇಕು. ಮನುಷ್ಯರೆಂದರೆ ಭಗವಂತನ ಅಥವಾ ಸೃಷ್ಟಿಯ ಲೆಕ್ಕದಲ್ಲಿ ನಾವೆಲ್ಲರೂ ಒಂದೇ ಜಾತಿಯ ಮನುಷ್ಯರು.

ನಮ್ಮ ನಮ್ಮ ಕುಲಖಸಬು,ಆಚರಣೆ, ಸಂಪ್ರದಾಯ, ಕಟ್ಟುಪಾಡು ಇಟ್ಟುಕೊಂಡು ಜಾತಿ, ಧರ್ಮಗಳನ್ನ ವಿಂಗಡಿಸಿಕೊಂಡು ಅದರ ನೆರಳಿನಲ್ಲಿ ಬದುಕುತ್ತಿದ್ದೇವೆ.

ಇರುವುದೊಂದೇ ಜಾತಿ ಅದು ಮನುಷ್ಯ ಜಾತಿ ಅದರಲ್ಲಿ ಗಂಡು ಮತ್ತುಹೆಣ್ಣು (ಪುಲ್ಲಿಂಗ ,ಸ್ತ್ರೀಲಿಂಗ), ಇರುವುದೊಂದೇ ಧರ್ಮ ಅದು ಮಾನವಧರ್ಮ, ಇರುವುದೊಂದೇ ಭಾಷೆ ಅದು ಹೃದಯದ ಭಾಷೆ. ಇಷ್ಟನ್ನು ಮಾತ್ರ ತಿಳಿದುಕೊಂಡರೆ ಮನುಷ್ಯ ಒಬ್ಬ ಒಳ್ಳೆಯ ಮನುಷ್ಯನಾಗಿ ಬದುಕಬಹುದು.

ನಮ್ಮ ಮನೆಯ ಒಳಗಡೆ ಜಾತಿ,ಧರ್ಮವನ್ನು ಆಚರಿಸಿಕೊಳ್ಳಿ ಯಾರೂ ಕೂಡ ಅಡ್ಡಿ ಬರುವುದಿಲ್ಲ ಆದರೆ ಮನೆಯಿಂದ ಹೊರಗಡೆ ಬಂದ ಮೇಲೆ ನಾವೆಲ್ಲಾ ಭಾರತೀಯರು ಅದರಲ್ಲೂ ಸಾರ್ವಜನಿಕ ಬದುಕಿನಲ್ಲಿ ಕಾಣಿಸಿಕೊಳ್ಳುವ ಜನನಾಯಕರು ನಾವೆಲ್ಲಾ ಭಾರತೀಯರು ಎಂದು ಎದೆತಟ್ಟಿ ಹೇಳುವ ಎದೆಗಾರಿಕೆ ಇರಬೇಕು ಅಂಥವರೇ ನಿಜವಾದ ನಾಯಕರುಗಳು. ಭವಿಷ್ಯದಲ್ಲಿ ಅಂಥವರನ್ನು ರಾಷ್ಟ್ರ ಅಥವಾ ದೇಶ ಸದಾ ಸ್ಮರಿಸುತ್ತದೆ.

ಉದಾಹರಣೆಗೆ: ನಾವು ನುಡಿಯುವ ಮಾತು,ನಾವು ನಡೆಯುವ ದಾರಿ,ನಾವು ಮಾಡುವ ಕೆಲಸ,ನಾವು ಆಚರಿಸುವ ಆಚರಣೆ ಹಾಗೂ ನಾವು ಜೀವಿಸಿ ಬದುಕುವ ಮಾರ್ಗ ಇವುಗಳ ಬಗ್ಗೆ ಮೊದಲು ನಾವು ಸರಿ ಇದ್ದೇವೆ ಅಥವಾ ಇಲ್ಲವೇ ಎಂಬ ಬಗ್ಗೆ ಪ್ರಶ್ನೆ ಹಾಕಿಕೊಂಡು ಉತ್ತರ ಹುಡುಕಿಕೊಂಡರೆ ಆಗ ಅನ್ಯರ ಬಗ್ಗೆ ಸ್ವತಂತ್ರವಾಗಿ ಪ್ರಶ್ನೆ ಮಾಡುವ ಅಧಿಕಾರ ದೊರಕುತ್ತದೆ. ಮೊದಲಿಗೆ ನಾವೇ ಸರಿ ಇಲ್ಲದಿದ್ದರೆ ಅನ್ಯರ ಬಗ್ಗೆ ಪ್ರಶ್ನೆ ಮಾಡಲು ಯಾವುದೇ ನೈತಿಕ ಹಕ್ಕು ಇರುವುದಿಲ್ಲ.

ಉದಾಹರಣೆಗೆ: ಜಾತಿ-ಜಾತಿಯ ಲೆಕ್ಕಾಚಾರ, ಧರ್ಮ-ಧರ್ಮಗಳ ಲೆಕ್ಕಾಚಾರ, ಭಾಷೆ ಭಾಷಿಕರ ಲೆಕ್ಕಾಚಾರ, ಪಕ್ಷ-ಪಕ್ಷಗಳ ಲೆಕ್ಕಾಚಾರ, ವಲಸೆ ಬಂದವರ ಲೆಕ್ಕಚಾರ, ವಲಸೆ ಹೋದವರ ಲೆಕ್ಕಾಚಾರ ಇವುಗಳು ಚುನಾವಣೆ ಹತ್ತಿರ ಬರುತ್ತಿದ್ದಂತೆ ಬಹಳಷ್ಟು ಲೆಕ್ಕಾಚಾರದಲ್ಲಿ ತೊಡಗಿಸಿಕೊಂಡಿವೆ. ಮನುಷ್ಯ ಮೊದಲಿಗೆ ಸ್ವಾರ್ಥಿ. ತಪ್ಪು-ತಪ್ಪನ್ನ, ಸರಿ-ಸರಿಯನ್ನ ಹೇಳುವವರ ಸಂಖ್ಯೆ ಅಥವಾ ಒಪ್ಪಿಕೊಳ್ಳುವವರ ಸಂಖ್ಯೆ ಬಹಳಷ್ಟು ಕಡಿಮೆ ಅಂತರದಲ್ಲಿದ್ದಾರೆ. ತಾನು ತಪ್ಪು ಮಾಡುವುದು, ಮಾಡಿರುವುದು ಅಥವಾ ಮಾಡುತ್ತಿರುವುದು. ಸುಳ್ಳು ಹೇಳುವುದು,ಸುಳ್ಳು ಹೇಳಿರುವುದು ಅಥವಾ ಸುಳ್ಳು ಹೇಳುತ್ತಿರುವುದು ಸರ್ವೇಸಾಮಾನ್ಯವಾಗಿದೆ.ತನ್ನ ಸ್ವಜಾತಿ,ಸ್ವಧರ್ಮ, ಸ್ವಪಕ್ಷಗಳ ಆಂತರಿಕ ಹಾಗೂ ಬಹಿರಂಗ ತಪ್ಪುಗಳನ್ನ ಮತ್ತು ಸುಳ್ಳುಗಳನ್ನ ಮುಚ್ಚಿಟ್ಟು ಅನ್ಯರ ಜಾತಿ,ಧರ್ಮ,ಪಕ್ಷಗಳ ಬಗ್ಗೆ ಟೀಕೆ ಮಾಡುವುದು ಅಥವಾ ಅವರುಗಳ ಹುಳುಕುಗಳನ್ನ ಎತ್ತಿ ಹಿಡಿಯುವುದು ಅಷ್ಟಾಗಿ ಒಳ್ಳೆಯ ಬೆಳವಣಿಗೆಯಲ್ಲ ಹಾಗೂ ಸಮಂಜಸವಲ್ಲ.

ಒಬ್ಬ ಒಳ್ಳೆಯ ನಾಯಕ ಮೊದಲಿಗೆ ಸ್ವಜಾತಿ, ಸ್ವಧರ್ಮ,ಸ್ವಪಕ್ಷದಲ್ಲಿರುವ ನಾಯಕರುಗಳು ಅವರು ತಪ್ಪು ಮಾಡಿರುವ ಬಗ್ಗೆ ಅವರ ತಪ್ಪುಗಳನ್ನ ಎತ್ತಿ ಹಿಡಿದು ಬಹಿಷ್ಕರಿಸಿ ಹಾಗೂ ಉಚ್ಚಾಟಿಸಿ ಸಮಾಜಕ್ಕೆ ಬಹಿರಂಗಪಡಿಸಿ ಕ್ರಮ ತೆಗೆದುಕೊಳ್ಳಬೇಕು.

ನಂತರ ಪರಿಹಾರಗಳನ್ನ ಕಂಡು ಹಿಡಿದುಕೊಂಡು ನಾವು ಸರಿ ಇದ್ದು,ಎದೆತಟ್ಟಿ ಅನ್ಯರ ತಪ್ಪುಗಳ ಬಗ್ಗೆ ಬಹಿರಂಗಪಡಿಸಬೇಕು ಆಗ ಅದಕ್ಕೆ ತಕ್ಕ ಅರ್ಥ ಹಾಗೂ ಭೂಷಣವಿರುತ್ತದೆ. ಈ ರಾಷ್ಟ್ರ ಕಂಡ ಕೆಲವು ಶ್ರೇಷ್ಠ ಮಹನೀಯರನ್ನು ಹಾಗೂ ನಾಯಕರುಗಳನ್ನ ನೆನಪಿಸಿಕೊಳ್ಳಬೇಕಾಗಿದೆ.


ಉದಾಹರಣೆಗೆ: ಎಲ್ಲರಿಗೂ ಗೊತ್ತಿದೆ ತಾವುಗಳೇ ಯೋಚಿಸಿ ಕಲ್ಪಿಸಿಕೊಳ್ಳಬಹುದು.ನಾನು ಅಂಥವರ ಹೆಸರನ್ನು ಸೂಚಿಸಿದರೆ ಕೆಲವರಿಗೆ ಕಸಿವಿಸಿಯಾಗಬಹುದು.

ರಾಜಕಾರಣಿಗಳ ಡೊಂಬರಾಟ

ಇತ್ತೀಚಿನ ದಿನಮಾನಗಳಲ್ಲಿ ರಾಜಕಾರಣ ಬಹಳ ಕಲುಷಿತ ವಾತಾವರಣದ ಸ್ಥಿತಿಯಲ್ಲಿ ಬಂದು ನಿಂತಿದೆ. ಸ್ವಚ್ಛ ಅಥವಾ ಶುದ್ಧಿ ಮಾಡುವ ಗೋಜಿಗೆ ಯಾರು ಹೋಗುತ್ತಿಲ್ಲ. ಕಾರಣ ನಾನ ಕಾರಣಗಳಿವೆ ಆದರೆ ವಿವರಣೆ ಮಾಡೋದ್ರಲ್ಲಿ ಅರ್ಥವಿಲ್ಲ ಅದನ್ನು ನನ್ನಿಂದ ಹೇಳಿಸಬೇಡಿ.ಬೆಳಿಗ್ಗೆ ಎದ್ದರೆ ದಿನಪತ್ರಿಕೆಯಲ್ಲಿ ಹಾಗೂ ಟಿವಿ ಮಾಧ್ಯಮಗಳಲ್ಲಿ ಕೆಲವು ತಪ್ಪುಗಳನ್ನ ಅವರು ಇವರ ಮೇಲೆ ಹೇಳುವುದು, ಇವರು ಅವರ ಮೇಲೆ ಹೇಳುವುದು.ಯಾರನ್ನು ನಂಬುವುದು,ಯಾರನ್ನು ಬಿಡುವುದು ಎಲ್ಲಾ ಪ್ರಶ್ನೆಗಳು ಉದ್ಭವವಾಗುತ್ತವೆ. ಇಂದು ರಾಜಕಾರಣಿಗಳ ಡೊಂಬರಾಟ ಸಮಾಜಕ್ಕೆ ಪರಿಚಯವಾಗಿದೆ ಎಂತಹ ವಿಪರ್ಯಾಸ.

ನವೆಂಬರ್ 6ರಂದು ಇರುವ ಧನತ್ರಯೋದಶಿ ದೀಪಾವಳಿ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ

ಶ್ರೀ. ವಿನೋದ ಕಾಮತ್,
ರಾಜ್ಯ ವಕ್ತಾರರು, ಸನಾತನ ಸಂಸ್ಥೆ



ಇದನ್ನೇ ಆಡುಭಾಷೆಯಲ್ಲಿ 'ಧನತೇರಸ್' ಎನ್ನುತ್ತಾರೆ. ಈ ದಿನ ವ್ಯಾಪಾರಿಗಳು ತಿಜೋರಿಯನ್ನು ಪೂಜಿಸುತ್ತಾರೆ. ವ್ಯಾಪಾರಿ ವರ್ಷವು ಒಂದು ದೀಪಾವಳಿಯಿಂದ ಇನ್ನೊಂದು ದೀಪಾವಳಿಯ ವರೆಗೆ ಇರುತ್ತದೆ. ಹೊಸ ವರ್ಷದ ಲೆಕ್ಕದ ಖಾತೆ-ಪುಸ್ತಕಗಳನ್ನು ಈ ದಿನವೇ ತರುತ್ತಾರೆ. ನಮ್ಮ ಜೀವನವು ಧನದಿಂದಾಗಿ ಸರಿಯಾಗಿ ನಡೆದಿರುತ್ತದೆ, ಆದುದರಿಂದ ಈ ಧನವನ್ನು ಪೂಜಿಸುತ್ತಾರೆ. ಇಲ್ಲಿ 'ಧನ'ವೆಂದರೆ ಶುದ್ಧ ಲಕ್ಷ್ಮೀ. ಶ್ರೀಸೂಕ್ತದಲ್ಲಿ ವಸು, ಜಲ, ವಾಯು, ಅಗ್ನಿ ಮತ್ತು ಸೂರ್ಯ ಇವುಗಳಿಗೆ ಧನವೆಂದೇ ಹೇಳಲಾಗಿದೆ. ಯಾವ ಧನಕ್ಕೆ ನಿಜವಾದ ಅರ್ಥವಿದೆಯೋ ಅವಳೇ ನಿಜವಾದ ಲಕ್ಷ್ಮಿ ! ಇಲ್ಲದಿದ್ದಲ್ಲಿ ಅಲಕ್ಷ್ಮೀಯಿಂದ ಅನರ್ಥವಾಗುತ್ತದೆ. ಧನತ್ರಯೋದಶಿಯ ದಿನದಂದು ಹೊಸ ಚಿನ್ನವನ್ನು ಖರೀದಿಸುವ ವಾಡಿಕೆಯಿದೆ. ಇದರಿಂದ ವರ್ಷವಿಡೀ ಮನೆಯಲ್ಲಿ ಧನಲಕ್ಷ್ಮೀ ವಾಸಿಸುತ್ತಾಳೆ. ವಾಸ್ತವದಲ್ಲಿ ಲಕ್ಷ್ಮೀ ಪೂಜೆಯ ಸಮಯದಲ್ಲಿ ಇಡೀ ವರ್ಷದ ಜಮಾಖರ್ಚನ್ನು ಕೊಡುವುದಿರುತ್ತದೆ. ಧನತ್ರಯೋದಶಿಯವರೆಗೆ ಬಾಕಿ ಉಳಿದ ಸಂಪತ್ತನ್ನು ಪ್ರಭುಕಾರ್ಯಕ್ಕಾಗಿ ಖರ್ಚು ಮಾಡಿದರೆ, ಸತ್‌ಕಾರ್ಯಕ್ಕಾಗಿ ಧನವು ಖರ್ಚಾಗುವುದರಿಂದ ಧನಲಕ್ಷ್ಮೀಯು ಕೊನೆತನಕ ಲಕ್ಷ್ಮೀರೂಪದಲ್ಲಿ ಮನೆಯಲ್ಲಿ ಇರುತ್ತಾಳೆ. ಧನವೆಂದರೆ ಹಣ. ಈ ಹಣವು ಕಪ್ಪು ಹಣವಾಗಿರದೇ, ಸ್ವತಃ ಕಷ್ಟದಿಂದ ಗಳಿಸಿದ ಮತ್ತು ಇಡೀ ವರ್ಷದಲ್ಲಿ ಒಂದೊಂದು ಪೈಸೆಯನ್ನು ಜಮೆ ಮಾಡಿದ್ದಾಗಿರಬೇಕು. ಈ ಹಣದಲ್ಲಿ ಕನಿಷ್ಟಪಕ್ಷ 1/6 ರಷ್ಟು ಭಾಗವನ್ನು ಪ್ರಭುಕಾರ್ಯಕ್ಕಾಗಿ ಖರ್ಚು ಮಾಡಬೇಕು, ಎಂದು ಶಾಸ್ತ್ರವು ಹೇಳುತ್ತದೆ. ಹಿಂದಿನ ಕಾಲದಲ್ಲಿ ರಾಜ-ಮಹಾರಾಜರು ವರ್ಷದ ಕೊನೆಯಲ್ಲಿ ತಮ್ಮ ಸಂಪೂರ್ಣ ಖಜಾನೆಯನ್ನು ಸತ್ಪಾತ್ರರಿಗೆ ದಾನ ಮಾಡಿ ಖಾಲಿ ಮಾಡುತ್ತಿದ್ದರು. ಆಗ ಅವರಿಗೆ ನಾವು ಧನ್ಯರಾದೆವೆಂದು ಅನಿಸುತ್ತಿತ್ತು. ಇದರಿಂದಾಗಿ ಜನತೆ ಹಾಗೂ ರಾಜನ ನಡುವಿನ ಸಂಬಂಧವು ಕೌಟುಂಬಿಕ ಸ್ವರೂಪದ್ದಾಗಿತ್ತು. ರಾಜನ ಖಜಾನೆಯು ಜನತೆಯದ್ದಾಗಿದ್ದು ರಾಜನು ಕೇವಲ ಆ ಖಜಾನೆಯ ಸಂರಕ್ಷಕನಾಗಿರುತ್ತಿದ್ದನು. ಇದರಿಂದ ಜನರು ಸಹ ಯಾವುದೇ ಪ್ರತಿಬಂಧವಿಲ್ಲದೇ ತೆರಿಗೆಯನ್ನು ನೀಡುತ್ತಿದ್ದರು. ಸಹಜವಾಗಿಯೇ ಖಜಾನೆಯು ಪುನಃ ತುಂಬುತ್ತಿತ್ತು. ಧನವನ್ನು ಸತ್ ಕಾರ್ಯಕ್ಕಾಗಿ ವಿನಿಯೋಗಿಸುವುದರಿಂದ ಆತ್ಮಬಲವು ಹೆಚ್ಚಾಗುತ್ತದೆ. ಹಣವೆಂದರೆ ಕೇವಲ ಧನವಾಗಿಲ್ಲ, ಪಂಚಮಹಾಭೂತಗಳೇ ನಿಜವಾದ ಧನಗಳಾಗಿವೆ. ಯಾವುದರಿಂದ ನಮ್ಮ ಜೀವನದ ಪೋಷಣೆಯು ಸುವ್ಯವಸ್ಥಿತವಾಗಿ ನಡೆಯುತ್ತದೆಯೋ ಅಂತಹ ಧನವನ್ನು ಪೂಜಿಸುತ್ತಾರೆ. ಇಲ್ಲಿ ಧನ ಎಂದರೆ ಶುದ್ಧ ಲಕ್ಷ್ಮೀ. ಶ್ರೀಸೂಕ್ತದಲ್ಲಿ ಭೂಮಿ, ಜಲ, ವಾಯು, ಅಗ್ನಿ, ಸೂರ್ಯ ಇವುಗಳನ್ನು ಧನವೆಂದೇ ಕರೆಯಲಾಗಿದೆ.

ಯಾವ ಧನಕ್ಕೆ ನಿಜವಾದ ಅರ್ಥವಿದೆಯೋ ಅದುವೇ ನಿಜವಾದ ಲಕ್ಷ್ಮೀ. ಧನ್ವಂತರಿ ಜಯಂತಿ : ಆಯುರ್ವೇದದ ದೃಷ್ಟಿಯಿಂದ ಈ ದಿನವು ಧನ್ವಂತರಿ ಜಯಂತಿಯ ದಿನವಾಗಿದೆ. ವೈದ್ಯರು ಈ ದಿನ ಧನ್ವಂತರಿಯ ಪೂಜೆಯನ್ನು ಮಾಡುತ್ತಾರೆ. ಬೇವಿನ ಎಲೆಯ ಸಣ್ಣ-ಸಣ್ಣ ತುಂಡು ಮತ್ತು ಸಕ್ಕರೆಯನ್ನು 'ಪ್ರಸಾದ'ವೆಂದು ಎಲ್ಲರಿಗೂ ಕೊಡುತ್ತಾರೆ. ಇದರಲ್ಲಿ ಬಹುದೊಡ್ಡ ಅರ್ಥವಿದೆ. ಬೇವು ಅಮೃತದಿಂದ ಉತ್ಪನ್ನವಾಗಿದೆ. ಧನ್ವಂತರಿಯು ಅಮೃತತತ್ವವನ್ನು ಕೊಡುವವನಾಗಿದ್ದಾನೆ ಎಂಬುದು ಇದರಿಂದ ಸ್ಪಷ್ಟ ವಾಗುತ್ತದೆ. ಪ್ರತಿದಿನ ಬೇವಿನ ಐದಾರು ಎಲೆಗಳನ್ನು ತಿಂದರೆ ರೋಗಗಳು ಬರುವ ಸಂಭವವೇ ಕಡಿಮೆಯಾಗುತ್ತದೆ. ಬೇವಿಗೆ ಇಷ್ಟೊಂದು ಮಹತ್ವವಿರುವುದರಿಂದಲೇ ಈ ದಿನ ಅದನ್ನು ಧನ್ವಂತರಿಯ ಪ್ರಸಾದವೆಂದು ಕೊಡುತ್ತಾರೆ.

ಬೇವಿನ ಆಧ್ಯಾತ್ಮಿಕ ಮಹತ್ವವನ್ನು ಸನಾತನದ ಗ್ರಂಥ 'ಹಬ್ಬ, ಧಾರ್ಮಿಕ ಉತ್ಸವ ಮತ್ತು ವ್ರತಗಳು' ಇದರಲ್ಲಿ ಕೊಡಲಾಗಿದೆ.ಯಮದೀಪದಾನ : ಯಮರಾಜನ ಕಾರ್ಯವು ಪ್ರಾಣಹರಣ ಮಾಡುವುದಾಗಿದೆ. ಕಾಲಮೃತ್ಯುವು ಯಾರಿಗೂ ತಪ್ಪಿಲ್ಲ ಮತ್ತು ಅದನ್ನು ತಪ್ಪಿಸಲೂ ಆಗುವುದಿಲ್ಲ. ಆದರೆ ಅಕಾಲ ಮೃತ್ಯುವು ಯಾರಿಗೂ ಬರಬಾರದೆಂದು ಧನತ್ರಯೋದಶಿಯಂದು ಯಮಧರ್ಮನಿಗೆ ಕಣಕದಿಂದ ತಯಾರಿಸಿದ ಎಣ್ಣೆಯ ದೀಪವನ್ನು ತಯಾರಿಸಿ ಸಂಜೆಯ ಹೊತ್ತಿನಲ್ಲಿ ಮನೆಯ ಹೊರಗೆ ದಕ್ಷಿಣಕ್ಕೆ ಮುಖ ಮಾಡಿಡಬೇಕು. ಇತರ ಯಾವುದೇ ದಿನದಂದು ದೀಪವನ್ನು ದಕ್ಷಿಣ ದಿಕ್ಕಿಗೆ ಮುಖ ಮಾಡಿ ಇಡುವುದಿಲ್ಲ. ಈ ದಿನ ಮಾತ್ರ ದೀಪವನ್ನು ದಕ್ಷಿಣಕ್ಕೆ ಮುಖ ಮಾಡಿಡಬೇಕು. ಆನಂತರ ಮುಂದಿನ ಮಂತ್ರದಿಂದ ಪ್ರಾರ್ಥನೆಯನ್ನು ಮಾಡಬೇಕು. ಮೃತ್ಯುನಾ ಪಾಶದಂಡಾಭ್ಯಾಂ ಕಾಲೇನ ಶ್ಯಾಮಯಾಸಹ |

ತ್ರಯೋದಶ್ಯಾಂದಿಪದಾನಾತ್ ಸೂರ್ಯಜಃ ಪ್ರೀಯತಾಂ ಮಮ ||

ಅರ್ಥ : ಧನತ್ರಯೋದಶಿಯಂದು ಯಮನಿಗೆ ನೀಡಿದ ದೀಪದ ದಾನದಿಂದ ಅವನು ಪ್ರಸನ್ನನಾಗಿ ನನ್ನನ್ನು ಮೃತ್ಯುಪಾಶ ಮತ್ತು ಶಿಕ್ಷೆಯಿಂದ ಮುಕ್ತಗೊಳಿಸಲಿ.

ವಿಯೆಟ್ನಾಂನಲ್ಲಿ ವಿಜೃಂಭಿಸಿದ 'ಇಂಡೋ-ವಿಯೆಟ್ನಾಂ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ'; ಡಾ. ಮೋನಿಷಾ ನವೀನ್, ತನಿಷಾ ಮತ್ತು ಚಿರಂಜೀವಿ ನೃತ್ಯ ಪ್ರದರ್ಶನಕ್ಕೆ ಅಪಾರ ಮೆಚ್ಚುಗೆ

ಹನೋಯ್ (ವಿಯೆಟ್ನಾಂ): ವಿಯೆಟ್ನಾಂನ ಹನೋಯ್ ನಗರದ ಜಪಾನೀಸ್ ಇಂಟರ್ನ್ಯಾಷನಲ್ ಸ್ಕೂಲ್ ಸಭಾಂಗಣದಲ್ಲಿ 'ಇಂಡಿಯನ್ ಕ್ಲಾಸಿಕಲ್ ಇಂಡೋ-ವಿಯೆಟ್ನಾಂ ಕಲ್ಚರಲ್ ಎಕ್ಸ್‌ಚೇಂಜ್ ಪ್ರೋಗ್ರಾಂ' ಅನ್ನು ಅತ್ಯಂತ ವಿಜೃಂಭಣೆಯಿಂದ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಾ. ಮೋನಿಷಾ ನವೀನ್, ತನಿಷಾ ಹಾಗೂ ಚಿರಂಜೀವಿ ಅವರು ನೀಡಿದ ನೃತ್ಯ ಪ್ರದರ್ಶನವು ಅತ್ಯಂತ ಅದ್ಭುತವಾಗಿ ಮೂಡಿಬಂದು, ವಿದ್ಯಾರ್ಥಿಗಳನ್ನು ಮತ್ತು ಸಭಿಕರನ್ನು ಮನಸೂರೆಗೊಳಿಸಿತು. ಭಾರತೀಯ ಪಾರಂಪರಿಕ ನೃತ್ಯ ಕಲೆಯನ್ನು ವಿದೇಶಿ ಮಣ್ಣಿನಲ್ಲಿ ಅತ್ಯಂತ ರೋಚಕವಾಗಿ ಪ್ರದರ್ಶಿಸಿದ ಡಾ. ಮೋನಿಷಾ ನವೀನ್, ತನಿಷಾ ಮತ್ತು ಚಿರಂಜೀವಿ ಅವರನ್ನು ಜಪಾನೀಸ್ ಇಂಟರ್ನ್ಯಾಷನಲ್ ಸ್ಕೂಲ್ ಆಡಳಿತ ಮಂಡಳಿ, ಶ್ರೀ ಸಾಯಿ ನಟರಾಜ ಆರ್ಟ್ಸ್ ಅಕಾಡೆಮಿಯ ನಿರ್ದೇಶಕರಾದ ಗುರು ಡಾ. ಪಿ. ಶರತ್ ಚಂದ್ರ ಹಾಗೂ ಆರ್ಟಿಸ್ಟ್ ಫ್ಯಾಕ್ಟರಿ ನಿರ್ದೇಶಕರಾದ ಕೆ. ಧರಣಿಧರ್ ಅವರು ಶ್ಲಾಘಿಸಿದರು. ತದನಂತರ ಈ ಮೂವರು ಕಲಾವಿದರ ನೃತ್ಯ ಸೇವೆಯನ್ನು ಗುರುತಿಸಿ ಅವರಿಗೆ ವೇದಿಕೆಯಲ್ಲಿ ಭವ್ಯ ಸನ್ಮಾನ ನೆರವೇರಿಸಲಾಯಿತು.



ಉದಯ ವಾಹಿನಿ

ಪ್ರಾದೇಶಿಕ

ಬುಧವಾರ
04 ನವೆಂಬರ್ 2026

05

ಜಾಮರ್ ಹಾಕಿದ್ರೂ ನೆಟ್ವರ್ಕ್ ಕೆಲಸ ಮಾಡಿರುವ ಬಗ್ಗೆ ತನಿಖೆ!

VAO ಪರೀಕ್ಷೆಯಲ್ಲಿ ಅಕ್ರಮ ಎಸಗಿ 151 ಅಂಕ ಪಡೆಯುವ ಮೂಲಕ ಮೊದಲ ರ್ಯಾಂಕ್ ಗಳಿಸಿದ ಆರೋಪದ ಮೇಲೆ ಶಂಕರ್ ಬನ್ನೂರು ವಿರುದ್ಧ ಎಫ್ಐಆರ್ ದಾಖಲಾಗಿದೆ.

• **ಉದಯವಾಹಿನಿ, ಹಾವೇರಿ:**

ಗ್ರಾಮ ಆಡಳಿತಾಧಿಕಾರಿ ನೇಮಕಾತಿ ಪರೀಕ್ಷೆಗೆ ಅಭ್ಯರ್ಥಿಯು ಮೊಬೈಲ್‌ನಂತಹ ವಸ್ತುವನ್ನು ಪರೀಕ್ಷಾ ಕೇಂದ್ರದೊಳಗೆ ತೆಗೆದುಕೊಂಡು ಹೋಗಿದ್ದು ಮೇಲ್ನೋಟಕ್ಕೆ ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಶಿಗ್ಗಾಂವ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

1 : ಕೋಲಿ,ಕಬ್ಬಲಿಗ ನೌಕರರ ಕ್ಷೇಮಾಭಿವೃದ್ಧಿ
2 : ನಿಗಮ ಸ್ಥಾಪನೆಗಾಗಿ ಹೋರಾಟಗಳು ನಡೆದಿವೆ
3 : ವರದಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು

ಮಾಡಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ ಎಂದು ಹಾವೇರಿ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ್ ದಾನಮ್ಮನವರ್ ತಿಳಿಸಿದ್ದಾರೆ. VAO ಪರೀಕ್ಷೆಯಲ್ಲಿ ಅಕ್ರಮ ಎಸಗಿ 151 ಅಂಕ ಪಡೆಯುವ ಮೂಲಕ ಮೊದಲ ರ್ಯಾಂಕ್ ಗಳಿಸಿದ ಆರೋಪದ ಮೇಲೆ ಶಂಕರ್ ಬನ್ನೂರು ಎಂಬಾತನ ಮೇಲೆ ಶಿಗ್ಗಾಂವ್ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿರುವ ಪ್ರಕರಣ ಕುರಿತು ಜಿಲ್ಲಾಧಿಕಾರಿ ಮಾಹಿತಿ



ನೀಡಿದ್ದಾರೆ. ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಜಿಲ್ಲಾಡಳಿತಕ್ಕೆ ಕೆಇಎ ಕಾರ್ಯನಿರ್ವಾಹಕ ಅಧಿಕಾರಿಗಳು ಆದೇಶ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸವಣೂರು ಉಪವಿಭಾಗಾಧಿಕಾರಿಗೆ ನೇತೃತ್ವದ ತನಿಖೆಗೆ ಆದೇಶ ಮಾಡಿದ್ದೆವು. ಅವರು ಪರೀಕ್ಷೆ ಕೇಂದ್ರದಲ್ಲಿನ ಸಿಸಿಟಿವಿ ಪರಿಶೀಲನೆ ಮಾಡಿದ್ದಾರೆ. ಅಭ್ಯರ್ಥಿ ಮೊಬೈಲನಂತಹ ವಸ್ತು ತೆಗೆದುಕೊಂಡು ಹೋಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ ಎಂದರು. ಪರೀಕ್ಷಾ ಕೇಂದ್ರಕ್ಕೆ ಜಾಮರ್ ಹಾಕಿರುತ್ತೇವೆ. ಕಾವಲು ತಂಡವಿರುತ್ತೆ. ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಯೇ ಬಂದು ಪರೀಕ್ಷೆ ಬರೆದಿದ್ದಾನೆ. ಅದರ ಬಗ್ಗೆ ಯಾವುದೇ ಗೊಂದಲವಿಲ್ಲ. ತಪಾಸಣೆ ವೇಳೆ ಹೇಗೆ ತಪ್ಪಿಸಿಕೊಂಡ

> ಪರೀಕ್ಷೆಗೆ ಸಾಕಷ್ಟು ಜನ ಬರುವ ಕಾರಣ ಚೆಕ್ ಮಾಡುವ ಅವಸರದಲ್ಲಿ ಈ ರೀತಿಯಾಗಿರಬಹುದು. ಪರೀಕ್ಷಾ ಕೇಂದ್ರದ ಸಿಸಿಟಿವಿ ಫೂಟೇಜ್ ಇದೆ. ಪೊಲೀಸರು ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಲಿದ್ದಾರೆ ಎಂದು ವಿವರಿಸಿದ್ದಾರೆ. -ಡಾ.ವಿಜಯಮಹಾಂತೇಶ್ ದಾನಮ್ಮನವರ್

ಮತ್ತು ಜಾಮರ್ ಇದ್ದರೂ ನೆಟವರ್ಕ್ ಹೇಗೆ ಕೆಲಸ ಮಾಡಿತು ಎಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಪೊಲೀಸರು ಎಲ್ಲಾ ಕೋನಗಳಿಂದಲೂ ತನಿಖೆ ಮಾಡಲಿದ್ದಾರೆ ಎಂದು ಡಿಸಿ ತಿಳಿಸಿದ್ದಾರೆ. ಪರೀಕ್ಷೆಯಲ್ಲಿ ಮೊಬೈಲ್ ಉಪಯೋಗ ಮಾಡಿದ್ದಾನೆ ಎಂದರೆ ಅದು ಲೋಪವಾದಂತೆ. ಆದರೆ ಯಾರಿಂದಾಯಿತು, ಹೇಗಾಯಿತು ಎನ್ನುವುದು ಗೊತ್ತಾಗಬೇಕಿದೆ. ಈ ರೀತಿಯಾದಾಗ ಪರೀಕ್ಷಾ ಕೇಂದ್ರದ ಅಧಿಕಾರಿಗಳ ಕರ್ತವ್ಯಲೋಪ ಕಂಡು ಬರುತ್ತದೆ. ಈ ಪ್ರಕರಣದಲ್ಲಿ ಬೇರೆಯವರು ಭಾಗಿಯಾಗಿದ್ದಾರೆ ಎನ್ನುವ ಕುರಿತು ಸದ್ಯಕ್ಕೆ ಹೇಳಲು ಆಗಲ್ಲ. ಇದರಲ್ಲಿ ಅಭ್ಯರ್ಥಿಯೊಬ್ಬನೇ ಇದ್ದಾನಾ ಅಥವಾ ಬೇರೆಯಾರಾದರೂ ಸಹಕಾರ ನೀಡಿದ್ದಾರೆಯೇ

> VAO ಫಲಿತಾಂಶ ಬಂತ ತಕ್ಷಣ ನಾವು ನೆಗೆಟಿವ್ ವಿಚಾರ ಮಾಡುವುದಕ್ಕಿಂತ ಆತನ ಹಿನ್ನೆಲೆ ಬಗ್ಗೆ ತಿಳಿದುಕೊಂಡೆವು. 2016 ರಲ್ಲಿ ಬಿಕಾಂ ಪದವಿ ಪಡೆದ ಬಳಿಕ ಆತ ತರಬೇತಿ ಪಡೆದಿರುವುದು ಗೊತ್ತಾಗಿದೆ. ಅ.29ರಂದು ಆತನ ವಿಚಾರಣೆ ನಡೆಸಲಾಗಿದೆ. ಎಲ್ಲಾ ಮುಂಜಾಗ್ರತೆ ಕ್ರಮ ಕೈಗೊಂಡರೂ ಈ ರೀತಿ ಲೋಪವಾಗಿದೆ.

ಎಂಬುದು ಪೊಲೀಸ್ ತನಿಖೆಯಿಂದ ಬಹಿರಂಗವಾಗಲಿದೆ ಎಂದರು. ಒಂದು ಕೇಂದ್ರ ಹೊರತುಪಡಿಸಿ ಜಿಲ್ಲೆಯಲ್ಲಿ ಈ ರೀತಿ ಬೇರೆ ಕಡೆ ಅಕ್ರಮ ನಡೆದಿರುವ ಬಗ್ಗೆ ದೂರು ಬಂದಿಲ್ಲ. ಆ ರೀತಿ ಬಂದರೆ ಪರಿಶೀಲನೆ ಮಾಡುತ್ತೇವೆ. ತಪ್ಪು ಮಾಡಿದ ಬಳಿಕ ತಪ್ಪಿಸಿಕೊಳ್ಳುತ್ತೇವೆ ಎನ್ನುವುದು ಸುಳ್ಳು, ತಪ್ಪು ಮಾಡಿದರೆ ಎಲ್ಲಿಯಾದರೂ ಒಂದು ಕಡೆ ಸಿಕ್ಕೆ ಸಿಗುತ್ತೆ. ಈ ಘಟನೆ ಪರೀಕ್ಷಾ ಕೇಂದ್ರದ ಅಧಿಕಾರಿಗಳ ಕರ್ತವ್ಯಲೋಪದಿಂದ ಆಗಿದೆಯಾ ಅಥವಾ ಪರೀಕ್ಷಾ ಕೇಂದ್ರದ ಅಧಿಕಾರಿಗಳು ಸಹ ಇದರಲ್ಲಿ ಶಾಮೀಲು ಇದ್ದಾರೆಯೇ ಎನ್ನುವುದು ತನಿಖೆಯಿಂದ ಗೊತ್ತಾಗಬೇಕಿದೆ ಎಂದು ಡಿಸಿ ಪ್ರತಿಕ್ರಿಯೆ ನೀಡಿದ್ದಾರೆ.

ಕ್ರೀಡೆಯಿಂದ ಯುವಕರು ಒಗ್ಗಟ್ಟು,ಕ್ರೀಡಾ ಮನೋಭಾವ ಬೆಳೆಯುತ್ತೆ

• **ಉದಯವಾಹಿನಿ,ಚಿಂಚೋಳಿ:**

ಯುವಕರು ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ಒಗ್ಗಟ್ಟು ಹಾಗೂ ಕ್ರೀಡಾ ಮನೋಭಾವ ಬೆಳೆಯುತ್ತದೆ ಎಂದು ಶಾಸಕ ಡಾ.ಅವಿನಾಶ ಜಾಧವ ಹೇಳಿದರು. ತಾಲ್ಲೂಕಿನ ಕುಂಚಾವರಂ ಹೊರವಲಯದಲ್ಲಿ ಸಂಜು ಚವ್ಹಾಣ ನೇತೃತ್ವದಲ್ಲಿ ಕುಂಚಾವರಂ ವ್ಯಾಪ್ತಿಯಲ್ಲಿ ಬರುವ ಯುವಕರಿಗಾಗಿ ಏರ್ಪಡಿಸಿದ ಬೃಹತ್ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು,ಕ್ರೀಡೆಯಿಂದ ಮಾನಸಿಕ ದೈಹಿಕ ಶಕ್ತಿ ವೃದ್ಧಿಯಾಗುತ್ತದೆ.

ಕ್ರೀಡಾಕೂಟವನ್ನು ಕ್ರೀಡಾಭಾವದಿಂದ ಆಟವಾಡಬೇಕು,ಯುವಕರ ಬೇಡಿಕೆಯಂತೆ ಕುಂಚಾವರಂ ವ್ಯಾಪ್ತಿಯಲ್ಲಿಯು ಸಹ ಸರ್ಕಾರದಿಂದ ಕ್ರೀಡಾಂಗಣ ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತೇನೆ,ಯುವಕರು ಹುರುಪಿನಿಂದ ಕ್ರೀಡೆಗೆ ಮಹತ್ವ ನೀಡಬೇಕು ಯಾವುದೇ ಕೆಟ್ಟ ಚಟಗಳಿಗೆ ಮರುಹೋಗದೆ ಕ್ರಿಕೆಟ್,ವಾಲಿಬಾಲ್,ಪಂದ್ಯಾಗಳಂತಹ ಯುವಕರು ಮಹತ್ವ ನೀಡಬೇಕು,ಗ್ರಾಮೀಣ ಯುವಕರ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಕೂಡ ಆಗುತ್ತದೆ ಎಂದರು.

ಕ್ರಿಕೆಟ್ ಪಂದ್ಯಾವಳಿ ಆಯೋಜಕ ಸಂಜು ಪವ್ಹಾರ ಮಾತನಾಡಿ ಕುಂಚಾವರಂ ಭಾಗದ ಯುವಕರಿಗಾಗಿ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಮಾಡಲಾಗಿದ್ದು ಪ್ರಥಮ ಬಹುಮಾನ 30ಸಾವಿರೂ,ಎರಡನೇ ಬಹುಮಾನ 20ಸಾವಿರ ರೂ.ಪಂದ್ಯ ಶ್ರೇಷ್ಠಕಪ್ ನೀಡಲಾಗುವುದು,



ಉದಯವಾಹಿನಿ ಚಿತ್ರ

ಪ್ರತಿಯೊಂದು ಪಂದ್ಯಾವಳಿಗೆ 10ಓವರ್ ಫೈನಲ್ ಪಂದ್ಯಾವಳಿಗೆ 12ಓವರ್ ಇಡಲಾಗಿದೆ.ಯುವಕರು ಪಂದ್ಯಾವಳಿಯ ಸದುಪಯೋಗ ಪಡೆದುಕೊಂಡು ಯಾವುದೇ ಮನಸ್ತಾಪ ಇಲ್ಲದೆ ಒಳ್ಳೆಯ ರೀತಿಯಲ್ಲಿ ಕ್ರೀಡಾಕೂಟ ಆಡಬೇಕು ಎಂದರು.ಡಿಸಿಸಿ ಬ್ಯಾಂಕ್ ನಿರ್ದೇಶಕ ಗೌತಮ್ ಪಾಟೀಲ,ಗೋಪಾಲ ಕುಂಚಾವರಂ ಮಾತನಾಡಿದರು.

ವಿಜಯಕುಮಾರ ಚೆಂಗಟಾ,ರೋಹಿತ್ ಅಶೋಕ,ಚಂದ್ರಶೇಟ್ಟಿ ಜಾಧವ, ಶ್ರೀಮಂತ ಕಟ್ಟಿಮನಿ, ಕೆಎಂ ಬಾರಿ,ಜಗಜೀವನರೆಡ್ಡಿ, ಉಮಾಪತಿ,ಸಂಜು ಕೊಂಡಾವಿಜಯಕುಮಾರ,ರಾಜು ರಾಠೋಡ್, ಭೀಮಶೇಟ್ಟಿ ಮುರುಡಾ,ವೆಂಕಟರೆಡ್ಡಿ,ಚನಟಿ ಸೇರಿದಂತೆ ಕ್ರೀಡಾಪಟ್ಟುಗಳು, ಗ್ರಾಮಸ್ಥರು ಇದ್ದರು.

ಬಸವಣ್ಣ ಮಾಡಿದ್ದು ಲೋಕ ಕಲ್ಯಾಣದ ಕ್ರಾಂತಿ

• **ಉದಯವಾಹಿನಿ, ಬೀದರ:**

ಪ್ರಪಂಚದ ಇತಿಹಾಸದಲ್ಲಿ ಅನೇಕ ಕ್ರಾಂತಿಗಳಾಗಿವೆ. ಆದರೆ, ಬಸವಣ್ಣ ಮಾಡಿದ್ದು ಲೋಕ ಕಲ್ಯಾಣದಕ್ರಾಂತಿ.ಇದು ಇಡೀ ಮನುಕುಲದ ಉದ್ಧಾರವಾಗಿದೆ. ಶರಣರು ಅನೇಕ ಹೋರಾಟಗಳನ್ನು ಮಾಡಿ ಕಾಯಕವೇ ಕೈಲಾಸವೆಂದು ಎಲ್ಲಾ ವೃತ್ತಿಗೆ ಸಮಾನಗೌರವ ಕೊಟ್ಟು ಸತ್ಯ ಶುದ್ಧಕಾಯಕಕ್ಕೆ ಹೊಸ ಕಲ್ಪನೆ ನೀಡಿರುವುದರಿಂದಲೇ ಕಲ್ಯಾಣ ಪಟ್ಟಣದಲ್ಲಿ ಅಂದುಕೊಡುವವರುಂಟು ಬೇಡುವವರಿಲ್ಲ, ಬೇಡುವವರಿಲ್ಲದ ಕಾರಣ ನಾನು ಬಡವನಾದೆ ಎಂಬ ಬಸವಣ್ಣನವರ ಕಾಯಕ ಸಿದ್ಧಾಂತ ಇಂದಿಗೂ ಪ್ರಸ್ತುತಎಂದು ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರಖಂಡ್ರೆ, ನುಡಿದರು.

ಜಿಲ್ಲೆಯ ಸಿದ್ದೇಶ್ವರ ಗ್ರಾಮದಲ್ಲಿ ನಿನ್ನೆ ನಡೆದ ಅಶ್ವಾರೂಢ ವಿಶ್ವಗುರು ಬಸವಣ್ಣನವರ ಮೂರ್ತಿಉದ್ಘಾಟನೆ ಹಾಗೂ ಗ್ರಾಮದ ಮಹಾದ್ವಾರ ಉದ್ಘಾಟಿಸಿದ ಕರ್ನಾಟಕರಾಜ್ಯದಗ್ರಾಮೀಣಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ ಈಶ್ವರಖಂಡ್ರೆ, ಮಾತನಾಡುತ್ತ ಗ್ರಾಮದಲ್ಲಿ ಇಂದು ಐತಿಹಾಸಿಕ ವೈಚಾರಿಕಕಾರ್ಯ ನಡೆದಿದೆ. ಯುವಜನಾಂಗ ದುಶ್ಚಟಗಳಿಗೆ ಬಲಿಯಾಗಿ ಜೀವನ ಹಾಳಾಗುತ್ತಿದೆ. ನೈತಿಕ ಮೌಲ್ಯ ಕುಸಿದಿದೆ,ಒಡೆದಾಡುವ ನೀತಿಯಿಂದ ಸಮಾಜದಲ್ಲಿ ಆತಂಕ ಹೆಚ್ಚಾಗುತ್ತಿದೆ.ಇಂಥಕಾಲ ಘಟ್ಟದಲ್ಲಿ ಬಸವಣ್ಣನವರ ತತ್ವದಿಂದ ಶಾಂತಿ ನೆಮ್ಮದಿ ಒಡಮೂಡಲು



ಉದಯವಾಹಿನಿ ಚಿತ್ರ

ಸಾಧ್ಯ.ಯುವಜನಾಂಗದಲ್ಲಿ ಪರಿವರ್ತನೆಯಾಗಿ ಸಮಾಜ ಸುಧಾರಣೆ ಸಾಧ್ಯ.ವಚನ ಸಾಹಿತ್ಯ ಓದಿದರೆ ಮಹಾನ್ ಶಕ್ತಿ ಬರುವುದರಲ್ಲಿ ಸಂದೇಹವಿಲ್ಲ. ಯುವ ಶಕ್ತಿ ಅಣು ಶಕ್ತಿಗಿಂತ ಮಿಗಿಲು. ಯುವಕರು ನಿರಂತರವಾಗಿ ಧನಾತ್ಮಕ ಚಿಂತನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಬಸವಣ್ಣ ಮಹಿಳೆಯರಿಗಾಗಿ ಮನೆ ಬಿಟ್ಟ,ಹನ್ನೆರಡನೆ ಶತಮಾನದಲ್ಲಿ 33 ವಚನಕಾರ್ತಿಯರು ವಚನಗಳನ್ನು ರಚಿಸಿರುವುದು ದಾಖಲೆ. ಮಹಿಳೆಯರು ಯಾವತ್ತು ಬಸವಣ್ಣನವರನ್ನು ಮರೆಯಬಾರದು. ಇಲ್ಲಿ ಎಲ್ಲಾ ತರಹದ ಇತ್ತೀಚಿನ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತಿದೆ. ವ್ಯಕ್ತಿಯ ನಾಡಿ ಮಿಡಿತ, ಹೃದಯ ಮಿಡಿತ ಶಾರೀರಿಕ ಬದಲಾವಣೆ ಬಗ್ಗೆ ಯಂತ್ರದಿಂದ ಪರೀಕ್ಷೆಗೆ ಒಳಪಡಿಸಿ ತದನಂತರ ಇಷ್ಟಲಿಂಗ ಪೂಜೆಜೀವನದಲ್ಲಿ ಅಳವಡಿಸಿಕೊಂಡ ಮೇಲೆ ದೇಹದಲ್ಲಿ ಆಗುವ ಪರಿಣಾಮ ನೋಡುವ ಭಾಗ್ಯ ಪ್ರವಾಸಿಗರ ಗಮನಕ್ಕೆ ತರುವ ದಿಶೆಯಲ್ಲಿ ನಾವಿಂದು ಕಾರ್ಯೋನ್ಮುಖರಾಗಿದ್ದೇವೆಂದು


ದ್ರಾಕ್ಷಿ ಬೆಳೆಗಾರರಿಗೆ ಮತ್ತು ಕಬ್ಬು ಬೆಳೆಗಾರರಿಗೆ ಮುಲ್ಲಾಮಾರಿ ನದಿಗೆ ನೀರು ಬಿಡಲು: ಗೋಪಾಲ ಎಂಪಿ ಒತ್ತಾಯ

• **ಉದಯವಾಹಿನಿ ಚಿಂಚೋಳಿ:**

ತಾಲ್ಲೂಕಿನ ರೈತರ ಜೀವನಾಡಿ ನಾಗರಾಳ ಜಲಾಶಯದ ನೀರು ಮುಲ್ಲಾಮಾರಿ ನದಿಗೆ ಹರಿಸಿ ಕೆಳಭಾಗದ ರೈತರಿಗೆ ಬರುವ ವಾಣಿಜ್ಯ ಆದಾಯ ಬೆಳೆಗಳಾದ ದ್ರಾಕ್ಷಿ ಬಾಳೆ ಬೆಳೆಗಾರರಿಗೆ ಮತ್ತು ಕಬ್ಬು ಬೆಳೆಗಾರರಿಗೆ ಮುಲ್ಲಾಮಾರಿ ನದಿಗೆ ನೀರು ಹರಿಸುವಂತೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಬೇಕು ಎಂದು ರೈತ ಹೋರಾಟಗಾರ ಗೋಪಾಲ ಎಂಪಿ ಒತ್ತಾಯಿಸಿದರು.

ತಾಲ್ಲೂಕಿನ ಚಿಮ್ಮಾಯಿದ್ಲಾಯಿ ವೃತ್ತದಲ್ಲಿ ದ್ರಾಕ್ಷಿ ಬೆಳೆಗಾರರು ಮತ್ತು ಕಬ್ಬು ಬೆಳೆಗಾರರು ರೈತ ಮುಖಂಡರು ನಾಗರಾಳ ಜಲಾಶಯದ ನೀರು ಮುಲ್ಲಾಮಾರಿ ನದಿಗೆ ಬಿಡಲು ಒತ್ತಾಯಿಸಿ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿದರು.

ಜಿಪಂ.ಮಾಜಿ ಸದಸ್ಯ ಸಾಬು ಮಾಶಳ ಮಾತನಾಡಿ ಮುಲ್ಲಾಮಾರಿ ನದಿಗೆ ನೀರು ಹರಿಸಿ ಜಲಾಶಯಗಳಿಂದ ನೀರು ಅಧಿಕಾರಿಗಳು ಬಿಡುತ್ತಾರೆಂದು ನಾವೆಲ್ಲ ರೈತರು ದ್ರಾಕ್ಷಿ ಕಬ್ಬು



ಉದಯವಾಹಿನಿ ಚಿತ್ರ

ಬೆಳೆಗಳು ಲಕ್ಷಾಂತರ ರೂಪಾಯಿ ಲಾಗೂಡಿ ಮಾಡಿ ಬೆಳೆ ಬೆಳೆಸಿದ್ದೇವೆ ಆದರೆ ನದಿಯಲ್ಲಿ ನೀರಿಲ್ಲದೆ ಬೆಳೆಗಳು ಒಣಗುತ್ತಿವೆ.

ನದಿಯಲ್ಲಿ ನೀರು ಬತ್ತಿ ಹೋಗಿರುವುದರಿಂದ 30 ವರ್ಷದ ಆದಾಯ ಬರುವ ಬೆಳೆ ನೀರಿಲ್ಲದೆ ರೈತ ಆರ್ಥಿಕ ಸಂಕಷ್ಟಕ್ಕೆ ಸಿಲುಕಲು ಬಿಡದೆ ರೈತರಿಗೆ ಧೈರ್ಯ ತುಂಬಿ ಸರ್ಕಾರ ದ್ರಾಕ್ಷಿ ಬೆಳೆಗಾರರಿಗೆ ನೀರು ಕೊಡಬೇಕು ನೈಜ ವಾಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಂಡು ವಾಣಿಜ್ಯ ಬೆಳೆ ಬೆಳೆಯಲು ತಾಲ್ಲೂಕಿನ ರೈತರಿಗೆ ನೀರು ಕೊಡಬೇಕು ಮತ್ತು ಕುರಿ-ಮೇಕೆ ಜಾನುವಾರಗಳಿಗೆ ಕುಡಿಯಲು ನೀರು ಕೊಟ್ಟು ಸರ್ಕಾರ ಪುಣ್ಯ ಕಟ್ಟಿಕೊಳ್ಳಬೇಕು ಎಂದರು.

ಕಬ್ಬು ಬೆಳೆಗಾರರು ಸಿದ್ದಸಿರಿ ಕಂಪನಿವಿದೆ ಎಂದು ಸಾವಿರಾರು ರೈತರು ಇವತ್ತಿನ ದಿವಸ ತಮ್ಮ ಜಮೀನಿನಲ್ಲಿ ಕಬ್ಬು ಬೆಳೆದಿದ್ದಾರೆ ಆದರೆ ಕಂಪನಿಗೆ ರೈತರ ಕಬ್ಬು ನುರಿಸಲು ಜಿಲ್ಲಾಧಿಕಾರಿಗಳು ಮತ್ತು ಸರಕಾರ ಆದೇಶ ಹೊರಡಿಸಬೇಕು ಎಂದರು. ಸರ್ಕಾರ ಬರಗಾಲ ಘೋಷಣೆ ಮಾಡಿ ಕೇವಲ ಕಾಗದ ಪತ್ರಗಷ್ಟೇ ಸೀಮಿತವಾಗಿದೆ ತ್ವರಿತವಾಗಿ ಕೂಡಲೇ ರೈತರ ಖಾತೆಗಳಿಗೆ ಬರಗಾಲ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದರು.

ಕೂಲಿ ಸಮಾಜದ ಜಿಲ್ಲಾಧ್ಯಕ್ಷ ರವಿರಾಜ ಕೊರವಿ,ವೀರಣ್ಣ ಗಂಗಾಣಿ,ಬಸವರಾಜ ಮಲ್ಲಪ್ಪಾ,ಸುರೇಶ ದಂಡಿನ,ವೀರಶೆಟ್ಟಿ ಪೂಜಾರಿ,ಅನೇಕರಿದ್ದರು.

5 ಕೋಟಿ ವೆಚ್ಚದಲ್ಲಿ ಅರಣ್ಯ ಭವನ ನಿರ್ಮಾಣಕ್ಕೆ ಚಾಲನೆ

• **ಉದಯವಾಹಿನಿ ಬೀದರ: :**

ನಗರದಲ್ಲಿ 5 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಅರಣ್ಯ ಭವನ ಹಾಗೂ 2 ಕೋಟಿ ವೆಚ್ಚದಲ್ಲಿ ನೌಬಾದನಲ್ಲಿರುವ ಟ್ರೀ ಪಾರ್ಕ್ ಅಭಿವೃದ್ಧಿಪಡಿಸಲು ಶೀರ್ಘವಾಗಿ ಲೋಕಾರ್ಪಣೆಗೊಳಿಸಲು ಕ್ರಮ ವಹಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಹೇಳಿದರು. ನವಬಾಗದಲ್ಲಿರುವ ಅರಣ್ಯ ಇಲಾಖೆಯ ಆವರಣದಲ್ಲಿ ನೂತನ ಅರಣ್ಯ ಭವನ ಕಟ್ಟಡ ನಿರ್ಮಾಣ ಹಾಗೂ ವೃಕ್ಷೋದ್ಯಾನ್ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ತಾವು ಅರಣ್ಯ ಸಚಿವರಾಗಿದ್ದ ಅವಧಿಯಲ್ಲಿ ಬೀದರ ಜಿಲ್ಲೆಯಲ್ಲಿ ಹಸಿರು ಪರಿಸರವನ್ನು ಬೆಳೆಸುವ ನಿಟ್ಟಿನಲ್ಲಿ ಹಸಿರೆ ಉಸಿರು ಮಕ್ಕಳೆ ಕಾಡು ಬೆಳೆಸಿ ನಾಡು ಉಳಿಸಿ ಮಕ್ಕಳಲ್ಲಿ ಪರಿಸರ ಪ್ರೇಮ ಬೆಳೆಸುವುದರೊಂದಿಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಉದ್ಯಾನವನಗಳನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಗಳನ್ನು ರೂಪಿಸಿ ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುತ್ತಿದೆ. 5 ಕೋಟಿ ವೆಚ್ಚದಲ್ಲಿ ನೆಲಮಹಡಿಯ ಆಡಳಿತ ಭವನ ನಿರ್ಮಿಸಲಾಗುವುದು ಪ್ರತಿಯೊಂದು ತಾಲ್ಲೂಕಿನಲ್ಲಿ 2 ಕೋಟಿ ರೂ ವೆಚ್ಚದಲ್ಲಿ ಸುಂದರವಾದ ಟ್ರೀ ಪಾರ್ಕ್ ನಿರ್ಮಾಣಕ್ಕೆ ಅರಣ್ಯ ಸಚಿವರಾಗಿದ್ದಾಗ ಅನುದಾನ ಬಿಡುಗಡೆ ಮಾಡಲಾಗಿದ್ದು ಹೆಚ್ಚಿನ ಅನುದಾನ ಅಗತ್ಯವಿದ್ದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಇಂತಹ ಉದ್ಯಾನವನಗಳು ಕೇವಲ ಹಸಿರು ತಾಣಗಳಾಗಿರದೆ, ಅರಣ್ಯ, ಜೀವ ವೈವಿಧ್ಯತೆ ಕುರಿತು ಸಾರ್ವಜನಿಕರಲ್ಲಿ ಅರಿವು

ವೃಕ್ಷೋದ್ಯಾನ್ ಅಭಿವೃದ್ಧಿ ಕಾಮಗಾರಿ



ಉದಯವಾಹಿನಿ ಚಿತ್ರ

> ಭಾಲ್ಕಿ ತಾಲ್ಲೂಕಿನ ಇಂಚೂರು ಗ್ರಾಮದಲ್ಲಿ ಈಗಾಗಲೇ ಅಭಿವೃದ್ಧಿಪಡಿಸಿ ಉದ್ಘಾಟಿಸಿರುವ ಟ್ರೀ ಪಾರ್ಕ್ ಬೀದರ್ ಜಿಲ್ಲೆಯ ಪ್ರಮುಖ ಆಕರ್ಷಣೆಯ ಕೇಂದ್ರವಾಗಿ ರೂಪುಗೊಂಡಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕುಟುಂಬಗಳು ಹಾಗೂ ಮಕ್ಕಳು ಭೇಟಿ ನೀಡುತ್ತಿರುವುದು ಸಂತಸದ ಸಂಗತಿಯಾಗಿದೆ. -ಸಚಿವ ಈಶ್ವರ ಖಂಡ್ರೆ

ಮೂಡಿಸುವ ವೈಜ್ಞಾನಿಕ ಉದ್ಯಾವನಗಳಾಗಬೇಕು. ಮಕ್ಕಳು ಆಟವಾಡಲು, ಮನೊರಂಜನೆ ಹಾಗೂ ಕುಟುಂಬಗಳು ವಿರಾಮದ ಸಮಯ ಕಳೆಯಲು ಹಾಗೂ ಸಾರ್ವಜನಿಕರು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸಲು ಉತ್ತಮ ಸ್ಥಳಗಳಾಗಬೇಕು ಎಂದು ಹೇಳಿದರು.

ಚನ್ನರಾಯಪಟ್ಟಣದಲ್ಲಿ ಅದ್ದೂರಿ ಗಣಪತಿ ಉತ್ಸವ, ಮೆರವಣಿಗೆ

• **ಉದಯವಾಹಿನಿ ಚನ್ನರಾಯಪಟ್ಟಣ:**

ಪಟ್ಟಣದಲ್ಲಿ ಪ್ರತಿಷ್ಠಾಪಿಸಿದ್ದ ಪ್ರಸನ್ನ ಗಣಪತಿ ಅಮೃತ ಮಹೋತ್ಸವದ ಅಂಗವಾಗಿ ಅಲಂಕೃತ ವಾಹನದಲ್ಲಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಕಲಾತಂಡಗಳು ನಾಡಿನ ಸಂಸ್ಕೃತಿ, ಕಲೆ ಮತ್ತು ಪರಂಪರೆಯನ್ನು ಬಿಂಬಿಸಿದವು. ಕಲಾವಿದ ರವೀಂದ್ರ, ತಯಾರಿಸಿದ ಮಂತ್ರಾಲಯದ ಬೃಂದಾವನದ ಮಾದರಿಯ ಮಂಟಪದಲ್ಲಿ ಗಣಪತಿ ಪ್ರತಿಷ್ಠಾಪಿಸಲಾಯಿತು. ಮುಂಭಾಗದಲ್ಲಿ 74 ಗಣಪತಿಯನ್ನು ಇಡಲಾಗಿತ್ತು. 50 ದಿನಗಳಿಂದ ಪ್ರತಿಷ್ಠಾಪಿಸಿದ್ದ ಗಣಪತಿಗೆ ಪೂಜೆ ಸಲ್ಲಿಸಿದ ಬಳಿಕ ಮೆರವಣಿಗೆಗೆ ಬೆಳಿಗ್ಗೆ ಶಾಸಕ ಸಿ.ಎನ್. ಬಾಲಕೃಷ್ಣ ಚಾಲನೆ ನೀಡಿದರು.

ತೆಪ್ಪೋತ್ಸವದ ನಂತರ ಅಮಾನಿಕೆರೆಯಲ್ಲಿ ವಿಸರ್ಜಿಸಲಾಗುತ್ತದೆ.



ಉದಯವಾಹಿನಿ ಚಿತ್ರ

1951 ರಿಂದ ಪಟ್ಟಣದಲ್ಲಿ ಗಣಪತಿ ಪ್ರತಿಷ್ಠಾಪಿಸಲಾಗುತ್ತಿದೆ. ಮೈಸೂರಿನಿಂದ ಆಗಮಿಸುವ 7 ವಿದ್ವಾಂಸರು ಮಂಗಳವಾರ ಸಂಜೆ ಪೂಜೆ ಸಲ್ಲಿಸಿ ಗಂಗಾರತಿ ನೆರವೇರಿಸಿದ ಬಳಿಕ ಅಮಾನಿಕೆರೆಯಲ್ಲಿ ಗಣಪತಿಯನ್ನು ವಿಸರ್ಜಿಸಲಾಗುವುದು ಎಂದು ಪ್ರಸನ್ನ ಗಣಪತಿ ಸೇವಾಸಮಿತಿಯ ಅಧ್ಯಕ್ಷ ಸಿ.ಎನ್.ಅಶೋಕ್ ತಿಳಿಸಿದರು.

ಮಹಿಳಾ ಸಾಹಿತಿಗಳ ನಿರ್ಲಕ್ಷ್ಯ ಖಂಡನೀಯ:ಡಾ.ಸುಜಾತಾ

• **ಉದಯವಾಹಿನಿ ತಾಳಿಕೋಟೆ:**



ಉದಯವಾಹಿನಿ ಚಿತ್ರ

ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಜಯಪುರ ಜಿಲ್ಲೆ ನಾಡಿನಲ್ಲಿಯೇ ಮಹತ್ವದ ಸಾಧನೆ ಮಾಡಿದೆ. ಆದರೆ, ಇತ್ತೀಚೆಗೆ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಾಹಿತಿಗಳ ಹೆಸರುಗಳನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ ಮಹಿಳಾ ಸಾಹಿತಿಯೊಬ್ಬರ ಹೆಸರನ್ನೂ ಉಲ್ಲೇಖಿಸದಿರುವುದು ವಿಷಾದನೀಯ ಎಂದು ಸಾಹಿತಿ ಡಾ. ಸುಜಾತಾ ಚಲವಾದಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪತ್ರಿಕೆಗೆ ಪ್ರಕಟನೆ ನೀಡಿರುವ ಅವರು ಜಿಲ್ಲೆಯಲ್ಲಿ ಜಯಶ್ರೀ ಯರನಾಳ, ಸರಸ್ವತಿ ಚಿಮ್ಮಲಗಿ, ಶಾಂತಾ ಇಮ್ರಾಪುರ, ಇಂದುಮತಿ ಲಮಾಣಿ, ಸುಶೀಲಾ ಕಮತಗಿ, ಭಾರತಿ ಪಾಟೀಲ, ಡಾ. ಸುಜಾತಾ ಚಲವಾದಿ, ಪ್ರಭಾವತಿ ದೇಸಾಯಿ, ದಾಕ್ಷಾಯಣಿ ಹುಡೇದ, ದಾಕ್ಷಾಯಣಿ ಬಿರಾದಾರ, ಹೇಮಲತಾ ವಸ್ತ್ರದ, ವಿದ್ಯಾವತಿ ಅಂಕಲಗಿ ಸೇರಿದಂತೆ ಅನೇಕ ಮಹಿಳಾ ಸಾಹಿತಿಗಳು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಇಷ್ಟೊಂದು ಪ್ರತಿಭಾವಂತ ಮಹಿಳಾ ಸಾಹಿತಿಗಳಿದ್ದರೂ ಜಿಲ್ಲಾಡಳಿತದ ಸರ್ಕಾರಿ ಕಾರ್ಯಕ್ರಮದಲ್ಲಿ ಅವರ ಹೆಸರುಗಳನ್ನು ಪ್ರಸ್ತಾಪಿಸದಿರುವುದು ಮಹಿಳಾ ಸಾಹಿತಿಗಳ ಕಡೆಗಣನೆಯಾಗಿದೆ. ಇದು ಪುರುಷ ಪ್ರಧಾನ ವ್ಯವಸ್ಥೆಯ ಮನೋಭಾವವನ್ನು ಪ್ರತಿಬಿಂಬಿಸುವಂತಿದೆ. ಸಾಹಿತ್ಯ ಕ್ಷೇತ್ರಕ್ಕೆ ಮಹಿಳೆಯರು ನೀಡಿರುವ ಕೊಡುಗೆಯನ್ನು ಗುರುತಿಸಿ ಗೌರವಿಸುವುದು ಅಗತ್ಯವಾಗಿದೆ.

ಗಿನ್ನೆಸ್ ದಾಖಲೆಯತ್ತ 'ಮಾಂಡ್ ಸೊಭಾಣ್' ಐತಿಹಾಸಿಕ ಹೆಜ್ಜೆ

ಕೊಂಕಣಿ ಗಿನ್ನೆಸ್ ದಾಖಲೆ ಮಾಂಡ್ ಸೊಭಾಣ್ ವಿಶ್ವ ಕೊಂಕಣಿ ಸಂಗೀತ ಮಹಾಸಮ್ಮೇಳನ ಮಂಗಳೂರು ಕೊಂಕಣಿ ಹಾಡು

• **ಉದಯವಾಹಿನಿ, ಮಂಗಳೂರು:**

ಒಂದೇ ಭಾಷೆ, ಹಲವು ಪ್ರಾಂತ್ಯಗಳು, ಮೂರು ಧರ್ಮಗಳು,

1 : ಸಮೂಹ ಗಾಯನ ಮ್ಯಾರಥಾನ್
2 : ಮೊದಲ ದಿನ ಕೊಂಕಣಿ ಗಾಯನ
3 :12 ನಿಮಿಷ ಕೊಂಕಣಿ ಗಾಯನ

6,789ಕ್ಕೂ ಅಧಿಕ ಹಾಡುಗಾರರು ಹಾಗೂ 4,500ಕ್ಕೂ ಮಿಕ್ಕಿ ವಿಶಿಷ್ಟ ಗೀತೆಗಳು.! ಮಂಗಳೂರಿನ ಹೃದಯಭಾಗವಾದ ಪುರಭವನ ಇಂಥದ್ದೊಂದು ಅಭೂತಪೂರ್ವ, ಜಾಗತಿಕ ಮಟ್ಟದ ಸಾಂಸ್ಕೃತಿಕ ಮಹಾಕ್ರಾಂತಿಗೆ ಮುನ್ನುಡಿ ಬರೆಯುತ್ತಿದೆ.

ಕೊಂಕಣಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉಳಿವಿಗೆ ನಾಲ್ಕು ದಶಕಗಳಿಂದ ಕಂಕಣಬದ್ಧವಾಗಿ ದುಡಿಯುತ್ತಿರುವ ಪ್ರಮುಖ ಸಾಂಸ್ಕೃತಿಕ ಸಂಘಟನೆ 'ಮಾಂಡ್ ಸೊಭಾಣ್'ನ 40ನೇ ವರ್ಷದ ಸಂಭ್ರಮದ ಅಂಗವಾಗಿ ಆಯೋಜಿಸಲಾಗಿರುವ 'ವಿಶ್ವ ಕೊಂಕಣಿ ಸಂಗೀತ ಮಹಾಸಮ್ಮೇಳನ'ವು ಗಿನ್ನೆಸ್ ವಿಶ್ವದಾಖಲೆಯ ಸುವರ್ಣ ಪುಟ ಸೇರಲು ಸಜ್ಜಾಗುತ್ತಿದೆ.

ಸತತ 12 ದಿನಗಳು, 12 ಗಂಟೆಗಳು ಹಾಗೂ 12 ನಿಮಿಷಗಳ ಕಾಲ



ಉದಯವಾಹಿನಿ ಚಿತ್ರ

(ಒಟ್ಟು 300 ಗಂಟೆ 12 ನಿಮಿಷ) ಯಾವುದೇ ಪುನರಾವರ್ತನೆಯಿಲ್ಲದೆ ನಿರಂತರವಾಗಿ ಹಾಡುವ ಮೂಲಕ 'ಅತ್ಯಂತ ದೀರ್ಘಾವಧಿಯ ಸಮೂಹ ಗಾಯನ ಮ್ಯಾರಥಾನ್' ಎಂಬ ಗಿನ್ನೆಸ್ ವಿಶ್ವದಾಖಲೆ ನಿರ್ಮಿಸುವ ಸಾಹಸಕ್ಕೆ ಮಂಗಳವಾರ ಮುಂಜಾನೆ 6 ಗಂಟೆಗೆ ಮಂಗಳೂರು ಪುರಭವನದಲ್ಲಿ ವಿಧ್ಯುಕ್ತ ಚಾಲನೆ ದೊರೆಯಿತು.

ಬೃಹತ್ ಗಾನಯಜ್ಞದ ಹಿನ್ನೆಲೆ ಹಾಗೂ ಸಿದ್ಧತೆಗಳ ಕುರಿತು ಮಾತನಾಡಿದ ಮಾಂಡ್ ಸೊಭಾಣ್ ಸಂಸ್ಥೆಯ ಅಧ್ಯಕ್ಷ ಲೂಯಿಸ್ ಜೆ.ಪಿಂಟೊ, ಈ ಮಹಾಸಮ್ಮೇಳನ ಕೇವಲ ದಾಖಲೆಗಾಗಿ ಸೀಮಿತವಲ್ಲ ಎಂಬುದನ್ನು ಸ್ಪಷ್ಟಪಡಿಸಿದರು. ನವೆಂಬರ್ 3ರ ಮುಂಜಾನೆ 6 ಗಂಟೆಗೆ ಆರಂಭವಾದ ಸಮೂಹ ಗಾಯನ ನವೆಂಬರ್ 15ರ ಸಂಜೆ 6 ಗಂಟೆ 12 ನಿಮಿಷದವರೆಗೆ ಕಿಂಚಿತ್ತೂ ನಿಲ್ಲದೆ ಸತತ 300 ಗಂಟೆಗಳ ಕಾಲ ಅವಿರತವಾಗಿ ನಡೆಯಲಿದೆ. ಇದಕ್ಕಾಗಿ 300 ಗಾಯನ ತಂಡಗಳನ್ನು ರಚಿಸಲಾಗಿದ್ದು, ಪ್ರತಿ ತಂಡದಲ್ಲಿ 18ರಿಂದ 25 ಮಂದಿ ಗಾಯಕರಿದ್ದಾರೆ.

> ಬಾಲ್ಯದಿಂದಲೇ ಹಾಡುತ್ತಿದ್ದ ನನಗೆ ಇಂತಹ ಜಾಗತಿಕ ಮಟ್ಟದ ಗಿನ್ನೆಸ್ ದಾಖಲೆಯ ಪ್ರಯತ್ನದಲ್ಲಿ ಕೊಂಕಣಿ ಹಾಡುಗಳನ್ನು ಹಾಡಲು ಅವಕಾಶ ಸಿಕ್ಕಿರುವುದು ಬದುಕಿನ ಮರೆಯಲಾಗದ ಖುಷಿ ಎಂದು ಹರ್ಷ ವ್ಯಕ್ತಪಡಿಸಿದರು. -ಯುವ ಗಾಯಕಿ ಲೀಶಾ

ಒಂದೊಂದು ತಂಡಕ್ಕೆ ತಲಾ ಒಂದು ಗಂಟೆಯ ಕಾಲಾವಕಾಶವಿದ್ದು, ಈ ಅವಧಿಯಲ್ಲಿ 4,500ಕ್ಕೂ ಅಧಿಕ ಹಾಡುಗಳನ್ನು 7 ಸಾವಿರಕ್ಕೂ ಮಿಕ್ಕಿ ಗಾಯಕರು ಪ್ರಸ್ತುತಪಡಿಸಲಿದ್ದಾರೆ. ಮಂಗಳೂರು, ಉಡುಪಿ, ಮಲೆನಾಡು, ಬೆಂಗಳೂರು, ಗೋವಾದಿಂದ 53 ತಂಡಗಳು, ಮಹಾರಾಷ್ಟ್ರ ಹಾಗೂ ವಿದೇಶಗಳಾದ ಆಸ್ಟ್ರೇಲಿಯಾ, ಕುವೈತ್, ಮಸ್ಕತ್, ಕತಾರ್‌ಗಳಿಂದಲೂ ಕಲಾವಿದರು ಆಗಮಿಸಿದ್ದಾರೆ. ಗಿನ್ನೆಸ್ ದಾಖಲೆಯ ಅತಿ ದೊಡ್ಡ ಸೌಂದರ್ಯವಿರುವುದು ಇದರ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಾಮರಸ್ಯದಲ್ಲಿ, ಕೊಂಕಣಿ ಭಾಷಿಕರಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಎಂಬ ಮೂರೂ ಪ್ರಮುಖ ಧರ್ಮಗಳ ಜನರಿದ್ದಾರೆ. ಇಲ್ಲಿ ಧರ್ಮದ ಬೇಲಿಗಳಿಲ್ಲ, ಬದಲಿಗೆ ಕೊಂಕಣಿ ಕ್ರಿಶ್ಚಿಯನ್ನರು, ಗೌಡ ಸಾರಸ್ವತ ಬ್ರಾಹ್ಮಣರು ರಾಜಾಪುರ ಸಾರಸ್ವತ ಬ್ರಾಹ್ಮಣರು , ಕುಡಾಲ್ ದೇಶಸ್ಥರು, ಸಿರಿಯನ್ ಆರ್ಥೊಡಾಕ್ಸ್ ಕ್ರೈಸ್ತರು, ಖಾರ್ವಿಗಳು, ಕುಡ್ಮಿಗಳು, ಸಿದ್ದಿ ಜನಾಂಗದವರು, ನವಾಯತ್ ಮುಸ್ಲಿಮರು ಹಾಗೂ ದಾಲ್ದಿ ಮುಸ್ಲಿಮರು ಒಂದೇ ಮೈಕ್ ಮುಂದೆ ನಿಂತು ತಮ್ಮ ಭಾಷೆಯ ಹಾಡುಗಳನ್ನು ಹಾಡುತ್ತಿದ್ದಾರೆ. ತಂಡದ ಯುವ ಗಾಯಕಿ ಲೀಶಾ ಮಾತನಾಡಿ, ನಾವು ಜೂನ್ ತಿಂಗಳಿನಿಂದ ನವೆಂಬರ್ ಮೊದಲ ವಾರದವರೆಗೆ ಸತತವಾಗಿ ಪ್ರಾಕ್ಟೀಸ್ ಮಾಡಿದ್ದೇವೆ. ರಾಬಿನ್ ಅಂಕಲ್ ನಮಗೆ ಪ್ರತಿ ಭಾನುವಾರ ಅಭ್ಯಾಸ ಮಾಡಲು ಅಪಾರ ಪ್ರೋತ್ಸಾಹ ನೀಡಿದ್ದಾರೆ. ವೇದಿಕೆಯಲ್ಲಿ ಹಾಡಲು ಕೊಂಚ ಎದೆಬಡಿತ, ನಡುಕ ಇದ್ದರೂ ಕೂಡ, ನಾವು ಉತ್ತಮ ಪ್ರದರ್ಶನ ನೀಡುತ್ತೇವೆ ಎಂಬ ಅಚಲ ಆತ್ಮವಿಶ್ವಾಸವಿದೆ.

> 12 ಮಂದಿ ಹಿರಿಯ ಸಂಗೀತ ಸಾಧಕರಿಗೆ (ಮರಣೋತ್ತರ ಹಾಗೂ ಜೀವಿತಾವಧಿ) ಸನ್ಮಾನ, ಕೊಂಕಣಿ ಇತಿಹಾಸ ಸಾರುವ ಕೀರ್ತಿ ಮಂದಿರ ವಸ್ತುಪ್ರದರ್ಶನ ಹಾಗೂ ವೈವಿಧ್ಯಮಯ ತಿನಿಸುಗಳ ಮಳಿಗೆಗಳನ್ನೂ ವ್ಯವಸ್ಥೆಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು. -ಲೂಯಿಸ್ ಜೆ.ಪಿಂಟೊ

ಮಿನಿ ನ್ಯೂಸ್

ತೂಕದಲ್ಲಿ ವ್ಯತ್ಯಾಸ, ಬಂದೂಕವಾಲಾ ವೇ ಬ್ರಿಡ್ಜ್ ಸೀಜ್

• **ಉದಯವಾಹಿನಿ, ಕಲಬುರಗಿ,**

ವೇ ಬ್ರಿಡ್ಜ್ ತೂಕದಲ್ಲಿನ ವ್ಯತ್ಯಾಸದ ಆರೋಪದ ಹಿನ್ನೆಲೆಯಲ್ಲಿ ಕಲಬುರಗಿ ನಗರದ ಕಪನೂರ ಪ್ರದೇಶದಲ್ಲಿರುವ ಬಂದೂಕವಾಲಾ ವೇ ಬ್ರಿಡ್ಜ್ ಮೇಲೆ ಕಾನೂನು ಮಾಪನಶಾಸ್ತ್ರ ಅಧಿನಿಯಮ-2009ರ ಪ್ರಕಾರ ಮೊಕದ್ದಮೆ ಹೂಡಿ ವೇ- ಬ್ರಿಡ್ಜ್ ಸೀಜ್ ಮಾಡಲಾಗಿದೆ.

ಗುಲಬರ್ಗಾ ಲಾರಿ ಮಾಲೀಕರ ಸಂಘ (ರಿ) ಕಲಬುರಗಿ ರವರ ದೂರಿನ ಮೇರೆಗೆ ಕಾನೂನು ಮಾಪನ ಇಲಾಖೆಯ ಅಧಿಕಾರಿಗಳು ವಾಹನ ಕೇಂದ್ರ ಉಗ್ರಾಣ ಸಂಸ್ಥೆ ಕಲಬುರಗಿಯಲ್ಲಿ ಟೆಸ್ಟ್ ವೇಟ್ ಸಹಾಯದಿಂದ ತೂಕ ಮಾಡಿಸಿ, ತದನಂತರ ಸದರಿ ವಾಹನವನ್ನು ಮೆ.ಬಂದೂಕವಾಲಾ ವೇಯಿಂಗ್ ಸರ್ವಿಸ ವೇ- ಬ್ರೀಡ್ಜ್‌ನಲ್ಲಿ ತೂಕ ಮಾಡಿಸಿದಾಗ ತೂಕದಲ್ಲಿ 80-100 ಕೆ.ಜಿ ವ್ಯತ್ಯಾಸ ಕಂಡು ಬಂದಿದ್ದ ಹಿನ್ನೆಲೆಯಲ್ಲ ಸದರಿ ವೇ-ಬ್ರಿಡ್ಜ್ ಜಪ್ತಿ ಮಾಡಲಾಗಿದೆ ಎಂದು ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕರು ಗ್ರೇಡ್-1 ವರಫೀಕಸಾಬ ಲಾಡಜಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಗುಲಬರ್ಗಾ ಲಾರಿ ಮಾಲೀಕರ ಸಂಘ (ರಿ) ಗುಲಬರ್ಗಾ ಅಧ್ಯಕ್ಷ ಮೊಹ್ಮದ ಮೊಯಿನುದ್ದೀನ್, ಕಾರ್ಯದರ್ಶಿ ವಿ.ಆರ್ ಸ್ವಾಮಿ ಹಾಗೂ ಇತರ ಸದಸ್ಯರು ಮತ್ತು ವೇ-ಬ್ರೀಡ್ಜ್ ಮಾಲೀಕ ಅಯ್ಯುಬ್ ಬಂದೂಕವಾಲಾ ಸಹ ಇದ್ದರು.

ಎಸ್ಐಆರ್ ಪರ ಬಿಜೆಪಿಯಿಂದ ಪ್ರತಿಭಟನೆ ನ. 5ಕ್ಕೆ

• **ಉದಯವಾಹಿನಿ, ಶಿವಮೊಗ್ಗ:**



ಉದಯವಾಹಿನಿ ಚಿತ್ರ

'ಎಸ್ಐಆರ್ ಪ್ರಕ್ರಿಯೆ ವಿರುದ್ಧ ಕಾಂಗ್ರೆಸ್ ನಡೆಸಿರುವ ಅಪಪ್ರಚಾರದ ವಿರುದ್ಧ 'ಪ್ರಜಾಪ್ರಭುತ್ವ ಉಳಿಸಿ ಅರಾಜಕತೆ ಅಳಿಸಿ' ಹೆಸರಿನಲ್ಲಿ ನ. 5ರಂದು ಬೆಳಿಗ್ಗೆ 10ಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೇತೃತ್ವದಲ್ಲಿ ರಾಮಣ್ಣ ಶೆಷ್ಟಿ ಪಾರ್ಕ್‌ನಿಂದ ಅಲ್ಲಮ ಪ್ರಭು ಮೈದಾನದವರೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ಹೇಳಿದರು.

'ಕಾಂಗ್ರೆಸ್ ಪಕ್ಷಕ್ಕೆ ದೇಶ ಒಟ್ಟಾಗಿರುವುದು ಬೇಡ. ಅದು ಮೊದಲಿನಿಂದಲೂ ದೇಶವನ್ನು ಇಬ್ಭಾಗ ಮಾಡುವ ಕೆಲಸವನ್ನೇ ಮಾಡುತ್ತಿದೆ. ಈಗ ಎಸ್ ಐಆರ್ ಕುರಿತಂತೆ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ' ಎಂದು ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಈಗಾಗಲೇ ಇಡೀ ದೇಶದಲ್ಲಿ ಸೋತು ಸುಣ್ಣವಾಗಿರುವ ಕಾಂಗ್ರೆಸ್ ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಪ್ರೇರಣೆ ಆಗಿರುವ ಚುನಾವಣಾ ಪ್ರಕ್ರಿಯೆಯನ್ನೇ ಬುಡ ಮೇಲು ಮಾಡುತ್ತಿದೆ. ಚುನಾವಣಾ ಆಯೋಗಕ್ಕೆ ಗೌರವ ಕೊಡುವ ಬದಲು ಅಪಚಾರ ಮಾಡುತ್ತಿದೆ. ಇದು ನಂಬಿಕೆ ದ್ರೋಹದ ಕೆಲಸ' ಎಂದು ಟೀಕಿಸಿದರು. 'ದೇಶದಾದ್ಯಂತ ಎಸ್ಐಆರ್ ಪ್ರಕ್ರಿಯೆ ಅತ್ಯುತ್ತಮವಾಗಿ ನಡೆದಿದೆ. ಸತ್ತು ಹೋದವರು, ಊರು ಬಿಟ್ಟು ಹೋದವರನ್ನು ಪಟ್ಟಿಯಿಂದ ತೆಗೆಯಬಾರದೇ? ಎರಡು ಕಡೆ ಮತ ಪಟ್ಟಿಯಲ್ಲಿದ್ದವರನ್ನು ಕೈ ಬಿಡಬಾರದೇ?' ಎಂದು ಪ್ರಶ್ನಿಸಿದ ಅವರು, 'ಕಾಂಗ್ರೆಸ್ ತನ್ನ ಸೋಲು ಒಪ್ಪಿಕೊಳ್ಳುವುದು ಬಿಟ್ಟು ಅಪಪ್ರಚಾರದಲ್ಲಿ ತೊಡಗಿರುವುದು ದುಷ್ಟಹುನ್ನಾರವೇ ಸರಿ. ಕಾಂಗ್ರೆಸ್‌ನ ಈ ನಡೆ ಮೆಟ್ಟಿ ನಿಲ್ಲುತ್ತೇವೆ. ಜನರಿಗೆ ಸತ್ಯ ಸಂಗತಿ ತಿಳಿಸುತ್ತೇವೆ' ಎಂದರು.

ಹಿರಿಯರ ಭಾಷಾಭಿಮಾನ ಈ ತಲೆಮಾರಿಗೆ ಮಾದರಿ ಆಗಲಿ

• **ಉದಯವಾಹಿನಿ ಶಿವಮೊಗ್ಗ:**

'ಹಿರಿಯ ತಲೆಮಾರಿನಲ್ಲಿದ್ದ ಕನ್ನಡದ ಬಗೆಗಿನ ಅಭಿಮಾನ, ಭಾಷಾಪ್ರೇಮ ಮತ್ತು ಬದ್ಧತೆ ಇಂದಿನ ತಲೆಮಾರಿನಲ್ಲಿ ಕ್ಷೀಣಿಸುತ್ತಿರುವುದು ವಿಷಾದನೀಯ. ಕನ್ನಡವನ್ನು ಪ್ರೀತಿಸುವ ಸರ್ಕಾರಗಳು, ಜನಪ್ರತಿನಿಧಿಗಳು ಹಾಗೂ ಜನಸಾಮಾನ್ಯರ ಸಂಖ್ಯೆ ವಿರಳವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಕನ್ನಡಕ್ಕೆ ಕನ್ನಡಿಗರೇ ಹಿತಶತ್ರುಗಳಾಗುತ್ತಿದ್ದಾರೆಯೇ ಎಂಬ ಆತಂಕ ಮೂಡುತ್ತಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಡಿ. ಮಂಜುನಾಥ ಕಳವಳ ವ್ಯಕ್ತಪಡಿಸಿದರು. ನಗರದ ಸಾಹಿತ್ಯ ಗ್ರಾಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಹಾಗೂ ತಾಲ್ಲೂಕು ಸಮಿತಿಗಳ ಆಶ್ರಯದಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ ಜನಪದ ಮತ್ತು ಭಾವಗೀತೆಗಳ ವೃಂದಗಾಯನ ಸಂಭ್ರಮ ಹಾಗೂ ಕೆ.ಎಸ್. ಮಂಜಪ್ಪ ರಚನೆಯ 'ಕಟೀರು' ಕಾದಂಬರಿ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಮಕ್ಕಳ ಭಾಷಾ ಕಲಿಕೆಯಲ್ಲಿನ ಕೊರತೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಶಾಲೆಗಳು, ಶಿಕ್ಷಕರು ಹಾಗೂ ಪೋಷಕರು ಹೆಚ್ಚಿನ ಕಾಳಜಿ ವಹಿಸಬೇಕಿದೆ. ನಿರ್ಲಕ್ಷ್ಯ ಮುಂದುವರಿದರೆ ಭಾಷೆಯ ಭವಿಷ್ಯವೇ ಪ್ರಶ್ನಾರ್ಥಕವಾಗಲಿದೆ' ಎಂದು ಎಚ್ಚರಿಸಿದರು. 'ಕಟೀರು' ಕಾದಂಬರಿ ಬಿಡುಗಡೆ ಮಾಡಿದ ಹಿರಿಯ ಸಾಹಿತಿ ಶಾಂತಾರಾಮ ಪ್ರಭು ಮಾತನಾಡಿ, 'ಒಂದು ಕಾಲದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಹಿರಿಯ ಸಾಹಿತಿಗಳು ಹಾಗೂ ಸಾಹಿತ್ಯ ಬೋಧಕರು ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಶಿಷ್ಯ ಪರಂಪರೆ ಸಾಹಿತ್ಯದ ಜ್ಯೋತಿಯನ್ನು ಮುಂದುವರಿಸಿದೆ' ಎಂದರು. ಹಿರಿಯ ಸಾಹಿತಿ ಪ್ರೊ. ರಾಜೇಂದ್ರ ಚನ್ನಿ, 'ಗ್ರಾಮ ಒಂದನ್ನು ಕೇಂದ್ರವಾಗಿಟ್ಟುಕೊಂಡು ಗ್ರಾಮೀಣ ಸಮಾಜದ ಆತ್ಮೀಯತೆ, ಬದುಕಿನ ವೈವಿಧ್ಯ ಮತ್ತು ಮಾನವ ಸಂಬಂಧಗಳ ಆಳವನ್ನು ಕಾದಂಬರಿ ತೆರೆದಿಡುತ್ತದೆ.



ಉದಯವಾಹಿನಿ ಚಿತ್ರ

ಕನ್ನಡ ಭಾಷೆಯನ್ನು ನಾವು ನಿತ್ಯ ಸಂಭ್ರಮಿಸಬೇಕು

• **ಉದಯವಾಹಿನಿ ಲಕ್ಷ್ಮೇಶ್ವರ,:**

''ಕನ್ನಡ ಕೊರಳಿನ ಭಾಷೆಯಲ್ಲ, ಕರುಳಿನ ಭಾಷೆ.ಕನ್ನಡ ಭಾಷೆಯನ್ನು ನಾವು ನಿತ್ಯ ಸಂಭ್ರಮಿಸಬೇಕು. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸಕ್ಕೆ ಪುಲಿಗೆರೆಯ ನೀಡಿದ ಕೊಡುಗೆ ಅಪಾರ. ಪುಲಿಗೆರೆ ಆದಿಕವಿ ಪಂಪನ ನೆಲೆಬೀಡಾಗಿದ್ದು ಸಾಹಿತ್ಯ ಲೋಕಕ್ಕೆ ತಿರುಳುಗನ್ನಡ ಭಾಷೆಯನ್ನು ನೀಡಿದ ಹೆಮ್ಮೆ ಪುಲಿಗರಿಗೆ ಇದೆ ಎಂದು ಇಂತಹ ನೆಲದಲ್ಲಿ ಕನ್ನಡದ ಅಸ್ಮಿತೆಯ ಹಬ್ಬವನ್ನು ಈ ಕಾರ್ಯಕ್ರಮ ಅರ್ಥಪೂರ್ಣವಾಗಿಸಿದೆ'' ಎಂದು ಗದಗ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರಡಿ ಅಭಿಪ್ರಾಯಪಟ್ಟರು.

ಅವರು ಲಕ್ಷ್ಮೇಶ್ವರ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು, ದಿ ಯೂನಿಕ್ ಸ್ಕೂಲ್ ಲಕ್ಷ್ಮೇಶ್ವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ''ಕನ್ನಡ ನಾಡಿಗೆ ಪುಲಿಗೆರೆಯ ಕೊಡುಗೆ'' ಮಕ್ಕಳ ಚಿತ್ರಕಲಾ ಪ್ರದರ್ಶನ, ನಾಡು-ನುಡಿಗೆ ಗಾನ ನಮನ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮಗಳನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಬಹುಮಾನ ವಿತರಕರಾಗಿ ಭಾಗವಹಿಸಿ ಮಾತನಾಡಿದ ಶಿರಹಟ್ಟಿ ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಜ ಶೀಮಿಕೇರಿ''ಪುಲಿಗೆರೆಯ ಸುಮಾರು 2000 ವರ್ಷಗಳ ಶ್ರೇಷ್ಠ ಶ್ರೀಮಂತ ಇತಿಹಾಸ- ಪರಂಪರೆಯನ್ನು ನಮ್ಮೆಲ್ಲರ ಕಣ್ಣ ಮುಂದೆ ಕಟ್ಟುವಂತೆ ವಿಚಾರ ಸಂಕಿರಣದ ವಿಷಯ ಮಂಡನೆಯಾಯಿತು.ಇದಕ್ಕೆ ಪೂರಕವಾಗಿ ಮಕ್ಕಳ ಚಿತ್ರಕಲಾ ಪ್ರದರ್ಶನ ಮತ್ತು ಪುಲಿಗೆರೆಯ ಕುರಿತಾದ ನಾಡು ನುಡಿಗೆ ಗಾನ ನಮನದ ಮೂಲಕ ಕನ್ನಡದ ಕಂಪು ಇಂಪು ಕೇಳಿಬಂದಿತು.

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	12:00 ರಿಂದ 01:30
ಗುಳಿಕ ಕಾಲ	ಬೆಳಿಗ್ಗೆ	10:30 ರಿಂದ 12:00
ಯಮಗಂಡ ಕಾಲ	ಬೆಳಿಗ್ಗೆ	07:30 ರಿಂದ 09:00

ಮೇಷ ಸ್ನೇಹಿತರು ಮತ್ತು ಸಂಬಂಧಿಗಳು ಉಪಕಾರ ಮಾಡುತ್ತಾರೆ ಮತ್ತು ನೀವು ಅವರ ಸಂಗದಲ್ಲಿ ಸಾಕಷ್ಟು ಸಂತೋಷವಾಗಿರುವಿರಿ. ನಿಮ್ಮ ಪ್ರಿಯತಮೆ ಇಡೀ ದಿನ ನಿಮಗಾಗಿ ಪರಿತಪಿಸುತ್ತಾಳೆ. ಒಂದು ಅಚ್ಚರಿಯನ್ನು ಯೋಜಿಸಿ ಮತ್ತು ಇದನ್ನು ನಿಮ್ಮ ಜೀವನದ ಅತ್ಯಂತ ಸುಂದರ ದಿನವನ್ನಾಗಿ ಮಾಡಿ.

ವೃಷಭ ಪ್ರೀತಿ, ಭರವಸೆ, ನಂಬಿಕೆ, ಸಹಾನುಭೂತಿ, ಆಶಾವಾದ ಮತ್ತು ನಿಷ್ಠೆಗಳಂಥ ಧನಾತ್ಮಕ ಭಾವನೆಗಳನ್ನು ಗ್ರಹಿಸಲು ಮನಸ್ಸನ್ನು ಪ್ರೋತ್ಸಾಹಿಸಿ. ಒಮ್ಮೆ ಈ ಭಾವನೆಗಳು ಸಂಪೂರ್ಣವಾಗಿ ಹತೋಟಿಗೆ ತೆಗೆದುಕೊಂಡ ನಂತರ ಮನಸ್ಸು ತಾನಾಗಿಯೇ ಪ್ರತಿ ಪರಿಸ್ಥಿತಿಗೂ ಧನಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ.

ಮಿಥುನ ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು.

ಕಟಕ ನೀವು ಚೈತನ್ಯದಿಂದ ತುಂಬಿರುತ್ತೀರಿ ಮತ್ತು ಇಂದು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಬಹವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ. ನಿಮ್ಮ ಸಂಗಾತಿಯ ಆರೋಗ್ಯದ ಚಿಂತೆ ಉಂಟುಮಾಡಬಹುದು .

ಸಿಂಹ ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ. ಸಂಬಂಧಿಗಳು ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ. ಸ್ನೇಹಿತರೊಂದಿಗೆ ಹೊರಗೆ ಹೋದರೆ ತತ್ಕ್ಷಣದ ಪ್ರಣಯ ನಿಮಗೆ ದೊರಕಬಹುದು.

ಕನ್ಯಾ ನೀವು ಮನಸ್ಸಿನ ಸಮಸ್ಯೆಗಳನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ, ಜಾಣತನ ಸಭ್ಯತೆಯನ್ನು ಬಳಸಬೇಕಾಗುತ್ತದೆ. ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು. ಕುಟುಂಬದ ಪರಿಸ್ಥಿತಿ ಯೋಚಿಸುವ ಹಾಗೆ ಇರುವುದಿಲ್ಲ.

ತುಲಾ ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ. ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ. ಇಂದು ನೀವು ನಿಮ್ಮ ಸ್ನೇಹಿತನ ಅನುಪಸ್ಥಿತಿಯಲ್ಲಿ ಅವರ ಸುಗಂಧವನ್ನು ಅನುಭವಿಸುತ್ತೀರಿ.

ವೃಶ್ಚಿಕ ನಿಮ್ಮ ಸಕಾರಾತ್ಮಕ ದೃಷ್ಟಿಕೋನ ಮತ್ತು ಆತ್ಮವಿಶ್ವಾಸದಿಂದ ನಿಮ್ಮ ಸುತ್ತಲಿರುವ ಜನರನ್ನು ಪ್ರಭಾವಿಸಬಹುದಾದ ಸಾಧ್ಯತೆಗಳಿವೆ. ಇಂದು ನೀವು ಆಲ್ಕೊಹಾಲ್ಯುಕ್ತ ಮದ್ಯವನ್ನು ಸೇವಿಸಬಾರದು, ಮಾದಕತೆಯ ಸಂದರ್ಭದಲ್ಲಿ ನೀವು ಯಾವುದೇ ಬೆಲೆಬಾಳುವ ವಸ್ತುಗಳನ್ನು ಕಳೆದುಕೊಳ್ಳಬಹುದು.

ಧನಸ್ಸು ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ. ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು.

ಮಕರ ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ಒಂದು ವೈವಾಹಿಕ ಸಂಬಂಧವನ್ನು ಹೊಂದಲು ಒಳ್ಳೆಯ ಸಮಯ. ಪ್ರೇಮ ಧನಾತ್ಮಕ ಕಂಪನಗಳನ್ನು ತೋರಿಸುತ್ತದೆ ಹೊಸ ವಿಷಯಗಳನ್ನು ಕಲಿಯುವ ನಿಮ್ಮ ಯೋಗ್ಯತೆ ಗಮನಾರ್ಹವಾಗಿದೆ.

ಕುಂಭ ನಿಮ್ಮಿಂದ ಸ್ವಲ್ಪ ಉದಾಸೀನತೆಯೂ ಸಮಸ್ಯೆಯನ್ನು ಉಲ್ಬಣಗೊಳಿಸುವುದರಿಂದ ಸರಿಯಾದ ಸಲಹೆ ತೆಗೆದುಕೊಳ್ಳಿ. ಪ್ರಣಯ ಸಂಬಂಧದಲ್ಲಿ ನಿಮ್ಮನ್ನು ತಪ್ಪಾಗಿ ತಿಳಿದುಕೊಳ್ಳುವ ಸಾಧ್ಯತೆಯಿದೆ. ನೀವು ಬಹಳಷ್ಟು ಸಾಧಿಸುವ ಸಾಮರ್ಥ್ಯ ಹೊಂದಿದ್ದೀರಿ .

ಮೀನ ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ಇಂದು ಮನೆಯಲ್ಲಿ ಆತಂಕದ ಕ್ಷಣಗಳು ತರುತ್ತದೆ.

ಪಾಲ್ಗೊಳ್ಳುವಿಕೆಯೊಂದಿಗೆ ತಳಮಟ್ಟದಿಂದಲೇ ಯೋಜನೆಗಳ ರೂಪಿಸಿ

ಸ್ಥಳೀಯ ಜನರ ಅಗತ್ಯಗಳನ್ನು ಗುರುತಿಸಿ, ಅವರ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ ಯೋಜನೆಗಳನ್ನು ರೂಪಿಸಬೇಕು

• **ಉದಯವಾಹಿನಿ ಗದಗ,:**


ಉದಯವಾಹಿನಿ ಚಿತ್ರ

ಜನರ ಅಗತ್ಯಗಳು ಮತ್ತು ಆಶೋತ್ತರಗಳಿಗೆ ಅನುಗುಣವಾಗಿ ಜನರ ಪಾಲ್ಗೊಳ್ಳುವಿಕೆಯ ಮೂಲಕವೇ ಜನಪರ ಯೋಜನೆಗಳನ್ನು ರೂಪಿಸಬೇಕು. ಈ ಹಿಂದೆ ಮೇಲ್ಮಟ್ಟದಿಂದ ಕೆಳಹಂತದವರೆಗೆ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲಾಗುತ್ತಿತ್ತು. ಆದರೆ, ಇನ್ನು ಮುಂದೆ ಗ್ರಾಮ ಮತ್ತು ವಾರ್ಡ್ ಮಟ್ಟದಿಂದಲೇ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಮೂಲಕ

1 : ಪಾಲ್ಗೊಳ್ಳುವಿಕೆಗೆ ಆದ್ಯತೆ ನೀಡಿ
2 : ಜನರ ಅಭಿಪ್ರಾಯ ಸಂಗ್ರಹಿಸಿ
3 : ವಿಶೇಷ ಕಾಳಜಿ ವಹಿಸಬೇಕು

ನೈಜ ವಿಕೇಂದ್ರೀಕರಣಕ್ಕೆ ಆದ್ಯತೆ ನೀಡಲಾಗುವುದು ಎಂದು ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಭವನದಲ್ಲಿ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ ಆರ್ ಪಾಟೀಲ ಅವರ ನೇತೃತ್ವದಲ್ಲಿ ಜರುಗಿದ ಜನಪರ ಯೋಜನೆಗಳ ರೂಪಿಸುವಿಕೆ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದ ಕಾರ್ಯತಂತ್ರದ ಸಭೆಯಲ್ಲಿ ಅವರು ಮಾತನಾಡಿದರು.

ಸ್ಥಳೀಯ ಜನರ ಅಗತ್ಯಗಳನ್ನು ಗುರುತಿಸಿ, ಅವರ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ ಯೋಜನೆಗಳನ್ನು ರೂಪಿಸಬೇಕು. ಈ ಹಿಂದೆ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಘೋಷಿಸಿದಂತೆ ಮುಂದಿನ ದಿನಗಳಲ್ಲಿ ಜನರ ಅಭಿಪ್ರಾಯ ಹಾಗೂ ಅಗತ್ಯಗಳನ್ನು ಆಧರಿಸಿ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲಾಗುವುದು. ಮೀಸಲಾತಿ ವ್ಯವಸ್ಥೆಯಿಂದ ಸಮಾಜದ ಎಲ್ಲಾ ಸಮುದಾಯಗಳಿಗೂ ಅಧಿಕಾರದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯುತ್ತಿದೆ. ಆದರೆ, ಅಧಿಕಾರವನ್ನು ಸಮರ್ಪಕವಾಗಿ ಚಲಾಯಿಸಲು ಅಗತ್ಯವಾದ ಅವಕಾಶ ಮತ್ತು ಬೆಂಬಲವನ್ನು ವ್ಯವಸ್ಥೆ ಕಲ್ಪಿಸಬೇಕಿದೆ ಎಂದು ತಿಳಿಸಿದರು. ಯೋಜನಾ ಇಲಾಖೆ ನೀಡಿರುವ ಮಾರ್ಗಸೂಚಿಗಳ ಪ್ರಕಾರ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಲಾಗಿದೆ. ಅದರಂತೆ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ನಿಗದಿತ ಹಂತಗಳಲ್ಲಿ ಯೋಜನೆ ರೂಪಿಸುವ ಕಾರ್ಯವನ್ನು ಪೂರ್ಣಗೊಳಿಸಬೇಕು. ಗದಗ ಜಿಲ್ಲೆಯಲ್ಲಿ ಈ ಹಿಂದೆಯೂ ಸಚಿವರು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಯೋಜನೆಗಳ ರೂಪಿಸುವಿಕೆ ಕುರಿತು ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಈ ಪ್ರಕ್ರಿಯೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸಬೇಕು ಎಂದು ಸೂಚಿಸಿದರು. ಗ್ರಾಮ, ವಾರ್ಡ್, ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಜನರ ಅಭಿಪ್ರಾಯ ಸಂಗ್ರಹಿಸಿ ಅಗತ್ಯ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು. ಅಧಿಕಾರಿಗಳು ಈ ಪ್ರಕ್ರಿಯೆಯನ್ನು ಕೇವಲ ಆಡಳಿತಾತ್ಮಕ ಕಾರ್ಯವೆಂದು ಪರಿಗಣಿಸದೆ, ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಿ ಜವಾಬ್ದಾರಿಯಿಂದ ನಿರ್ವಹಿಸಬೇಕು. ಒಮ್ಮೆ ನಿಯಮಾನುಸಾರ ಯೋಜನೆ ಸಿದ್ಧಪಡಿಸಿ ಸಲ್ಲಿಸಿದ ನಂತರ ಅದರಲ್ಲಿ ಯಾರಿಂದಲೂ ಇಚ್ಛಾನುಸಾರ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಕಾನೂನುಬದ್ಧವಾಗಿ ರೂಪುಗೊಳ್ಳುವ ಈ ಯೋಜನೆಗಳ ಅನುಷ್ಠಾನದಲ್ಲಿ ಎಲ್ಲಾ ಅಧಿಕಾರಿಗಳು ವಿಶೇಷ ಕಾಳಜಿ ವಹಿಸಬೇಕು ಎಂದು ಹೇಳಿದರು.

ರಾಜ್ಯದಲ್ಲಿಯೇ ಗದಗ ಜಿಲ್ಲೆಯಿಂದ ಮೊದಲ ಬಾರಿಗೆ ಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ನಿಟ್ಟಿನಲ್ಲಿ ಗ್ರಾಮವಾರು ಆದ್ಯತಾ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಕಳೆದ ವರ್ಷಕ್ಕಿಂತಲೂ ಈ ವರ್ಷ ಹೆಚ್ಚು ಚುರುಕಾಗಿ ಕಾರ್ಯನಿರ್ವಹಿಸಿ, ವಾರ್ಡ್, ಗ್ರಾಮ, ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಭೆಗಳನ್ನು ಆಯೋಜಿಸಬೇಕು. ಜನರ ಅಗತ್ಯಗಳನ್ನು ಆಧರಿಸಿ ಕ್ರಿಯಾ ಯೋಜನೆ ಸಿದ್ಧಪಡಿಸಲು ಎಲ್ಲಾ ಹಂತದ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುಕುಲ್ ಜೈನ್ ಮಾತನಾಡಿ, ಸರ್ಕಾರದ ವಿಕೇಂದ್ರೀಕರಣ ಯೋಜನೆಯ ಆಶಯವನ್ನು ಅಧಿಕಾರಿಗಳು ಸಮರ್ಪಕವಾಗಿ ಅರ್ಥಮಾಡಿಕೊಳ್ಳಬೇಕು. ಯೋಜನೆಯ ಉದ್ದೇಶಕ್ಕೆ ಅನುಗುಣವಾಗಿ ಪರಿಣಾಮಕಾರಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸುವ ಬದ್ಧತೆಯನ್ನು ಅಧಿಕಾರಿಗಳು ಪ್ರದರ್ಶಿಸಬೇಕು.

> ವಿಕೇಂದ್ರೀಕರಣವು ಸ್ಥಳೀಯ ಆಡಳಿತದ ಮೂಲ ತತ್ವವಾಗಿದೆ. ಸ್ಥಳೀಯವಾಗಿ ಅಗತ್ಯವಿರುವ ಕಾಮಗಾರಿಗಳನ್ನು ಗುರುತಿಸಿ, ಅವುಗಳನ್ನು ಆದ್ಯತೆಯ ಮೇರೆಗೆ ಪಟ್ಟಿ ಮಾಡಿ ಅನುಷ್ಠಾನಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು. -ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್

> ಯೋಜನೆ ರೂಪಿಸುವ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ಸ್ಥಳೀಯ ಅಗತ್ಯಗಳು ಮತ್ತು ಜನರ ಅಭಿಪ್ರಾಯಗಳಿಗೆ ಆದ್ಯತೆ ನೀಡಿ ಯೋಜನೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. -ಮುಕುಲ್ ಜೈನ್

ಕಬ್ಬು ಬೆಳೆಗಾರರಿಗೆ ಸಿಹಿಸುದ್ದಿ ದೊರಕುವ ಸಾಧ್ಯತೆ

• **ಉದಯವಾಹಿನಿ ಮುದ್ದೇಬಿಹಾಳ :**



ಉದಯವಾಹಿನಿ ಚಿತ್ರ

ಕಳೆದ ಒಂದು ತಿಂಗಳಿಂದ ನಡೆದಿರುವ ಕಬ್ಬು ಬೆಳೆಗಾರರ ವಿವಿದ ಬೇಡಿಕೆಗಳ ಕುರಿತು ಆಗ್ರಹಿಸಿ ನಡೆಸಿರುವ ಹೋರಾಟಕ್ಕೆ ಇಂದು ಸಿಹಿಸುದ್ದಿ ದೊರಕುವ ಸಾಧ್ಯತೆ ಇದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ(ನಡಹಳ್ಳಿ) ತಿಳಿಸಿದ್ದಾರೆ. ಸಮೀಪದ ಹುಲ್ಲೂರ ಹತ್ತಿರವಿರುವ ಹೋರಾಟದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಕಬ್ಬಿಗೆ ಬೆಂಬಲ ನೀಡುವ ಕಾರ್ಖಾನೆ ಮಾಲಿಕರು ಕಬ್ಬು ಬೆಳೆಗಾರರೊಂದಿಗೆ ಸಭೆ ನಡೆಸಿದ್ದು ಒಂದೆರೆಡು ಕಡೆಯವರು ಒಪ್ಪಂದಕ್ಕೆ ಬಂದಿದ್ದಾರೆಂದು ಸಂಘದ ರಾಜ್ಯಾಧ್ಯಕ್ಷರು ನಮಗೆ ಮಾಹಿತಿ ನೀಡಿದ್ದಾರೆ ಮಂಗಳವಾರ ಬಹತೇಕ ಹೋರಾಟಕ್ಕೆ ಯಶಸ್ವಿ ದೊರೆಯುವ ನಿರೀಕ್ಷೆಯಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಬ್ಬು ಬೆಳೆಗಾರರು ಹುಲ್ಲೂರಿಗೆ ಆಗಮಿಸುವಂತೆ ಶಾಂತಗೌಡ ಪಾಟೀಲ ಅವರು ತಿಳಿಸಿದ್ದಾರೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನಿರ್ಲಕ್ಷ್ಯ ಭಾವನೆ ಹಾಗೂ ಮೊಂಡುತನದಿಂದ ಕಬ್ಬಿಗೆ ಬೆಂಬಲ ಬೆಲೆ ನೀಡಲು ಹಿಂದೇಟು ಹಾಕುತ್ತಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರ ಇವು ತಮ್ಮದೇ ಆದ ಮೀನಮೇಷ ಎಣಿಸುವ ಕಾರ್ಯ ಹುನ್ನ ನಡೆಸಿವೆ ಎಂದು ಹೇಳಿದ ಶಾಂತಗೌಡ ಅವರು ಹುಲ್ಲೂರ ಗ್ರಾಮದ ಹತ್ತಿರ ಮುದ್ದೇಬಿಹಾಳ, ಬಾಗಲಕೋಟ ಮಾರ್ಗ ನಡೆಯುತ್ತಿರುವ ಅನಿರ್ಧಿಷ್ಟಾವದಿ ಧರಣಿಯಲ್ಲಿ ಉಪಸ್ಥಿತರಿದ್ದು ಮಾತನಾಡುತ್ತಿದ್ದ ಅವರು ಬಿಜೆಪಿ ಕಾಂಗ್ರೆಸ್ ಸರ್ಕಾರದ ಮೇಲೆ ಒಬ್ಬರಿಗೊಬ್ಬರು ಬೆರಳು ಮಾಡುತ್ತಾ ರಾಜಕಾರಣ ಮಾಡುತ್ತಾ ಸಾಗಿದ್ದಾರೆ ರೈತರ ಕಬ್ಬು ಒಣಗುತ್ತಿದ್ದು ರೈತರಿಗೆ ನ್ಯಾಯ ಒದಗಿಸುವದನ್ನು ಚಿಂತಿಸದೇ ತಮ್ಮದೇ ಆದ ಕಾರ್ಯ ನಡೆಸಿರುವದು ಖಂಡನೀಯವಾಗಿದೆ.

> ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಕೇಂದ್ರದ ಸಚಿವ ಪ್ರಹ್ಲಾದ ಜೋಷಿ ಅವರು ಕಬ್ಬು ಬೆಳೆಗಾರರ ಕುರಿತು ಚಿಂತಿಸದೇ ತಮ್ಮದೇ ಆದ ಯಾವದೇ ಸಹಕಾರ ಮನೋಭಾವ ತೋರದೇ ಇರುವದು ಇದು ಭವಿಷ್ಯದಲ್ಲಿ ಅವರು ದೊಡ್ಡ ಬೆಲೆಯನ್ನು ಎತ್ತಬೇಕಾಗುತ್ತದೆ ಎಂದು ಶಾಂತಗೌಡ ಪಾಟೀಲ ಅವರು ಎಚ್ಚರಿಸಿದರು-.ಶಾಂತಗೌಡ

ಕವಿಗಳು ಕಟ್ಟಿದ ಕನ್ನಡ ನಾಡಿಗೆ ಕನ್ನಡಿಗರೇ ರಕ್ಷಣೆ

• **ಉದಯವಾಹಿನಿ ವಾಡಿ:**


ಉದಯವಾಹಿನಿ ಚಿತ್ರ

ಸಾಹಿತ್ಯ ಭಂಡಾರ ನೀಡುವ ಮೂಲಕ ಕನ್ನಡ ಭಾಷೆ, ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಕವಿಗಳ ಆಶಯಗಳನ್ನು ಕನ್ನಡಿಗರೇ ರಕ್ಷಣೆ ಮಾಡಬೇಕಿದೆ ಕಸಾಪ ಉಪಾಧ್ಯಕ್ಷ ಬಸವರಾಜ ಕೇಶ್ವಾರ ಹೇಳಿದರು.ಪಟ್ಟಣದ ಶ್ರೀ ಬಸವ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಕನ್ನಡ ಮಾತೃಭಾಷೆಯಾಗಿಸಿಕೊಂಡ ಹಲವು ಊರುಗಳು ಮದ್ರಾಸ್, ಮುಂಬೈ, ಹೈದರಾಬಾದ್ ರಾಜ್ಯಗಳಿಗೆ ಹಂಚಿಕೆಯಾಗಿದ್ದವು. ಕನ್ನಡಿಗರನ್ನು ಒಟ್ಟುಗೂಡಿಸಿ ಕರ್ನಾಟಕ ಏಕೀಕರಣ ಮಾಡಿದ ಹೋರಾಟಗಾರರನ್ನು ನಾವು ಸ್ಮರಿಸಬೇಕಿದೆ. ಕನ್ನಡ ಭಾಷೆ ಬಳಸಿದಷ್ಟು ಉಳಿಯುತ್ತದೆ ಎಂದರು.ಶಾಲೆಯ ಅಧ್ಯಕ್ಷ ಜಗದೀಶ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಸಿಪಿಐ ಶರಣಪ್ಪ ಮದ್ದಿನ್ ತಾಯಿ ಭುವನೇಶ್ವರಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಪ್ರಾಂಶುಪಾಲೆ ಕವಿತಾ ಪ್ರಕಾಶ ಪಾಟೀಲ್, ರಾಘವೇಂದ್ರ, ರಜನಿ ಪಾಟೀಲ್ ಸೇರಿದಂತೆ ಶಿಕ್ಷಕರು ಹಾಗೂ ಪೋಷಕರು, ನೂರಾರು ಜನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನ. 6ರವರೆಗೆ ರಾಜ್ಯದ ಹಲವು ಭಾಗಗಳಲ್ಲಿ ಮಳೆ ನಿರೀಕ್ಷೆ

• **ಉದಯವಾಹಿನಿ ಹುಬ್ಬಳ್ಳಿ:**

ಚಂಡಮಾರುತ 'ಮುರಸು' ಪ್ರಭಾವದಿಂದ ಬೆಂಗಳೂರು ಸೇರಿದಂತೆ ಕರ್ನಾಟಕದ ದಕ್ಷಿಣ ಒಳನಾಡು, ಮಲೆನಾಡಿನ ಕೆಲವು ಭಾಗಗಳು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ನವೆಂಬರ್ 6ರವರೆಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಂಡಮಾರುತ ಪರಿಣಾಮ ರಾಜ್ಯದ ಹಲವು ಭಾಗಗಳಲ್ಲಿ ನವೆಂಬರ್ 6ರವರೆಗೆ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಚಂಡಮಾರುತದಿಂದ ಉಂಟಾಗಿರುವ ಮಳೆಯಿಂದ ರಾಜ್ಯದಲ್ಲಿ ಮಳೆಯ ಕೊರತೆ ಪ್ರಮಾಣ ಕಡಿಮೆಯಾಗಲಿದೆ ಎಂದು ಐಎಂಡಿಯ ಹಿರಿಯ ವಿಜ್ಞಾನಿ ಸಿ.ಎಸ್. ಪಾಟೀಲ್ ತಿಳಿಸಿದ್ದಾರೆ.

ಬೆಳಗಾವಿಯ ಈ ಕುಗ್ರಾಮದ ಜನತೆ ಬದುಕಿನಲ್ಲಿ ಇನ್ನೂ ಕತ್ತಲು !

• **ಉದಯವಾಹಿನಿ ಬೆಳಗಾವಿ:**


ಉದಯವಾಹಿನಿ ಚಿತ್ರ

ಸ್ಮಾರ್ಟ್‌ಫೋನ್, ಇಂಟರ್ನೆಟ್ ಸಂಪರ್ಕ, ಟಿವಿ, ರಸ್ತೆ ಹೀಗೆ ಮೂಲಭೂತ ಸೌಕರ್ಯಗಳ ಜೊತೆಗೆ ಆಧುನಿಕ ಸೌಕರ್ಯ ಹೊಂದಿರುವ ಇಂದಿನ ಕಾಲದಲ್ಲಿ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಗೋಲ್ಯಾಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೂರದ ಗೌಳಿ ವಾಡಾ ಕುಗ್ರಾಮದ ಸುಮಾರು 175 ಜನರು ಇಂದಿಗೂ ಮೂಲಸೌಕರ್ಯಗಳಿಲ್ಲದೆ ಬದುಕು ಸಾಗಿಸುತ್ತಿದ್ದಾರೆ.

ಇಲ್ಲಿನ 20 ಕುಟುಂಬಗಳ ಬದುಕು ಪ್ರತಿದಿನವೂ ಹೋರಾಟದಿಂದ ಕೂಡಿದೆ. ವಿದ್ಯುತ್ ಇಲ್ಲ, ಮೊಬೈಲ್ ನೆಟ್‌ವರ್ಕ್ ಇಲ್ಲ, ಟಿವಿ ಸಂಪರ್ಕವಿಲ್ಲ. ಅಷ್ಟೇ ಅಲ್ಲ, ಹೊರ ಜಗತ್ತಿನೊಂದಿಗೆ ಸಂಪರ್ಕ ಕಲ್ಪಿಸುವ ಸುಸಜ್ಜಿತ ರಸ್ತೆಯೂ ಇಲ್ಲ. ಅರಣ್ಯ ಪ್ರದೇಶದಂಚಿನಲ್ಲಿರುವ ಈ ಕುಗ್ರಾಮಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಎಂಟು ದಶಕಗಳು ಕಳೆದರೂ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲ.

ಖಾನಾಪುರ ತಾಲ್ಲೂಕಿನ ಗೌಳಿ ವಾಡಾ ಕುಗ್ರಾಮಕ್ಕೆ ಕೆಸರುಮಯ ರಸ್ತೆಯಲ್ಲಿ ನಡೆದುಕೊಂಡು ಮನೆಗೆ ಮರಳುತ್ತಿರುವ ಶಾಲಾ ಮಕ್ಕಳು.ನಮ್ಮ ಸಮಸ್ಯೆಗಳನ್ನು ಪರಿಹರಿಸುವಂತೆ ಕೋರಿ ಸಾಧ್ಯವಾದ ಎಲ್ಲಾ ಅಧಿಕಾರಿಗಳನ್ನೂ ಭೇಟಿಯಾಗಿ ಮನವಿ ಸಲ್ಲಿಸಿದ್ದೇವೆ. ಆದರೆ, ಇದುವರೆಗೆ ಯಾರೊಬ್ಬರೂ ನಮ್ಮ ಮನವಿಗೆ ಸ್ಪಂದಿಸಿಲ್ಲ ಎಂದು ಅಳಲು ತೋಡಿಕೊಂಡಿದ್ದಾರೆ.

ಜನಪ್ರತಿನಿಧಿಗಳಿಗೂ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಹೇಳಿದ್ದಾರೆ. ಚುನಾವಣೆಗಳ ಸಂದರ್ಭದಲ್ಲಿ ನೀಡುವ ಭರವಸೆಗಳು ತಮ್ಮ ಬದುಕಿನಲ್ಲಿ ಯಾವುದೇ ಬದಲಾವಣೆ ತಂದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಗ್ರಾಮಸ್ಥರು ವಿದ್ಯುತ್ ಸೇರಿದಂತೆ ಮೂಲಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಖಾನಾಪುರ ತಹಶೀಲ್ದಾರ್ ಹಾಗೂ ಹೆಸ್ಕಾಂನ ಖಾನಾಪುರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸೇವೆಯಿಂದ ವಜಾಗೊಳಿಸಲು ವಿವಿಧ ಸಂಘಟನೆಗಳ ಆಗ್ರಹ

• **ಉದಯವಾಹಿನಿ ಕಾಳಗಿ:**



ಉದಯವಾಹಿನಿ ಚಿತ್ರ

ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ನವೆಂಬರ್ 1ರಂದು ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಂದೇ ಮಾತರಂ ಗೀತೆಯನ್ನು ಹಾಡದೇ ನಿರ್ಲಕ್ಷ್ಯ ತೋರಿದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಯನ್ನು ಕೂಡಲೇ ಸೇವೆಯಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಜೈ ಕರ್ನಾಟಕ ಯುವ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ತಹಶೀಲ್ದಾರರ ಮೂಲಕ ಕಲಬುರಗಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದರು.

ಕರ್ನಾಟಕ ರಾಜ್ಯೋತ್ಸವವನ್ನು ನವೆಂಬರ್ 1ರಂದು ರಾಜ್ಯದಾದ್ಯಂತ ಜಿಲ್ಲೆ, ನಗರ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಕನ್ನಡದ ಅಭಿಮಾನ ಮತ್ತು ಸಂಭ್ರಮದಿಂದ ಆಚರಿಸಲಾಗುತ್ತದೆ. ಇಂತಹ ಮಹತ್ವದ ಕಾರ್ಯಕ್ರಮವನ್ನು ಕಾಳಗಿ ಪಟ್ಟಣ ಪಂಚಾಯಿತಿಯಲ್ಲಿ ಆಯೋಜಿಸಿದ್ದರೂ, ಕಾರ್ಯಕ್ರಮದಲ್ಲಿ ವಂದೇ ಮಾತರಂ ಗೀತೆಯನ್ನು ಹಾಡದೇ ಇರುವುದು ರಾಷ್ಟ್ರಭಕ್ತಿ ಹಾಗೂ ಸರ್ಕಾರಿ ಕಾರ್ಯಕ್ರಮಗಳ ಮಹತ್ವವನ್ನು ಕಡೆಗಣಿಸಿದಂತಾಗಿದೆ ಎಂದು ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಮಹತ್ವದ ನಿರ್ಧಾರ ಹಾಗೂ ಮಾರ್ಗಸೂಚಿಗಳನ್ನು ಪಾಲಿಸುವಲ್ಲಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಅಗತ್ಯ ಶಿಷ್ಟಾಚಾರ ಪಾಲಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಹೀಗಾಗಿ ಈ ಘಟನೆಗೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸಿ, ಬೇಜವಾಬ್ದಾರಿ ತೋರಿದ ಮುಖ್ಯಾಧಿಕಾರಿಯನ್ನು ಕೂಡಲೇ ಅಮಾನತುಗೊಳಿಸಿ, ಸೇವೆಯಿಂದ ವಜಾಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು.

ಹೂಡಿಕೆದಾರರಿಗೆ 11.46 ಕೋಟಿ ಪಂಗನಾಮ; ಪ್ರಕರಣ ದಾಖಲು..!

• **ಉದಯವಾಹಿನಿ ಶಿವಮೊಗ್ಗ:**

ತಿಂಗಳಿಗೆ ಲಕ್ಷ ಲಕ್ಷ ಲಾಭದ ಆಮಿಷ ಒಡ್ಡಿ ಹೂಡಿಕೆದಾರರಿಗೆ ಬರೋಬ್ಬರಿ 11.46 ಕೋಟಿ ರೂಪಾಯಿ ವಂಚಿಸಿರುವ ಘಟನೆ ಶಿವಮೊಗ್ಗದಲ್ಲಿ ಬೆಳಕಿಗೆ ಬಂದಿದೆ ಖಾಸಗಿ ಕಂಪನಿಯೊಂದರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಲೂಟಿ ಮಾಡಿದ ಮಂಜುಳಾ ಮತ್ತು ಆಕೆಯ ಪತಿ ಅಭಿಲಾಷ್ ಎನ್.ಎಂ. ಎಂಬ ದಂಪತಿ ವಿರುದ್ಧ ಶಿವಮೊಗ್ಗದ ತುಂಗಾನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿತ ದಂಪತಿಗಳು ಪ್ರತಿ ರೂ.25 ಲಕ್ಷ ಹೂಡಿಕೆಗೆ ತಿಂಗಳಿಗೆ ರೂ.1.25 ಲಕ್ಷ ಲಾಭ ನೀಡುವುದಾಗಿ ಆಮಿಷವೊಡ್ಡಿದ್ದರು ಎನ್ನಲಾಗಿದೆ. ವೈಯಕ್ತಿಕ ಸಂಪರ್ಕಗಳ ಮೂಲಕ ಜನರನ್ನು ಸಂಪರ್ಕಿಸಿ, ವರ್ಕ್‌ನಾಕ್ಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಹಣ ಹೂಡಿಕೆ ಮಾಡುವಂತೆ ಮನವೊಲಿಸಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ. ಎಫ್‌ಐಆರ್ ಪ್ರಕಾರ, ಭದ್ರಾವತಿಯ ವೈದ್ಯಕೀಯ ಮಳಿಗೆ ಮಾಲೀಕ ಶಶಿಧರ ಬಿ.ಎಂ. ಅವರಿಗೆ ಸುಮಾರು ಒಂದು ವರ್ಷದ ಹಿಂದೆ ದಂಪತಿಯ ಪರಿಚಯವಾಗಿತ್ತು. ದಂಪತಿ ಆಗಾಗ್ಗೆ ಅವರ ವೈದ್ಯಕೀಯ ಮಳಿಗೆಗೆ ಭೇಟಿ ನೀಡಿ, ಹೂಡಿಕೆ ಅವಕಾಶಗಳ ಬಗ್ಗೆ ಮಾತನಾಡುತ್ತಿದ್ದರು.

ಮನೆ ಮನಗಳಲ್ಲಿ ಕನ್ನಡ ಮೊಳಗಲಿ: ವಿರೇಶ ಸಜ್ಜನ್

• **ಉದಯವಾಹಿನಿ ಸೈದಾಪುರ:**


ಉದಯವಾಹಿನಿ ಚಿತ್ರ

ಪಟ್ಟಣ ಸೇರಿದಂತೆ ವಿವಿಧೆಡೆ 71ನೇ ಕರ್ನಾಟಕ ರಾಜ್ಯೋತ್ಸವವನ್ನು ಸಂಭ್ರಮ, ಸಡಗರದಿಂದ ಆಚರಿಸಲಾಯಿತು. ಕನ್ನಡದ ಕಂಪು ಎಲ್ಲೆಡೆ ಪಸರಿಸುವಂತೆ ಧ್ವಜಾರೋಹಣ, ಕನ್ನಡ ಪುಸ್ತಕ ವಿತರಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕನ್ನಡಾಭಿಮಾನ ಮೆರೆದರು.ಮನೆ ಮನಗಳಲ್ಲಿ ಕನ್ನಡ ಮೊಳಗಲಿ ಪಟ್ಟಣದಲ್ಲಿ ಕರ್ನಾಟಕ ಸೇನೆಯ ವತಿಯಿಂದ ರಾಜ್ಯೋತ್ಸವದ ಅಂಗವಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳು ಸೇರಿದಂತೆ ನಾಡಿನ ಹೆಸರಾಂತ ಕನ್ನಡ ಕವಿಗಳ ಪುಸ್ತಕಗಳನ್ನು ವಿತರಿಸಲಾಯಿತು. ಕರ್ನಾಟಕ ಸೇನೆಯ ತಾಲ್ಲೂಕಾಧ್ಯಕ್ಷ ವಿರೇಶ ಸಜ್ಜನ್ ಮಾತನಾಡಿ, ಮಕ್ಕಳಲ್ಲಿ ಕನ್ನಡ ಭಾಷೆಯ ಬಗ್ಗೆ ಆತ್ಮೀಯತೆ ಮತ್ತು ಅಭಿಮಾನ ಬೆಳೆಸಲು ಪುಸ್ತಕ ಓದುವ ಹವ್ಯಾಸ ರೂಢಿಸಬೇಕು. ಕನ್ನಡ ಶಾಲೆಗಳ ಉಳಿವು ಮತ್ತು ಬೆಳವಣಿಗೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವುದರ ಜತೆಗೆ ನಾಡಿನ ನೆಲ, ಜಲ, ಪ್ರಕೃತಿ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಜೆಡಿಎಸ್ ಸಭೆಯಲ್ಲಿ ಆಕ್ರೋಶ

• **ಉದಯವಾಹಿನಿ ಕೊಟ್ಟೂರು::**


ಉದಯವಾಹಿನಿ ಚಿತ್ರ

ಪಕ್ಷ ಸಂಘಟನೆಗೆ ಕಾರ್ಯಕರ್ತರೇ ಬಲ, ಶಾಸಕ ನೇಮಿರಾಜ್ ನಾಯ್ಕ ಕಾರ್ಯಕರ್ತರೊಂದಿಗೆ ಸಮನ್ವಯತೆಯನ್ನು ಕಾಪಾಡಿ ಕೊಳ್ಳಬೇಕೆಂದು ಜೆಡಿಎಸ್ ಕಾರ್ಯಕರ್ತರು ಒತ್ತಾಯಿಸಿದರು ಪಟ್ಟಣದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಮೃತ್ಯುಂಜಯ ಬಾದಾಮಿ ಅಧ್ಯಕ್ಷತೆಯಲ್ಲಿ ನಡೆದ ಪಕ್ಷ ಸಂಘಟನಾ ಸಭೆ ಗೊಂದಲದ ಗೂಡಾಗಿ ಪರಿವರ್ತನೆಗೊಂಡಿತು.

ಕಾರ್ಯಕರ್ತರಿಲ್ಲದೆ ಪಕ್ಷ ಸಂಘಟನೆ ಸಾಧ್ಯವಿಲ್ಲ. ಆದರೆ ಪಕ್ಷದ ಕಾರ್ಯಕರ್ತರನ್ನು ಶಾಸಕ ನೇಮಿರಾಜ್ ನಾಯ್ಕ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ಅಸಮಾಧಾನ ಸಭೆಯಲ್ಲಿ ವ್ಯಕ್ತವಾಯಿತು. ಸಭೆಯಲ್ಲಿ ಜೆಡಿಎಸ್ ಪಕ್ಷದ ಸಂಘಟನೆ, ಕಾರ್ಯಕರ್ತರ ಪಾತ್ರ, ಹಾಗೂ ಶಾಸಕರ ಕಾರ್ಯವೈಖರಿ ಕುರಿತು ಅಸಮಾಧಾನ ಸ್ಫೋಟಗೊಂಡು ಕಾರ್ಯಕರ್ತರು ತಮ್ಮ ಅಳಲು ಮತ್ತು ನೋವನ್ನು ಬಹಿರಂಗ ಪಡಿಸಿದರು.

ಚುನಾವಣೆಯ ಸಂದರ್ಭದಲ್ಲಿ ಪಕ್ಷಕ್ಕಾಗಿ ಹಗಲಿರುಳು ಶ್ರಮಿಸುವ ಕಾರ್ಯಕರ್ತರನ್ನು ಶಾಸಕರು ಕಡೆಗಣಿಸುತ್ತಿರುವುದಲ್ಲದೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿರುವುದು ಜೆಡಿಎಸ್ ಬಲ ಕುಗ್ಗಲು ಕಾರಣವಾಗಬಹುದು ಎಂಬ ಪರೋಕ್ಷವಾಗಿ ಎಚ್ಚರಿಕೆಯನ್ನು ರವಾನಿಸಿದರು.

ಪಕ್ಷದ ಸಂಘಟನೆ ಬಲಗೊಳ್ಳಬೇಕಾದರೆ ತಳಮಟ್ಟದ ಕಾರ್ಯಕರ್ತರಿಗೆ ಗೌರವ ನೀಡಬೇಕು. ಅವರ ಅಭಿಪ್ರಾಯಗಳನ್ನು ಆಲಿಸಿ, ಪಕ್ಷದ ಪ್ರಮುಖ ನಿರ್ಧಾರಗಳಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಕಾರ್ಯಕರ್ತರು ಒತ್ತಾಯಿಸಿದರು.ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ

ಬಲಪಡಿಸಲು ಕಾರ್ಯಕರ್ತರ ಒಗ್ಗಟ್ಟು ಮತ್ತು ಮುಖಂಡರ ಸಹಕಾರ ಅಗತ್ಯವಾಗಿದ್ದು, ಕಾರ್ಯಕರ್ತರ ಅಸಮಾಧಾನವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಸಭೆಯಲ್ಲಿ ಆಗ್ರಹಪಡಿಸಲಾಯಿತು. ಜೆಡಿಎಸ್ ಮುಖಂಡ ಸುಧಾಕರ ಪಾಟೇಲ್ ಮಾತನಾಡಿ ನಾವು ಮೂಲತಃ ಕಾಂಗ್ರೆಸ್ ನವರು ಭೀಮನಾಯ್ಕ ರವರ ದುರಾಡಳಿದಿಂದ ಬೇಸತ್ತು ಜೆಡಿಎಸ್ ಗೆ ಬೆಂಬಲಿಸಿ ನೇಮಿರಾಜ್ ನಾಯ್ಕರನ್ನು ಗೆಲ್ಲಿಸಿದೆವು. ಇವರೂ ಸಹಾ ಮುಖಂಡರನ್ನು ಕಾರ್ಯಕರ್ತರನ್ನು ಕಡೆಗಣಿಸುತ್ತಿದ್ದು ಇದರ ಪ್ರತಿಫಲವನ್ನು ನೇಮಿರಾಜ್ ನಾಯ್ಕ ಉಣ್ಣಲಿದ್ದಾರೆ ಎಂದು ನೇರವಾಗಿ ಹೇಳಿದರು.

ಯತ್ನಾಳರ ರೈತಪರ ಹೋರಾಟ 'ಅನುಕೂಲಸಿಂಧು' ರಾಜಕಾರಣ

• **ಉದಯವಾಹಿನಿ ವಿಜಯಪುರ, :**

ಈ ಹಿಂದೆ ಕಬ್ಬು ಬೆಳೆಗಾರರ ಹೋರಾಟದ ಸಂದರ್ಭದಲ್ಲಿ 'ಕಾರ್ಖಾನೆಗಳನ್ನೇ ನೀವೇ ನಡೆಸಿ' ಎಂದು ದರ್ಪದಿಂದ ಮಾತನಾಡಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಇದೀಗ ರೈತಪರ ಕಾಳಜಿ ನೆನಪಾಗಿದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ನಗರಸಭೆ ಮಾಜಿ ಅಧ್ಯಕ್ಷ ಪರಶುರಾಮಸಿಂಗ್ ರಜಪೂತ ಟೀಕಿಸಿದ್ದಾರೆ.

ಹಿಂದೆ ರೈತರ ಕುರಿತು ಅಗೌರವದ ಮಾತುಗಳನ್ನಾಡಿದ್ದ ಯತ್ನಾಳರು ಇದೀಗ ಕಬ್ಬು ಬೆಳೆಗಾರರ ಹೋರಾಟಕ್ಕೆ ಬೆಂಬಲ ನೀಡುತ್ತಿರುವುದು ನಾಟಕದಂತಿದೆ ಎಂದು ಆರೋಪಿಸಿದ್ದಾರೆ. ನಿಜವಾಗಿಯೂ ರೈತರ ಬಗ್ಗೆ ಕಾಳಜಿ ಇದ್ದರೆ, ತಮ್ಮ ಸಾರಥ್ಯದ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಬೆಳೆಗಾರರ ಬೇಡಿಕೆಯ ಹಣವನ್ನು ಪಾವತಿಸಿ ತಮ್ಮ ಬದ್ಧತೆಯನ್ನು ಸಾಬೀತುಪಡಿಸಲಿ ಎಂದು ಸವಾಲು ಹಾಕಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಬಗ್ಗೆಯೂ ಯತ್ನಾಳರು ಅಗೌರವದಿಂದ ಮಾತನಾಡಿರುವುದು ಸರಿಯಲ್ಲ. 'ನೀವು ತುಪ್ಪ ತಿನ್ನುವವರು, ರೈತರ ಮೂಗಿಗೆ ತುಪ್ಪ ಹಚ್ಚಬೇಡಿ' ಎಂಬ ರೀತಿಯಲ್ಲಿ ಮಾತನಾಡುವುದು ಅವರ ಸ್ಥಾನಮಾನಕ್ಕೆ ತಕ್ಕದ್ದಲ್ಲ ಎಂದು ಅವರು ಟೀಕಿಸಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ದೇಶ ಕಂಡ ಶ್ರೇಷ್ಠ ರಾಜಕಾರಣಿಗಳಲ್ಲಿ ಒಬ್ಬರು. ಪ್ರಧಾನಿ ನರೇಂದ್ರ ಮೋದಿ ಅವರು ದೇವೇಗೌಡರನ್ನು ಅತ್ಯಂತ ಗೌರವದಿಂದ ಕಾಣುತ್ತಾರೆ. ಅಂತಹ ಹಿರಿಯ ರಾಜಕಾರಣಿಯ ವಿರುದ್ಧವೂ ಯತ್ನಾಳರು ಅವಹೇಳನಕಾರಿ ಪದಗಳನ್ನು ಬಳಸಿರುವುದು ಖಂಡನೀಯ ಎಂದಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ, ಆರೋಪ

ಸರ್ಕಾರದ ನಿಯಮಗಳ ಪ್ರಕಾರ ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆಗಳು ಸಂಬಂಧಪಟ್ಟ ಕಾಯ್ದೆಯಡಿ ಕಡ್ಡಾಯ ನೋಂದಣಿ ಹೊಂದಿರಬೇಕು

• **ಉದಯವಾಹಿನಿ ಯಾದಗಿರಿ:**



ಸರ್ಕಾರಿ ಗುತ್ತಿಗೆಗಳನ್ನು ನೀಡುವ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಗಾಳಿಗೆ ತೂರಿ, ಅಗತ್ಯ ಅರ್ಹತೆ ಹಾಗೂ ನೋಂದಣಿ ಹೊಂದಿರದ ಸಂಸ್ಥೆಗಳಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಕಾಮಗಾರಿಗಳನ್ನು ವಹಿಸಿಕೊಡಲು ಅಧಿಕಾರಿಗಳು ಮುಂದಾಗಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

1 : ಶಾರ್ಪ್ ವಾಚ್ ಇನ್ವೆಸ್ಟಿಗೇಷನ್ ಸರ್ವಿಸಸ್
2 : ಸೆಕ್ಯುರಿಟಿ ಮತ್ತು ಹೌಸ್ ಕೀಪಿಂಗ್ ಸೇವೆಗಳ
3 : ನೋಟ್ ನಾಶಪಡಿಸಿ ದಾಖಲೆಗಳಲ್ಲಿ ತಿದ್ದುಪಡಿ

ಸರ್ಕಾರದ ನಿಯಮಗಳ ಪ್ರಕಾರ ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆಗಳು ಸಂಬಂಧಪಟ್ಟ ಕಾಯ್ದೆಯಡಿ ಕಡ್ಡಾಯ ನೋಂದಣಿ ಹೊಂದಿರಬೇಕು. ಅದರಲ್ಲೂ ಮಾನವ ಸಂಪನ್ಮೂಲ ಪೂರೈಕೆಗೆ ಸಂಬಂಧಿಸಿದ ಗುತ್ತಿಗೆ ಪಡೆಯುವ ಸಂಸ್ಥೆಯು ಮ್ಯಾನ್ ಪವರ್ ಸಪ್ಲೈಗೆ ಅಗತ್ಯವಾದ ನೋಂದಣಿ ಮತ್ತು ಅರ್ಹತಾ ದಾಖಲೆಗಳನ್ನು ಹೊಂದಿರಬೇಕು. ಆದರೆ, ಸಮಾಜ ಕಲ್ಯಾಣ ಇಲಾಖೆಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಶಾರ್ಪ್ ವಾಚ್ ಇನ್ವೆಸ್ಟಿಗೇಷನ್ ಸರ್ವಿಸಸ್ ಸಂಸ್ಥೆಯ ದಾಖಲೆಗಳಲ್ಲಿ ಸೆಕ್ಯುರಿಟಿ ಮತ್ತು ಹೌಸ್ ಕೀಪಿಂಗ್ ಸೇವೆಗಳ ವಿವರಗಳಷ್ಟೇ ಇದ್ದು, ಕಡ್ಡಾಯ ಮ್ಯಾನ್ ಪವರ್ ಸಪ್ಲೈ ನೋಂದಣಿ ಇಲ್ಲ ಎಂಬ ಆರೋಪವನ್ನು ನಾಯಕರು ಮಾಡಿದ್ದಾರೆ.

ಅಗತ್ಯ ಅರ್ಹತೆ ಇಲ್ಲದ ಸಂಸ್ಥೆಯನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಪರಿಗಣಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಸಾರ್ವಜನಿಕರ ತೆರಿಗೆ ಹಣದಿಂದ ನಡೆಯುವ ಸರ್ಕಾರಿ ಗುತ್ತಿಗೆಗಳಲ್ಲಿ ಇಂತಹ ಲೋಪಗಳಿಗೆ ಅವಕಾಶ ನೀಡುತ್ತಿರುವುದು ಆಡಳಿತ ವ್ಯವಸ್ಥೆಯ ಪಾರದರ್ಶಕತೆಯನ್ನೇ ಪ್ರಶ್ನಿಸುವಂತಾಗಿದೆ.

ಇನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ನಕಲಿ ದಾಖಲೆಗಳನ್ನು ಪರಿಗಣಿಸಲಾಗಿದೆ. ಸರ್ಕಾರಿ ಕಡತಗಳಲ್ಲಿದ್ದ ಟಿಪ್ಪಣಿ ಹಾಳೆಗಳು ಹಾಗೂ ನೋಟ್ ಶೀಟ್‌ಗಳನ್ನು ನಾಶಪಡಿಸಿ, ದಾಖಲೆಗಳಲ್ಲಿ ತಿದ್ದುಪಡಿ ಮಾಡಲಾಗಿದೆ ಎಂಬ ಗಂಭೀರ ವಿಚಾರ ಜಿಲ್ಲಾ ಪಂಚಾಯಿತಿಯ ಅಧಿಕೃತ ತನಿಖಾ ವರದಿಯಲ್ಲಿ ಬಹಿರಂಗವಾಗಿದೆ ಎಂದು ನಾಯಕರು ತಿಳಿಸಿದ್ದಾರೆ.

ಕೋಟ್ಯಂತರ ರೂಪಾಯಿ ಸಾರ್ವಜನಿಕ ಹಣದ ವಹಿವಾಟು ಒಳಗೊಂಡಿರುವ ಟೆಂಡರ್ ಕಡತದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿಗಳ ಕಡ್ಡಾಯ ಅನುಮೋದನೆ ಹಾಗೂ ಸಹಿ ಇರಬೇಕಾಗಿದ್ದರೂ, ಸಂಬಂಧಪಟ್ಟ ದಾಖಲೆಗಳಲ್ಲಿ ಸಹಿ ಇಲ್ಲದಿರುವುದು ಮತ್ತೊಂದು ಪ್ರಮುಖ ಲೋಪವಾಗಿದೆ ಎಂದು ಆರೋಪಿಸಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳ ಹಿಂದೆ ಅಧಿಕಾರಿಗಳ ಅಧಿಕಾರ ದುರುಪಯೋಗ, ಕೆಲ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಹಾಗೂ ಸ್ವಜನಪಕ್ಷಪಾತದ ಶಂಕೆ ವ್ಯಕ್ತವಾಗಿದೆ. ಸರ್ಕಾರಿ ಟೆಂಡರ್‌ಗಳು ಅರ್ಹ ಸಂಸ್ಥೆಗಳಿಗೆ ಪಾರದರ್ಶಕವಾಗಿ ದೊರೆಯಬೇಕೇ ಹೊರತು, ನಿಯಮಗಳನ್ನು ಉಲ್ಲಂಘಿಸಿ ಆಯ್ದ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆಯಾಗಬಾರದು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣ ಅಮಾನತುಗೊಳಿಸಬೇಕು. ಟೆಂಡರ್ ಪ್ರಕ್ರಿಯೆಯ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಿ, ಕಡತ ನಾಶ ಹಾಗೂ ದಾಖಲೆ ತಿದ್ದುಪಡಿ ಆರೋಪಗಳ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕೆಆರ್‌ಎಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ನಿಜಲಿಂಗಪ್ಪ ಪೂಜಾರಿ, ಅಲ್ಪಸಂಖ್ಯಾತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ರಫೀಕ್, ಯುವ ಘಟಕದ ಜಿಲ್ಲಾಧ್ಯಕ್ಷ ಚಾಂದ್‌ಪಾಶಾ ಮನಗನಾಳ ಹಾಗೂ ತಾಲ್ಲೂಕು ಅಧ್ಯಕ್ಷ ತಾಯಪ್ಪ ಉಪಸ್ಥಿತರಿದ್ದರು.

> ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಹಾಗೂ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳ ಪಾತ್ರದ ಕುರಿತು ಸಮಗ್ರ ತನಿಖೆ ನಡೆಸುವಂತೆ ಈಗಾಗಲೇ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಕರ್ನಾಟಕ ಲೋಕಾಯುಕ್ತರಿಗೆ ದಾಖಲೆ ಸಹಿತ ದೂರು ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ. -ನಾಯಕರು

> ಸಾರ್ವಜನಿಕ ಹಣದ ದುರುಪಯೋಗಕ್ಕೆ ಅವಕಾಶ ನೀಡಬಾರದು. ಜಿಲ್ಲಾಡಳಿತ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.